- **ಕನ್ನಡ ವರ್ಣಮಾಲೆ :**

**ಕನ್ನಡ ವರ್ಣಮಾಲೆಯಲ್ಲಿ ಒಟ್ಟು 49 ಅಕ್ಷರಗಳಿವೆ. ಅವುಗಳನ್ನು ಸ್ವರಗಳು, ವ್ಯಂಜನಗಳು ಹಾಗೂ ಯೋಗವಾಹಗಳೆಂದು 3 ವಿಧಗಳಾಗಿ ವಿಂಗಡಿಸಬಹುದು.**

**ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ ಅಂ ಅಃ**

**ಕ ಖ ಗ ಘ ಙ**

**ಚ ಛ ಜ ಝ ಞ**

**ಟ ಠ ಡ ಢ ಣ**

**ತ ಥ ದ ಧ ನ**

**ಪ ಫ ಬ ಭ ಮ**

**ಯ ರ ಲ ವ ಶ ಷ ಸ ಹ ಳ**

- **ಸ್ವರಗಳು**

**ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಸ್ವರಗಳು ಎಂದು ಕರೆಯುವರು.ಕನ್ನಡದಲ್ಲಿ ಒಟ್ಟು13 ಸ್ವರಗಳಿವೆ.**

**ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ**

**ಸ್ವರಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ : 1) ಹ್ರಸ್ವಸ್ವರ 2) ಧೀರ್ಘಸ್ವರ**

- **ಹ್ರಸ್ವಸ್ವರ :**

**ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಹ್ರಸ್ವಸ್ವರ ಎನ್ನುವರು.**
**ಕನ್ನಡದಲ್ಲಿ ಒಟ್ಟು 6 ಹ್ರಸ್ವ ಸ್ವರಗಳಿವೆ.**

**ಅ ಇ ಉ ಋ ಎ ಒ**

- **ಧೀರ್ಘಸ್ವರ :**

**ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಧೀರ್ಘಸ್ವರ ಎನ್ನುವರು.**
**ಕನ್ನಡದಲ್ಲಿ ಒಟ್ಟು 7 ಧೀರ್ಘಸ್ವರಗಳಿವೆ**

**ಆ ಈ ಊ ಏ ಐ ಓ ಔ**

- **ವ್ಯಂಜನಗಳು :**

**ಸ್ವರಗಳ ಸಹಾಯದಿಂದ ಮಾತ್ರ ಉಚ್ಚರಿಸಲ್ಪಡುವ ಅಕ್ಷರಗಳಿಗೆ ವ್ಯಂಜನಗಳು ಎನ್ನುವರು.**
**ಕನ್ನಡದಲ್ಲಿ ಒಟ್ಟು 34 ವ್ಯಂಜನಗಳು ಇವೆ**

**ಕ್. ಖ್, ಗ್, ಘ್, ಙ್,**

**ಚ್, ಛ್, ಜ, ಝ್, ಞ್,**

**ಟ್, ಠ್, ಡ್, ಢ್, ಣ್**

**ತ್, ಥ್, ದ್, ಧ್, ನ್**

**ಪ್, ಫ್, ಬ್, ಭ್, ಮ್.**

**ಯ್, ರ್, ಲ್, ವ್, ಶ್, ಷ್, ಸ, ಹ್, ಳ್**

ವ್ಯಂಜನಗಳಲ್ಲಿ ಒಟ್ಟು ಎರಡು ವಿಧಗಳಿವೆ 1) ವರ್ಗೀಯ ವ್ಯಂಜನ 2) ಅವರ್ಗೀಯ ವ್ಯಂಜನ

- **ವರ್ಗಿಯ ವ್ಯಂಜನಗಳು:**

  ವರ್ಗ (ಗುಂಪು) ಮಾಡಲು ಬರುವಂತಹ ವ್ಯಂಜನಗಳಿಗೆ ವರ್ಗಿಯ ವ್ಯಂಜನಗಳು ಎನ್ನುವರು.

  ವರ್ಗಿಯ ವ್ಯಂಜನಗಳು ಒಟ್ಟು 25

  ವರ್ಗೀಯ ವ್ಯಂಜನಗಳಲ್ಲಿ 3 ವಿಧಗಳಿವೆ 1) ಅಲ್ಪಪ್ರಾಣ 2) ಮಹಾಪ್ರಾಣ 3) ಅನುನಾಸಿಕ

- **ಅಲ್ಪಪ್ರಾಣ :**

  ಕಡಿಮೆ ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳಿಗೆ ಅಲ್ಪಪ್ರಾಣ ಎನ್ನುವರು

  ಒಟ್ಟು 10 ಅಲ್ಪಪ್ರಾಣಾಕ್ಷರಗಳಿವೆ.

  ಕ್,ಚ,ಟ್,ತ್,ಪ್, ಗ್,ಜ್,ಡ್,ದ್,ಬ್.

- **ಮಹಾಪ್ರಾಣ:**

  ಹೆಚ್ಚು ಉಸಿರಿನಿಂದ ಉಚ್ಚರಿಸುವ ವ್ಯಂಜನಾಕ್ಷರಗಳಿಗೆ ಮಹಾಪ್ರಾಣ ಎನ್ನುವರು

  ಒಟ್ಟು 10 ಮಹಾಪ್ರಾಣಾಕ್ಷರ ಗಳಿವೆ.

  ಖ್, ಛ್,ಠ್,ಥ್,ಫ್ ಘ್,ಝ್, ಢ್, ಧ್,ಭ

- **ಅನುನಾಸಿಕಗಳು:**

  ' ನಾಸಿಕ ' ಎಂದರೆ ಮೂಗು. ಮೂಗಿನ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಅನುನಾಸಿಕಗಳು ಎನ್ನುವರು. ಒಟ್ಟು 5 ಅನುನಾಸಿಕಗಳು ಇವೆ

  ಙ್, ಞ್, ಣ್, ನ್, ಮ್

- **ಅವರ್ಗಿಯ ವ್ಯಂಜನಗಳು:**

  'ಯ' ಇಂದ 'ಳ' ವರೆಗಿನ 9 ಅಕ್ಷರಗಳಿಗೆ ವರ್ಗದ ವ್ಯವಸ್ಥೆ ಇಲ್ಲದುದರಿಂದ ಇವುಗಳನ್ನು ಅವರ್ಗಿಯ ವ್ಯಂಜನಗಳು ಎನ್ನುವರು

  ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

- **ಯೋಗವಾಹಗಳು:**

  'ಯೋಗ' ಎಂದರೆ ಸಂಬಂಧವನ್ನು 'ವಾಹ' ಎಂದರೆ ಹೊಂದುವುದು

  ಬೇರೊಂದು ಪದದ/ಅಕ್ಷರದ ಸಂಬಂಧ ಹೊಂದಿದಾಗ ಮಾತ್ರ ಇವನ್ನು ಉಚ್ಚರಿಸಲಾಗುತ್ತದೆ

  ಯೋಗವಾಹಗಳಲ್ಲಿ 2 ವಿಧ

  ಅನುಸ್ವಾರ (ಂ) ವಿಸರ್ಗ (ಃ)

- **ಗುಣಿತಾಕ್ಷರ ಪರಿಚಯಾತ್ಮಕ ವಿವರ:**

ದ್ ವ್ ರ್ ವ್ಯಂಜನಗಳನ್ನು ಸೇರಿಸಿ ಬರೆದರೆ ಪದ ರಚನೆಯಾಗುವುದಿಲ್ಲ. ಅದರ ಬದಲಿಗೆ ದ್+ಏ=ದೇ, ವ್+ಅ=ವ, ರ್+ಉ=ರು ಈ ರೀತಿ ಸ್ವರಾಕ್ಷರಗಳನ್ನು ಸೇರಿಸಿ ಬರೆದರೆ ' ದೇವರು' ಎಂಬ ಪದ ರಚನೆಯಾಗುತ್ತದೆ. ಹೀಗೆ ವ್ಯಂಜನಕ್ಕೆ ಸ್ವರ ಸೇರಿದಾಗ ಆಗುವ ಅಕ್ಷರವೇ ಗುಣಿತಾಕ್ಷರ. ಒಂದು ವ್ಯಂಜನಕ್ಕೆ ಅ ದಿಂದ ಔ ವರೆಗೆ 13 ಸ್ವರಗಳು ಸೇರಿದರೆ 13 ಗುಣಿತಾಕ್ಷರಗಳಾಗುತ್ತವೆ. 34 ವ್ಯಂಜನಗಳಿಗೆ ತಲಾ 13 ಸ್ವರಾಕ್ಷರಗಳು ಸೇರುವುದರಿಂದ 442 ಗುಣಿತಾಕ್ಷರಗಳನ್ನು ರಚಿಸಬಹುದು. ಈ ಗುಣಿತಾಕ್ಷರಗಳೇ ಕಾಗುಣಿತ ಅಕ್ಷರಗಳು. ಅದೇ ರೀತಿ ಯೋಗವಾಹಗಳನ್ನು ಸೇರಿಸಿ ಗುಣಿತಾಕ್ಷರಗಳನ್ನು ಮಾಡಬಹುದು.

ಉದಾ:

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

- **ಸಂಯುಕ್ತಾಕ್ಷರ:**

ಅಪ್ಪ, ಅಮ್ಮ, ಅಕ್ಷರ, ಸ್ತ್ರೀ ಮುಂತಾದ ಪದಗಳನ್ನು ಬಳಸುತ್ತೇವೆ. 'ಅಪ್ಪ' ಪದದಲ್ಲಿ ಅ ಪ್ ಪ್ ಅ ಎಂಬ ನಾಲ್ಕು ಅಕ್ಷರಗಳಿವೆ. ಮೇಲ್ನೋಟಕ್ಕೆ ಎರಡೇ ಅಕ್ಷರಗಳು ಕಾಣುತ್ತವೆ. ಮೊದಲ ಅಕ್ಷರ ಸ್ವರಾಕ್ಷರ ಎರಡನೇ ಅಕ್ಷರದಲ್ಲಿ ಪ್ ಪ್ ಅ ಎಂಬ ಮೂರು ಅಕ್ಷರಗಳಿವೆ. ಅವುಗಳಲ್ಲಿ ಎರಡು ವ್ಯಂಜನ ಒಂದು ಸ್ವರಾಕ್ಷರ. ಹೀಗೆ ಎರಡು ಮತ್ತು ಎರಡಕ್ಕಿಂತ ಹೆಚ್ಚು ವ್ಯಂಜನಗಳಿಗೆ ಒಂದು ಸ್ವರ ಸೇರಿ ಆಗುವ ಅಕ್ಷರವೇ ಸಂಯುಕ್ತಾಕ್ಷರ. ಇದನ್ನು ದ್ವಿತ್ವಾಕ್ಷರ/ಒತ್ತಕ್ಷರ ಎಂತಲೂ ಕರೆಯುವರು.

ಸಂಯುಕ್ತಾಕ್ಷರಗಳಲ್ಲಿ ಸಜಾತಿಯಸಂಯುಕ್ತಾಕ್ಷರ ಹಾಗೂ ವಿಜಾತೀಯ ಸಂಯುಕ್ತಾಕ್ಷರ ಎಂದು ಎರಡು ವಿಧಗಳುಂಟು.

- **ಸಜಾತಿಯಸಂಯುಕ್ತಾಕ್ಷರ :**

ಅಪ್ಪ,ಅಮ್ಮ ,ಲೆಕ್ಕ,ಅಗ್ಗ ಪದಗಳನ್ನು ಗಮನಿಸಿದಾಗ ಇಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಆಯಾ ಜಾತಿಯ ಎರಡೆರಡು ವ್ಯಂಜನಗಳಿವೆ. ಹೀಗೆ ಒಂದೇ ಜಾತಿಯ ಎರಡು ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ಸಜಾತಿಯ ಸಂಯುಕ್ತಾಕ್ಷರ.

- ವಿಜಾತಿಯ ಸಂಯುಕ್ತಾಕ್ಷರ :

ಅಷ್ಟ,ಆರ್ಯ,ಅಸ್ತ್ರ ಪದಗಳಲ್ಲಿರುವ ಪ್ರತಿಯೊಂದು ಸಂಯುಕ್ತಾಕ್ಷರದಲ್ಲೂ ಬೇರೆ ಬೇರೆ ಜಾತಿಯ ವ್ಯಂಜನಗಳು ಒಟ್ಟಿಗೆ ಸೇರಿ ಆಗುವ ಸಂಯುಕ್ತಾಕ್ಷರವೇ ವಿಜಾತಿಯ ಸಂಯುಕ್ತಾಕ್ಷರ.

- ದೇಶ್ಯ–ಅನ್ಯದೇಶ್ಯ ಪದಗಳು:

ಯಾವುದೇ ಭಾಷೆಯಾಗಲಿ ಅದು ತನ್ನ ಸುತ್ತ ಮುತ್ತಣ ಭಾಷೆಗಳ ಸಂಪರ್ಕದಿಂದಾಗಿ ಬೇರೆ ಭಾಷೆಗಳ ಪದಗಳನ್ನು ತನ್ನ ತೆಕ್ಕೆಗೆ ಸೇರಿಸಿಕೊಂಡು ತನ್ನ ಶಬ್ದ ಸಂಪತ್ತನ್ನು ವಿಸ್ತರಿಸಿಕೊಳ್ಳುತ್ತದೆ. ಹೀಗೆ ವಿಸ್ತರಿಸಿಕೊಂಡ ಶಬ್ದಕೋಶಗಳ ಪದಗಳನ್ನು ನಾವು ಅನ್ಯದೇಶ್ಯ / ತತ್ಸಮ–ತದ್ಭವಗಳೆಂದು ವರ್ಗೀಕರಿಸಿದ್ದೇವೆ.

ಈ ಕೆಳಗಿನ ವಾಕ್ಯವನ್ನು ಗಮನಿಸಿ

“ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು.”

ಈ ವಾಕ್ಯ ಕನ್ನಡ ಭಾಷೆಯ ವಾಕ್ಯವಾದರೂ ಇಲ್ಲಿರುವ ಎಲ್ಲ ಪದಗಳು ಕನ್ನಡದವುಗಳಲ್ಲ. ‘ಮೋಟಾರು’ ಪದ ಆಂಗ್ಲಭಾಷೆಯಿಂದಲೂ ‘ಜಬರ್ದಸಿ’ ಪದ ಹಿಂದಿ ಭಾಷೆಯಿಂದಲೂ ‘ಜೀವನ,ಮುಖ್ಯ’ ಪದಗಳು ಸಂಸ್ಕೃತ ಭಾಷೆಯಿಂದಲೂ ಬಂದ ಪದಗಳಾಗಿದ್ದು ಉಳಿದವು ಕನ್ನಡ ಪದಗಳು. ಹೀಗಾಗಿ ಕನ್ನಡ ಭಾಷೆಯಲ್ಲಿ ಕನ್ನಡದ ಪದಗಳಲ್ಲದೆ ಬೇರೆ ಭಾಷೆಯಿಂದ ಬಂದ ಪದಗಳೂ ಇವೆ.

- ದೇಶ್ಯಪದಗಳು:
  ಅಚ್ಚ ಕನ್ನಡದ ಪದಗಳನ್ನು ‘ದೇಶ್ಯ’ ಪದಗಳೆಂದು ಕರೆಯುತ್ತೇವೆ.

ಉದಾ : ಕೈ, ಕಾಲು, ಬಾಯಿ, ಕಣ್ಣು, ತಲೆ, ಮೂಗು, ಸಣ್ಣ, ದೊಡ್ಡ, ಬಿಳಿಯ, ಹಾಲು, ಮೊಸರು, ಕರು, ಆಕಳು, ತಿಂಗಳು, ಕಲ್ಲು, ಗಿಡ, ಮುಂತಾದವು ಅಚ್ಚ ಕನ್ನಡದ ಪದಗಳಾಗಿವೆ

- ಅನ್ಯದೇಶ್ಯಪದಗಳು
  ಸಂಸ್ಕೃತವಲ್ಲದ ಹಾಗೂ ಅನ್ಯ ಭಾಷೆಯ ಶಬ್ದಗಳನ್ನು ಅನ್ಯದೇಶ್ಯ ಪದಗಳೆಂದು ಕರೆಯುವರು

ಅನ್ಯದೇಶ್ಯ ಪದಗಳು
ಸಂಸ್ಕೃತವಲ್ಲದ ಹಾಗೂ ಅನ್ಯ ಭಾಷೆಯ ಶಬ್ದಗಳನ್ನು ಅನ್ಯದೇಶ್ಯ ಪದಗಳೆಂದು ಕರೆಯುವರು

- ಉದಾ : ಇಂಗ್ಲೀಷ್ ಪದಗಳು : ಕಾರು, ಬಸ್ಸು, ಕಾಲೇಜು, ರೈಲು, ಮೊಟರು,ಲೈಟು,ಪೆನ್ನು,ಆಫೀಸು, ಇಸ್ಕೂಲು, ರೇಡಿಯೋ, ಆಸ್ಪತ್ರೆ, ಕೋರ್ಟು, ಬ್ಯಾಂಕು ಇತ್ಯಾದಿ.
- ಅರಬ್ಬಿಯಿಂದ : ಅಮಾನತು,ಅಸಲು,ಇನಾಮು,ಕಾಯ್ದೆ,ಗಲೀಜು,ತಕರಾರು,ತರಬೇತು,ನಕಲಿ ಇತ್ಯಾದಿ
- ಪೋರ್ಚುಗೀಸ್ : ಮೇಜು,ತಂಬಾಕು,ಅನಾನಸು,ಸಾಬೂನು,ಆಸ್ಪತ್ರೆ,ಚೊಂಬು,ಚಾ,ಇಸ್ತ್ರಿ,ರಶೀದಿ ಇತ್ಯಾದಿ
- ಉರ್ದು : ಕಿಮ್ಮತ್ತು, ತಾರೀಕು, ತಾಲೂಕು, ಅಹವಾಲು, ಇಲಾಖೆ, ದರ್ಜೆ ಬಂದೂಕು, ರುಜು, ಶುರು, ಶಾಮೀಲು

- ಗ್ರೀಕ್ ಮತ್ತು ರೋಮ್: ದಮ್ಮಡಿ,ದಮಡಿ,ದಮ್ಮು,ದೀನಾರ ಗದ್ಯಾಣ
- ಪಾರ್ಸಿ: ಅಬಕಾರಿ,ರಸ್ತೆ,ದವಾಖಾನೆ,ಚೌಕಾಷಿ,ಜಮೀನು,ಅಜಮಾಯಿಸಿ,ಆಮದು,ದಲ್ಲಾಳಿ ಇತ್ಯಾದಿ
- ಹಿಂದುಸ್ಥಾನಿ:

  ಅರ್ಜಿ.ಕಛೇರಿ,ಕಾರ್ಖಾನೆ,ಸಲಾಮು,ದರ್ಬಾರು,ಕುರ್ಚಿ,ಕಾಗದ,ಹುಕುಂ ಇತ್ಯಾದಿ

- **ತತ್ಸಮ–ತದ್ಭವ**

**ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಕನ್ನಡಕ್ಕೆ ಪದಗಳನ್ನು ಪಡೆದುಕೊಳ್ಳುವಾಗ ಅಲ್ಪಸ್ವಲ್ಪ ಬದಲಾವಣೆಗೆ ಒಳಪಟ್ಟ ಹಾಗೂ ಬಹಳಷ್ಟು ಬದಲಾವಣೆಗೆ ಒಳಪಟ್ಟ ಪದಗಳು ಇವೆ.**

- **ತತ್ಸಮ :**

'ತತ್' ಎಂದರೆ ಅದಕ್ಕೆ, ಸಮ ಎಂದರೆ ಸಮಾನ ಎಂದರ್ಥ. ಹಾಗಾಗಿ ತತ್ಸಮ ಎಂದರೆ ಸಂಸ್ಕೃತಕ್ಕೆ ಸಮಾನವಾದುದು ಎಂದರ್ಥ.
ಸಂಸ್ಕೃತ ದಿಂದ ಕನ್ನಡಕ್ಕೆ ಬರುವಾಗ ಯಾವುದೇ ಬದಲಾವಣೆಗೆ ಹೊಂದದೆ ಹಾಗೆಯೇ ಬಂದು ಸೇರಿದ ಪದಗಳೂ ಇವೆ. ಉದಾ : ರಾಮ, ಭೀಮ, ವಸಂತ, ಸೋಮ, ಚಂದ್ರ,ಸೂರ್ಯ,ಸ್ತ್ರೀ,ವನ,
ಅದೇರೀತಿ ಶಾಲೆ,ಆಶೆ, ನಿದ್ರೆ ಇತ್ಯಾದಿ 'ಆ' ಕಾರಾಂತ ಪದಗಳು 'ಎ' ಕಾರಾಂತವಾಗಿ ಬದಲಾವಣೆಗೊಂಡ ಪದಗಳೂ ಇವೆ. ಇಂತಹ ಪದಗಳನ್ನು ತತ್ಸಮಗಳೆಂದು ಕರೆಯಲಾಗುತ್ತದೆ.

- **ತದ್ಭವ :**

ಸಂಸ್ಕೃತದಿಂದ ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ವಿಕಾರಗಳನ್ನಾಗಲಿ ಅಥವಾ ಪೂರ್ಣ ವಿಕಾರಗಳನ್ನಾಗಲಿ ಹೊಂದಿ ಬರುವ ಶಬ್ದಗಳನ್ನು ತದ್ಭವಗಳೆಂದು ಕರೆಯುವರು. 'ತತ್' ಎಂದರೆ ಅದರಿಂದ (ಸಂಸ್ಕೃತ) ದಿಂದ 'ಭವ' ಎಂದರೆ ಹುಟ್ಟಿದ ತದ್ಭವ ಎಂದರೆ ಸಂಸ್ಕೃತದಿಂದ ಹುಟ್ಟಿದ್ದು ಎಂದರ್ಥ.
ಉದಾ : ಸಿರಿ, ವನ, ದನಿ,ಆಸೆ, ಕಬ್ಬ ಮುಂತಾದ ಪದಗಳು ಅಲ್ಪಸ್ವಲ್ಪ ಬದಲಾವಣೆ ಹೊಂದಿದ ಪದಗಳು
ಬಸದಿ, ಬೇಸಗೆ, ಕೊಡಲಿ, ಬಿನ್ನಣ ಮುಂತಾದ ಪದಗಳು ಪೂರ್ಣ ಬದಲಾವಣೆ ಹೊಂದಿದ ಪದಗಳು

ತತ್ಸಮ– ತದ್ಭವ

| | | | | |
|---|---|---|---|---|
| ಶ್ರೀ–ಸಿರಿ | ಸೊಸೆ–ಸ್ನುಷ | ಸ್ವರ್ಗ–ಸಗ್ಗ | ನದೀ–ನದಿ | ಗೋಷ್ಠಿ–ಗೊಟ್ಟಿ |
| ಧ್ವನಿ–ದನಿ | ಮಾಲಾ–ಮಾಲೆ | ಗ್ರಂಥಿ–ಗಂಟು | ಉದ್ಯೋಗ–ಉಜ್ಜುಗ | ತಡಿ–ತಟ |
| ಅಡವಿ–ಅಟವಿ | ವಿದ್ಯಾ–ಬಿಜ್ಜೆ | ವಂಧ್ಯ–ಬಂಜೆ | ಪ್ರಸಾದ–ಹಸಾದ | ಶುನಕ–ಸೊಣಗ |
| ಅಗ್ನಿ–ಅಗ್ಗಿ | ನಿತ್ಯ –ನಿಚ್ಚ | ಸಿಂಹ– ಸಿಂಗ | ಕೀರ್ತಿ–ಕೀರುತಿ | ಚತುರ–ಚದುರ |
| ಕವಿ–ಕಬ್ಬಿಗ | ಸ್ವರ್ಗ– ಸಗ್ಗ | ಭಿಕ್ಷು–ಬಿಕ್ಕು | ಪಶು–ಪಸು | ಸಂಜ್ಞಾ–ಸನ್ನೆ |
| ಬ್ರಹ್ಮ–ಬೊಮ್ಮ | ದಿಶ–ದಿಸೆ | ಕ್ಷಣ–ಚಣ | ಅಗ್ರ–ಅಗ್ಗ | ಅಬ್ದಿ–ಅಬುಧಿ |
| ಮೃಗ–ಮಿಗ | ಆಶ್ಚರ್ಯ–ಅಚ್ಚರಿ | ವಿನಾಯಕ–ಬೆನಕ | ಪ್ರಾಣ–ಹರಣ | ದ್ಯೂತ–ಜೂಜು |
| ಉದ್ಯೋಗ– ಉಜ್ಜುಗ | ಪುಸ್ತಕ–ಹೊತ್ತಿಗೆ | | ಅಮೃತ–ಅಮರ್ದು | ಶ್ರೇಣಿ–ಏಣಿ |
| ಯಮ–ಜವ | ಕಾವ್ಯ–ಕಬ್ಬ | | ಯುದ್ಧ–ಜುದ್ಧ | ರಾಕ್ಷಸ–ರಕ್ಕಸ |
| ಅಕ್ಷರ–ಅಕ್ಕರ | ಆಕಾಶ–ಆಗಸ | | ಧ್ಯಾನ–ಜಾನ | ನಿತ್ಯ–ನಿಚ |

ಯೌವನ–ಜೌವನ ಕಾರ್ಯ–ಕಜ್ಜ ಋಷಿ–ರಿಸಿ ಸಂಸ್ಕೃತ–ಸಕ್ಕದ ಮತ್ಸರ–ಮಚ್ಚರ ಯೋಗಿ–ಜೋಗಿ ಮುಖ–ಮೊಗ ಮೂರ್ತಿ–ಮೂರುತಿ

ವರ್ಷ–ವರುಷ ಕೀರ್ತಿ–ಕೀರುತಿ ರಾಯ–ರಾಜ ವೀರ–ಬೀರ

ಭಕ್ತ–ಬಕುತ ಬಿನ್ನಹ–ವಿಜ್ಞಾಪನೆ ದೆಸೆ–ದಿಶಾ ಚಂದ್ರ–ಚಂದಿರ

ಸೊದೆ–ಸುದಾ ವಂಶ–ಬಂಚ ಸ್ಥಾನ–ತಾಣ ಯಶ–ಜಸ

ಪಟ್ಟಣ–ಪತ್ತನ ಕಾರ್ಯ–ಕಜ್ಜ ಹಕ್ಕಿ–ಪಕ್ಷಿ ಯಜ್ಞ–ಜನ್ನ

ದೀವಿಗೆ–ದೀಪಿಕಾ ಪುಣ್ಯ–ಪುನ್ನ ಸಂಧ್ಯಾ–ಸಂಜೆ ಭಾಷಾ–ಬಾಸ

ವಿಷ–ವಿಸ ಹರ್ಷ–ಹರುಷ ಭಿಕ್ಷು–ಬಿಕ್ಕು ಸುಧಾ–ಸೊದೆ

ಕಣೆ–ಗನೆ(ಗಣೆ) ದೃಷ್ಟಿ–ದಿಟ್ಟಿ ತಪಸ್ವಿ–ತವಸಿ ಗ್ರಹ–ಗರ

ವಿಜ್ಞಾನ–ಬಿನ್ನಾಣ ಮುಖಶಾಲೆ–ಮೊಗಸಾಲೆ ದಾತೃ–ದಾತಾರ ವಿಜ್ಞಾಪನೆ–ಬಿನ್ನಹ

ಸಾಮಂತ–ಸಾವಂತ ಸುಧೆ–ಸೊದೆ ವ್ಯಯ–ಬೀಯ ಕೊಗಿಲೆ–ಕೋಕಿಲ

ವ್ಯಾಪಾರಿ–ಬೇಹಾ ಸಂದೇಹ–ಸಂದೆಯ

## ನುಡಿಗಟ್ಟು :

ಕನ್ನಡ ಭಾಷೆಯಲ್ಲಿ ವಿಶೇಷಾರ್ಥವನ್ನು ಕೊಡುವ ,ಅರ್ಥವ್ಯಾಪ್ತಿಯನ್ನು ವಿಸ್ತರಿಸುವ ಬೇರೊಂದು ಬಗೆಯ ಪದ ಸಮುಚ್ಚಯಗಳು ಬಳಕೆಯಲ್ಲಿವೆ.ಅವನ್ನು ನುಡಿಗಟ್ಟುಗಳು ಎನ್ನುತ್ತಾರೆ. ಎರಡು ಅಥವ ಹೆಚ್ಚು ಶಬ್ದಗಳು ಸೇರಿ ಒಂದು ನುಡಿಗಟ್ಟಾಗಿ ಅದಕ್ಕೊಂದು ನವಿನಾರ್ಥ ಬರುತ್ತದೆ

| | | | |
|---|---|---|---|
| ಕಣ್ಣೊಳಿಸು | ಕಣ್ಣೀರು | ಕೈಯಾರೆ | ಕರೆಕೊಡು |
| ಕಣ್ಣಿಡು | ಕಣ್ಬಿಡು | ನಿರ್ವಹಣೆ | ಎಳ್ಳು ಜೀರಿಗೆ |
| ಕಣ್ಕಟ್ಟು | ನಾಡಾಡಿ | ಆಚರಿಸು | ಹಾಲುಂಡತವರು |
| ಕಣ್ಣಾಕು | ಮಥಿಸು | ತ್ಯಜಿಸು | ಕರಕೀಯಕುಡಿ |
| ಕಣ್ಣಾರೆ | ಮಾರಣಹೋಮ | ಸಂಭವಿಸು | ತಾಸ್ಹೊತ್ತಿನಹಾದಿ |
| ಕಣ್ಣೆಂಜಲು | ಮನವೊಲಿಸು | ತ್ವರಿತಪಡು | ಪರಾಂಬರಿಸು |
| ಕಂಗಾಲು | ಮನೋನಿಶ್ಚಯ | ಒಡಂಬಡು | ಹೊಟ್ಟೆತಣ್ಣಗಿರಲಿ |
| ಕಂಬನಿ | ಕರಗತ | ಸಂಭವಿಸು | ಹಣೆಬರಹ |

- ದ್ವಿಃಉಕ್ತಿ=ದ್ವಿರುಕ್ತಿ

ದ್ವಿರುಕ್ತಿ ಎಂದರೆ ಒಂದು ಶಬ್ದವನ್ನು ಎರಡುಸಲ ಉಚ್ಚರಿಸುವುದು ಎಂದು ಅರ್ಥ

ಉದಾ: 1. ಮಗು ಬೇಗ ಬೇಗ ಬಾ 2. ನಡೆ ನಡೆ ಈಗಲೇ ಹೊತ್ತಾಗಿದೆ 3. ಬನ್ನಿ ಬನ್ನಿ ಕುಳಿತುಕೊಳ್ಳಿ

ಈ ಮೇಲಿನ ವಾಕ್ಯಗಳಲ್ಲಿ ಬಂದಿರುವ ಜೋಡು ಪದಗಳಲ್ಲಿ 'ಬೇಗಬೇಗ' 'ನಡೆನಡೆ' ಎಂಬಲ್ಲಿ ಅವಸರವೂ 'ಬನ್ನಿಬನ್ನಿ' ಎಂಬ ಪದದಲ್ಲಿ ಸಂಭ್ರಮವೂ ವ್ಯಕ್ತಗೊಂಡಿರುವುದು ಕಂಡು ಬರುತ್ತದೆ. ಹೀಗೆ ಒಂದೇ ಪದವನ್ನು ವಿಶೇಷಾರ್ಥ ವ್ಯಕ್ತಪಡಿಸುವುದಕ್ಕೆ ಎರಡೆರಡು ಸಲ ಪ್ರಯೋಗಿಸುವುದುಂಟು.

**ಸೂತ್ರ : ಹೀಗೆ ಒಂದು ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನೋ, ಒಂದು ವಾಕ್ಯವನ್ನೋ ಎರಡೆರಡು ಸಲ ಪ್ರಯೋಗ ಮಾಡುವುದಕ್ಕೆ 'ದ್ವಿರುಕ್ತಿ' ಎನ್ನುವರು.**

ಉತ್ಸಾಹದಲ್ಲಿ – **ಹೌದು ಹೌದು!** ನಾನೂ ನೋಡಿದೆ

ಆಶ್ಚರ್ಯದಲ್ಲಿ– **ಅಬ್ಬಬ್ಬ!** ಎಂಥ ಹುಡುಗ

ಹರ್ಷದಲ್ಲಿ–**ಅಮ್ಮಾಅಮ್ಮಾ** ನಾನೇ ಗೆದ್ದದ್ದು.

**ಉದಾ : ಕಟ್ಟ ಕಡೆಗೆ, ಚಿಕ್ಕಚಿಕ್ಕ, ಬಟ್ಟಬಯಲು, ಬೇಡಬೇಡ, ಕೆಳಕೆಳಗೆ , ಓಡುಓಡು, ಬಗ್ಗುಬಡಿ ನಡೆನಡೆ, ಮೊಟ್ಟಮೊದಲು, ಬೇಗಬೇಗ, ಮೆಲ್ಲಮೆಲ್ಲನೆ, ಅಗಲಿಆಗಲಿ, ತುತ್ತತುದಿ ಇತ್ಯಾದಿ**

- **ಲಿಂಗಗಳು:**

**ಕೇಶಿರಾಜನು ಲಿಂಗಗಳು ಒಂಭತ್ತು ವಿಧ ಎಂದು ಹೇಳಿದರೂ ಕನ್ನಡದಲ್ಲಿ ಬಳಕೆಯಲ್ಲಿರುವುದು ಮೂರು ಲಿಂಗಗಳು.**

**ಈ ವಾಕ್ಯಗಳನ್ನು ಗಮನಿಸಿ**

- **ಹರ್ಷ ಗಿರೀಶನಿಗೆ ಬುದ್ಧಿ ಹೇಳಿದನು. 3) ಸ್ಫೂರ್ತಿ ತನ್ನ ತಂಗಿಗೆ ಪುಸ್ತಕ ಕೊಟ್ಟಳು**
- **ಬೆಕ್ಕು ಹಾಲನ್ನು ಕುಡಿಯಿತು**

**ಮೊದಲ ವಾಕ್ಯದಲ್ಲಿರುವ 'ಹರ್ಷ ', 'ಗಿರೀಶ' , ಪದಗಳು ಗಂಡಸರಿಗೂ 'ಸ್ಫೂರ್ತಿ' 'ತಂಗಿ' ಪದಗಳು ಹೆಂಗಸರಿಗೂ 'ಬೆಕ್ಕು ,'ಹಾಲು' ಪದಗಳು ಗಂಡಸೂ ಅಲ್ಲದ ಹೆಂಗಸೂ ಅಲ್ಲದ ಬೇರೆ ಯಾವುದಕ್ಕೋ ಸಂಬಂಧಿಸಿದ್ದೆಂದು ತಿಳಿಯುತ್ತದೆ.**

- **ಪುಲ್ಲಿಂಗ: ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' ಎಂಬ ಅರ್ಥ ಮನಸ್ಸಿಗೆ ಒಳೆಯುವುದೋ ಅದು 'ಪುಲ್ಲಿಂಗ'. ಉದಾ : ರಾಮ, ಸೋಮ, ರಾಜ, ತಂದೆ, ಅಣ್ಣ**
- **ಸ್ತ್ರೀಲಿಂಗ: ಯಾವ ಶಬ್ದ ಪ್ರಯೋಗ ಮಾಡಿದಾಗ 'ಹೆಂಗಸು' ಎಂಬ ಅರ್ಥ ಮನಸ್ಸಿಗೆ ಒಳೆಯುವುದೋ ಅದು 'ಸ್ತ್ರೀಲಿಂಗ'. ಉದಾ: ತಾಯಿ,ಅತ್ತೆ, ವಿಧವೆ, ರಾಣಿ, ಚೆಲುವೆ**
- **ನಪುಂಸಕಲಿಂಗ: ಯಾವ ಶಬ್ದ ಪ್ರಯೋಗ ಮಾಡಿದಾಗ 'ಗಂಡಸು' – 'ಹೆಂಗಸು' ಅಲ್ಲದ ಅರ್ಥ . ಮನಸ್ಸಿಗೆ ಹೊಳೆಯುವುದೋಅದು 'ನಪುಂಸಕಲಿಂಗ' ಉದಾ: ನಾಯಿ,ಮರ.ಕಲ್ಲು**

- **ವಚನಗಳು:**

**ವಚನ ಎಂದರೆ ಎಣಿಕೆ ಎಂದರ್ಥ.ವಸ್ತು ಅಥವಾ ವ್ಯಕ್ತಿಗಳನ್ನು ಎಣಿಸುವಾಗ ಒಂದು ಅಥವಾ ಒಂದಕ್ಕಿಂತ ಹೆಚ್ಚು ಎಂದು ಎಣಿಸಿ ಒಂದಕ್ಕಿಂತ ಹೆಚ್ಚಾದರೆ ಎಷ್ಟು ಎಂದು ನಿರ್ಧರಿಸುತ್ತೇವೆ. ಹೀಗೆ ಒಂದು ವಸ್ತು ಅಥವಾ ಒಬ್ಬ ವ್ಯಕ್ತಿಯನ್ನು ಸೂಚಿಸುವ ಪದಗಳೆ 'ಏಕವಚನ'. ಒಂದಕ್ಕಿಂತ ಹೆಚ್ಚು ಇರುವ ವಸ್ತು ಅಥವ ವ್ಯಕ್ತಿಗಳನ್ನು ಸೂಚಿಸುವ ಪದಗಳೇ 'ಬಹುವಚನ'.**

ಏಕವಚನದ ನಾಮ ಪ್ರಕೃತಿಗಳಿಗೆ ಅರು, ವು, ಗಳು, ಅಂದಿರು ಇತ್ಯಾದಿ ಬಹುವಚನ ರೂಪಗಳು ಸೇರಿ 'ಬಹುವಚನ' ಪದಗಳಾಗುತ್ತವೆ.

ಉದಾ: ರಾಜ+ಅರು=ರಾಜರು  ಮರ+ಗಳು=ಮರಗಳು  ರಾಣಿ+ಅರು=ರಾಣಿಯರು  ಅಣ್ಣ+ಅಂದಿರು=ಅಣ್ಣಂದಿರು  ನೀನು+ವು=ನೀವು  ಗಿಡ+ಗಳು=ಗಿಡಗಳು

- **ನಾಮಪದ :**

ನಾಮ ಎಂದರೆ ಹೆಸರು ಹೆಸರನ್ನು ಸೂಚಿಸುವ ಪದ ನಾಮಪದ (ವ್ಯಕ್ತಿ,ವಸ್ತು,ಸ್ಥಳ,ಪ್ರಾಣಿಗಳ ಹೆಸರನ್ನು ಸೂಚಿಸುವ ಪದ) ಉದಾ: ರಾಮ, ರಂಗ, ಹುಡುಗ, ನದಿ, ಹಳ್ಳ, ಬೆಟ್ಟ, ಮೈಸೂರು, ಜಿಂಕೆ ಇತ್ಯಾದಿ

ನಾಮ ಪ್ರಕೃತಿ: ನಾಮವಾಚಕ ಪ್ರಕೃತಿಗಳಲ್ಲಿ 9 ವಿಧಗಳುಂಟು ಅವು 1) ವಸ್ತು ವಾಚಕಗಳು 2) ಗುಣವಾಚಕ 3) ಸಂಖ್ಯಾವಾಚಕ 4) ಸಂಖ್ಯೇಯ ವಾಚಕ 5)ಭಾವನಾಮಗಳು 6) ಪರಿಣಾಮವಾಚಕ 7)ಪ್ರಕಾರ ವಾಚಕ 8) ದಿಗ್ವಾಚಕ 9)ಸರ್ವನಾಮ

1) ವಸ್ತುವಾಚಕ : ವ್ಯಕ್ತಿ ಹಾಗೂ ವಸ್ತುಗಳ ಹೆಸರನ್ನು ಸೂಚಿಸುವ ಶಬ್ದಗಳು ವಸ್ತು ವಾಚಕ ಎನಿಸುವುವು. ವಸ್ತುಗಳನ್ನು ಚೇತನ, ಅಚೇತನ ಎಂದು ವಿಭಾಗಿಸಲಾಗಿದೆ ವಸ್ತುವಾಚಕಗಳಲ್ಲಿ 3 ವಿಧ 1) ರೂಢನಾಮ 2) ಅಂಕಿತ ನಾಮ 3) ಅನ್ವರ್ಥನಾಮ

- <u>ರೂಢನಾಮ</u>: ರೂಢಿಯಿಂದ ಬಂದ ಸಾಮಾನ್ಯ ವಾಚಕಗಳು ರೂಢನಾಮ ಎನಿಸುವುವು.
  ಉದಾ: ನದಿ, ಹಳ್ಳ, ಕೆರೆ, ಹುಡುಗಿ, ಬೆಟ್ಟ, ಕಾಡು, ಮರ, ದೇಶ, ಹೆಂಗಸು
- <u>ಅಂಕಿತ ನಾಮ</u>: ಇಟ್ಟ ಹೆಸರುಗಳು ಅಂಕಿತ ನಾಮ ಎನಿಸುವುವು.
  ಉದಾ: ಮೈಸೂರು, ಸೀತೆ, ಅನಿತಾ, ಬಸವ, ಅಮೇರಿಕ, ಕಾವೇರಿ, ಹಿಮಾಲಯ
- <u>ಅನ್ವರ್ಥನಾಮ:</u> ಅರ್ಥಕ್ಕೆ ಅನುಸಾರವಾಗಿ ಇಟ್ಟ ಹೆಸರು ಅನ್ವರ್ಥನಾಮ ಎನಿಸುವುವು.
  ಉದಾ: ಕುರುಡ, ಕುಂಟ, ಹೆಳವ, ಕೆಪ್ಪ, ಕಿವುಡ, ಕರಿಯ, ಕೆಂಪ, ರೋಗಿ,ವ್ಯಾಪಾರಿ.

2) ಗುಣವಾಚಕ : ವಸ್ತುಗಳ ಗುಣ,ರೀತಿ,ಸ್ವಭಾವಗಳನ್ನು ತಿಳಿಸುವ ವಿಶೇಷಣಗಳೆಲ್ಲ ಗುಣವಾಚಕ ಎನಿಸುವುವು ಉದಾ:ದೊಡ್ಡ,ಚಿಕ್ಕ,ಹಿರಿಯ,ಕಿರಿಯ,ಒಳ್ಳೆಯ,ಕೆಟ್ಟ,ಬಿಳಿದು,ಕರಿದು,ಹೊಸದು,ಹಳೆಯ ಇತ್ಯಾದಿ.

3) ಸಂಖ್ಯಾ ವಾಚಕ : ಸಂಖ್ಯೆಯನ್ನು ಸೂಚಿಸುವ ಶಬ್ದಗಳೆಲ್ಲ ಸಂಖ್ಯಾ ವಾಚಕ ಎನಿಸುವುವು ಉದಾ: ಹತ್ತು, ನೂರು, ಸಾವಿರ, ಐದು,ಲಕ್ಷ,ಕೋಟಿ

4) ಸಂಖ್ಯೇಯ ವಾಚಕ : ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಸೂಚಿಸುವ ಶಬ್ದಗಳೆಲ್ಲ ಸಂಖ್ಯೇಯ ವಾಚಕ ಎನಿಸುವುವು ಉದಾ: ಮೂವರು ಮಕ್ಕಳು, ಹದಿನಾರು ಸಾವಿರ ಹೆಂಡತಿಯರು ,ಹತ್ತಾರು ಲಾರಿಗಳು

5) ಭಾವನಾಮಗಳು:

ವಸ್ತುಗಳು ಮತ್ತು ಕ್ರಿಯೆಯ ಭಾವವನು ತಿಳಿಸುವ ಶಬ್ದಗಳು ಭಾವನಾಮಗಳೆನಿಸುವವು.

ಉದಾ: ಬಿಳುಪು–ಬಿಳಿದರ ಭಾವ,ಹಿರಿಮೆ–ಹಿರಿದರ ಭಾವ, ಮಾಟ–ಮಾಡುವುದರ ಭಾವ,

**6) ಪರಿಮಾಣ ವಾಚಕಗಳು :**

ವಸ್ತುಗಳ ಸಾಮಾನ್ಯ ಅಳತೆ,ಪರಿಮಾಣ , ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳು ಪರಿಮಾಣ ವಾಚಕಗಳು.

ಉದಾ; ಅಷ್ಟುದೊಡ್ಡ ಶಾಲೆ, ಇಷ್ಟುದನದ ಗುಂಪು, ಎಷ್ಟುಹಣ ಇತ್ಯಾದಿ. ಅಂದರೆ ಅಷ್ಟು, ಇಷ್ಟು, ಹಲವು, ಕೆಲವು ಇತ್ಯಾದಿ.

**7) ಪ್ರಕಾರವಾಚಕಗಳು :**

ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳೆಲ್ಲ ಪ್ರಕಾರವಾಚಕಗಳು.

ಉದಾ:ಅಂಥಮನುಷ್ಯನುಂಟೆ, ಅಂತಹವಿಚಾರಬೇಡ, ಎಂಥಬಣ್ಣ, ಇಂಥವರುಉಂಟೆ? (ಅಂಥ, ಇಂಥ, ಎಂಥ, ಎಂಥದು, ಅಂಥವನ, ಇಂಥವಳ, ಮುಂತಾದವು)

**8) ದಿಗ್ವಾಚಕಗಳು: ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಶಬ್ದಗಳೆಲ್ಲ ದಿಗ್ವಾಚಕಗಳು.**

ಉದಾ: ಉತ್ತರ,ದಕ್ಷಿಣ,ಪೂರ್ವ,ಪಶ್ಚಿಮ ,ನೈರುತ್ಯ,ಈಶಾನ್ಯ,ಮೂಡಣ,ಪಡುವಣ,ತೆಂಕಣ

- **ಸರ್ವನಾಮ**

  ನಾಮಪದದ ಬದಲಿಗೆ ಬಳಸುವ ಪದವನ್ನು ಸರ್ವನಾಮ ಎನ್ನುವರು

  ಸರ್ವನಾಮಗಳಲ್ಲಿ 3 ವಿಧಗಳು

  1)ಪುರುಷವಾಚಕ ಸರ್ವನಾಮ 2)ಪಶ್ನಾರ್ಥಕ ಸರ್ವನಾಮ 3) ಆತ್ಮಾರ್ಥಕ ಸರ್ವನಾಮ

- **ಪುರುಷವಾಚಕ ಸರ್ವನಾಮ**

| ಪುರುಷವಾಚಕ | ಲಿಂಗ | ಏಕವಚನ | ಬಹುವಚನ |
|---|---|---|---|
| ಪ್ರಥಮ ಪುರುಷ | ಪುಲ್ಲಿಂಗ/ಸ್ತ್ರೀಲಿಂಗ | ನಾನು | ನಾವು |
| ಮಧ್ಯಮ ಪುರುಷ | ಪುಲ್ಲಿಂಗ/ಸ್ತ್ರೀಲಿಂಗ | ನೀನು | ನೀವು |
| ಉತ್ತಮ ಪುರುಷ | ಪುಲ್ಲಿಂಗ/ಸ್ತ್ರೀಲಿಂಗ/ ನಪುಂಸಕಲಿಂಗ | ಅವನು/ಅವಳು/ಅದು ಇವನು,ಇವಳು,ಇದು | ಅವರು/ಅವು ಇವರು,ಇವು |

- **ಪಶ್ನಾರ್ಥಕ ಸರ್ವನಾಮ : ಯಾವುದು? ಏನು? ಏಕೆ? ಎಲ್ಲಿ? ಯಾವಾಗ? ಇತ್ಯಾದಿ ಪ್ರಶ್ನೆಗಳಿಗೆ ಸಂಬಂಧಿಸಿದ ಪದಗಳು ಪಶ್ನಾರ್ಥಕ ಸರ್ವನಾಮ ಎನಿಸುವುವು**

- ಆತ್ಮಾರ್ಥಕ ಸರ್ವನಾಮ: ತಾನು,ತಾವು,ತನ್ನ. ಮುಂತಾದವುಗಳು ಆತ್ಮಾರ್ಥಕ ಸರ್ವನಾಮ

- **ನಾಮ ವಿಭಕ್ತಿಗಳು:**

ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದ ಹಾಗೂ ವಾಕ್ಯಾರ್ಥಕ್ಕೆ ಸಂಬಂಧ ಕಲ್ಪಿಸಿಕೊಡುವ ಪ್ರತ್ಯಯ ರೂಪಗಳೇ ವಿಭಕ್ತಿ ಪ್ರತ್ಯಯಗಳು. ಅವು ನಾಮಪ್ರಕೃತಿಗಳ ಸಂಬಂಧ ಹಾಗೂ ವಾಕ್ಯಾರ್ಥ ಕಾರ್ಯವನ್ನು ಸಹಜವಾಗಿ ನಿರೂಪಿಸುವುವು.

- **ವಿಭಕ್ತಿ–ಕಾರಕಾರ್ಥ–ಪ್ರತ್ಯಯ ಹಾಗೂ ಪದಗಳ ವಿವರ ಕೋಷ್ಟಕ**

| ವಿಭಕ್ತಿಗಳು | ಕಾರಕಾರ್ಥ | ಪ್ರತ್ಯಯ (ಹೊಸ.ಕ) | ಪ್ರತ್ಯಯ (ಹ.ಕ) | ನಾಮಪದ (ಹೊಸಗನ್ನಡ) | ನಾಮಪದ (ಹಳಗನ್ನಡ) |
|---|---|---|---|---|---|
| ಪ್ರಥಮ | ಕತೃ | ಉ | ಮ್ | ರಾಮನು | ರಾಮಮ್ |
| ದ್ವಿತೀಯ | ಕರ್ಮ | ಅನ್ನು | ಅಂ | ರಾಮನನ್ನು | ರಾಮನಂ |
| ತೃತೀಯ | ಕರಣ | ಇಂದ | ಇಂ,ಇಂದಂ | ರಾಮನಿಂದ | ರಾಮನಿಂದಂ |
| ಚತುರ್ಥೀ | ಸಂಪ್ರಧಾನ | ಗೆ,ಇಗೆ,ಕ್ಕೆ | ಗೆ,ಇಗೆ,ಕ್ಕೆ | ರಾಮನಿಗೆ | ರಾಮನಿಗೆ |
| ಪಂಚಮಿ | ಆಪಾದನ | ದೆಸೆಯಿಂದ | ಅತ್ತಣಿಂ | ರಾಮನದೆಸೆಯಿಂದ | ರಾಮನತ್ತಣಿಂ |
| ಷಷ್ಠಿ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮಿ | ಅಧಿಕರಣ | ಅಲ್ಲಿ,ಒಳು | ಒಳ್ | ರಾಮನಲ್ಲಿ | ರಾಮನೊಳ್ |

- **ವಿಭಕ್ತಿ ಪಲ್ಲಟ ಸ್ಥೂಲ ಪರಿಚಯ :**

ನಾವು ಮಾತನಾಡುವಾಗ ಪದ,ಪ್ರಕೃತಿಗಳಿಗೆ ಯಾವ್ಯಾವ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಹೇಳಬೇಕೋ ಅವನ್ನು ಬಿಟ್ಟು ಬೇರೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಹೇಳುವುದುಂಟು ಹೀಗೆ ಸೇರಿಸಬೇಕಾದ ವಿಭಕ್ತಿ ಪ್ರತ್ಯಯಕ್ಕೆ ಬದಲಾಗಿ ಬೇರೆ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಹೇಳುವುದೇ ವಿಭಕ್ತಿ ಪಲ್ಲಟ ಎನಿಸುತ್ತದೆ.

ಉದಾ:

–ಬಂಡಿಯನ್ನು ಹತ್ತಿದನು (ದ್ವಿತೀಯ)–ಬಂಡಿಗೆ ಹತ್ತಿದನು (ಚತುರ್ಥಿ)
–ಆತನ ದೆಸೆಯಿಂದ ಕೇಡಾಯ್ತು (ಪಂಚಮೀ)–ಆತನಿಂದ ಕೇಡಾಯ್ತು (ತೃತೀಯ)
–ಮನೆಯ ಯಜಮಾನ (ಷಷ್ಠಿ)–ಮನೆಗೆ ಯಜಮಾನ (ಚತುರ್ಥಿ)
–ಹಳ್ಳದಲ್ಲಿ ಬಿದ್ದನು (ಸಪ್ತಮಿ) ಹಳ್ಳಕ್ಕೆ ಬಿದ್ದನು (ಚತುರ್ಥಿ)

- **ಕ್ರಿಯಾಪದ:**

ಮಾದರಿ ವಾಕ್ಯಗಳು : 1. ತಾಯಿಯು ಅಡುಗೆಯನ್ನು ಮಾಡುತ್ತಾಳೆ

2. ತಂದೆಯು ಕೆಲಸವನ್ನುಮಾಡಿದರು.

3. ದೇವರು ಒಳ್ಳೆಯದನ್ನು ಮಾಡಲಿ.

ಈ ಮೇಲಿನ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳು ಕ್ರಿಯೆ ಪೂರ್ಣಗೊಂಡಿರುವುದನ್ನು ಸೂಚಿಸುತ್ತವೆ. ಹೀಗೆ ಕ್ರಿಯೆ ಪೂರ್ಣಗೊಂಡಿದೆ ಎಂಬ ಅರ್ಥವನ್ನು ಸೂಚಿಸಬಲ್ಲ ಪದವೇ ಕ್ರಿಯಾಪದ.

ಈ ವಾಕ್ಯಗಳಲ್ಲಿರುವ ಎಲ್ಲ ಕ್ರಿಯಾ ಪದಗಳಿಗೂ ಮೂಲಪದ ಮಾಡು ಎಂಬುದು ಇಂತಹ ಮೂಲ ರೂಪ ಪದಗಳೇ ಕ್ರಿಯಾ ಪ್ರಕೃತಿ ಅಥವಾ ಧಾತು.

- ಸೂತ್ರ: ಕ್ರಿಯಾರ್ಥವನ್ನು ಸೂಚಿಸುವ ಪ್ರತ್ಯಯವನ್ನು ಹೊಂದದಿರುವ ಪದವೇ ಕ್ರಿಯಾ ಪ್ರಕೃತಿ ಅಥವಾ ಧಾತು. ಅಂದರೆ ಕ್ರಿಯಾ ಪದದ ಮೂಲ ರೂಪವೇ ಧಾತು.
- ಸಕರ್ಮಕ ಮತ್ತು ಅಕರ್ಮಕ ಧಾತುಗಳ ಪರಿಚಯ

–ರಾಮ ಗಿಡವನ್ನು ನೆಟ್ಟನು

–ಶಿಲ್ಪಿಗಳು ಗುಡಿಯನ್ನು ಕಟ್ಟಿದರು.

–ವಿದ್ಯಾರ್ಥಿಗಳು ಪಾಠವನ್ನು ಓದಿದರು.

ಈ ಮೂರು ವಾಕ್ಯಗಳಲ್ಲಿ ನೆಟ್ಟನು , ಕಟ್ಟಿದರು , ಓದಿದರು ಎಂಬ ಕ್ರಿಯಾಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಿದಾಗ ಗುಡಿಯನ್ನು, ಪಾಠವನ್ನು, ಗಿಡವನ್ನು ಎಂಬ ಉತ್ತರ ದೊರೆಯುವುದು ಇಂತಹ ಪದಗಳೇ ಕರ್ಮಪದಗಳು

ಈ ಮೂರು ಕ್ರಿಯಾಪದಗಳಲ್ಲಿ ಅನುಕ್ರಮವಾಗಿ ನೆಡು ಕಟ್ಟು ಓದು ಎಂಬ ಧಾತುಗಳಿವೆ.ಎಲ್ಲಾ ಧಾತುಗಳಿಗೂ ಕರ್ಮಪದ ಬೇಕಾಗುತ್ತದೆ.ಇಲ್ಲವಾದಲ್ಲಿ ವಾಕ್ಯ ಪೂರ್ಣ ಅರ್ಥವನ್ನು ಕೊಡಲಾಗದು.

- ಸೂತ್ರ : ಕರ್ಮಪದವನ್ನು ಬಯಸುವ ಧಾತುಗಳೇ ಸಕರ್ಮಕ ಧಾತುಗಳು

–ಕೂಸು ಮಲಗಿತು.

–ಅವನು ಬದುಕಿದನು.

–ಆಕಾಶ ಹೊಳೆಯುತ್ತಿದೆ.

ಇಲ್ಲಿ ಮಲಗಿತು ಬದುಕಿದನು ಹೊಳೆಯುತ್ತಿದೆ ಎಂಬ ಕ್ರಿಯಾ ಪದಗಳಿಗೆ ಏನನ್ನು ಎಂಬ ಪ್ರಶ್ನೆ ಹಾಕಲು ಸಾಧ್ಯವಿಲ್ಲ .ಹಾಗಾಗಿ ಈ ಕ್ರಿಯಾ ಪದಗಳಲ್ಲಿರುವ ಮಲಗು ಬದುಕು ಹೊಳೆಯು ಎಂಬ ಧಾತುಗಳು ಕರ್ಮಪದವನ್ನು ಬಯಸುವುದಿಲ್ಲ.

- ಸೂತ್ರ : ಕರ್ಮಪದವನ್ನು ಬಯಸದೆ ಇರುವ ಧಾತುಗಳೇ ಅಕರ್ಮಕ ಧಾತುಗಳು

- ಕರ್ತರಿ ಕರ್ಮಣಿ ಪ್ರಯೋಗದ ಸ್ಥೂಲ ಪರಿಚಯ

ವಾಕ್ಯಗಳನ್ನು ಗಮನಿಸಿ

| ಗುಂಪು–1 | ಗುಂಪು–2 |
|---|---|
| –ಅಣ್ಣ ಅನ್ನವನ್ನು ಉಂಡನು | –ಅಣ್ಣನಿಂದ ಅನ್ನ ಉಣ್ಣಲ್ಪಟ್ಟಿತು |
| –ರಾಮ ರಾವಣನನ್ನು ಕೊಂದನು | – ರಾಮನಿಂದ ರಾವಣ ಕೊಲ್ಲಲ್ಪಟ್ಟನು |
| –ಕವಿತ ತಂಗಿಯನ್ನು ಕರೆದಳು | –ಕವಿತಳಿಂದ ತಂಗಿಯು ಕರೆಯಲ್ಪಟ್ಟಳು |

ಮೊದಲ ಗುಂಪಿನಲ್ಲಿರುವ ಧಾತುಗಳಿಗೆ ಲಿಂಗ ಮತ್ತು ವಚನಗಳು ಸೇರಿ ಪೂರ್ಣ ವಾಕ್ಯಗಳಾಗಿವೆ. ಇವೇ ಕರ್ತರಿ ಪ್ರಯೋಗ ವಾಕ್ಯಗಳು.

- ಸೂತ್ರ: ಕ್ರಿಯಾಪದಕ್ಕೆ ಕರ್ತರಿ ಪ್ರಯೋಗದಲ್ಲಿ ಕರ್ತೃವಿನ ಲಿಂಗ,ವಚನಗಳು ಬರುತ್ತವೆ.

ಎರಡನೇ ಗುಂಪಿನಲ್ಲಿರುವ ಧಾತುಗಳಿಗೆ –ಅಲ್ಪಡು ಪ್ರತ್ಯಯ ಸೇರಿದೆ. ಇವೇ ಕರ್ಮಣಿ ಪ್ರಯೋಗ

- ಸೂತ್ರ : ಧಾತುಗಳಿಗೆ ಅಲ್ಪಡು ಎಂಬ ಪ್ರತ್ಯಯ ಸೇರಿ ಅದಕ್ಕೆ ಕಾಲಸೂಚಕ ಮತ್ತು ಅಖ್ಯಾತಪ್ರತ್ಯಯಗಳು ಸೇರಿದಾಗ ಕರ್ಮಣಿ ಪ್ರಯೋಗದ ವಾಕ್ಯಗಳಾಗುತ್ತವೆ.

- **ನಾನಾ ಕ್ರಿಯಾರ್ಥಕಗಳ ಸ್ಥೂಲಪರಿಚಯ**

  ಭೀಮನಿಗೆ ಜಯವಾಗಲಿ

  ದೇವರು ನಿಮಗೆ ಒಳ್ಳೆಯದು ಮಾಡಲಿ

  ನಿನಗೆ ಶುಭವಾಗಲಿ

ಈ ಮೂರು ವಾಕ್ಯಗಳಲ್ಲಿ ಮಾಡಲಿ, ಓದಲಿ, ಆಗಲಿ ಎಂಬ ಕ್ರಿಯಾಪದಗಳಿವೆ. ಮಾಡಲಿ ಎಂಬಲ್ಲಿ ಹಾರೈಕೆಯೂ ಓದಲಿ ಎಂಬಲ್ಲಿ ಸಮ್ಮತಿಯೂ ಆಗಲಿ ಎಂಬಲ್ಲಿ ಆಶೀರ್ವಾದವೂ ಇದೆ.

- ಸೂತ್ರ: ಆಶೀರ್ವಾದ,ಅಪ್ಪಣೆ,ಹಾರೈಕೆ,ಆಜ್ಞೆ,ಸಮ್ಮತಿ ಇತ್ಯಾದಿ ವಿಧಿಗಳನ್ನು ಹೊಂದಿರುವ ಕ್ರಿಯಾ ಪದಗಳೇ ವಿಧ್ಯರ್ಥಕ ಕ್ರಿಯಾಪದಗಳು.

ಈ ಕೆಳಗಿನ ವಾಕ್ಯಗಳನ್ನು ಗಮನಿಸಿ

1) ಹರಿ ಹಣ್ಣನ್ನು ತಿನ್ನನು.
2) ಕಮಲ ಆಟಕ್ಕೆ ಬಾರಳು
3) ರಾಜು ಶಾಲೆಗೆ ಹೋಗನು.

ಇಲ್ಲಿ ತಿನ್ನನು ಎಂಬ ಪದ ತಿನ್ನುವುದಿಲ್ಲ ಎಂಬ ಅರ್ಥವನ್ನೂ ಬಾರಳು ಎಂಬ ಪದ ಬರುವುದಿಲ್ಲ ಎಂಬ ಅರ್ಥವನ್ನೂ ಹೋಗನು ಎಂಬ ಪದ ಹೋಗುವುದಿಲ್ಲ ಎಂಬ ಅರ್ಥವನ್ನೂಸೂಚಿಸುತ್ತವೆ.

- ಸೂತ್ರ: ಕ್ರಿಯೆ ನಡೆಯುವುದಿಲ್ಲ ಎಂಬ ಅರ್ಥವನ್ನು ಸೂಚುಸುವ ಕ್ರಿಯಾಪದಗಳೆ ನಿಷೇಧಾರ್ಥಕ ಕ್ರಿಯಾಪದಗಳು.
- ಈ ಕೆಳಗಿನ ವಾಕ್ಯಗಳನ್ನು ಗಮನಿಸಿ

1) ಅವರು ನಾಳೆ ಬಂದಾರು. 2) ಚೆಂಡು ಮೇಲಕ್ಕೆ ಹೋದೀತು.

ಈ ವಾಕ್ಯಗಳಲ್ಲಿ ಬರುವ ಬಂದಾರು ಹೋದೀತು ಎಂಬ ಕ್ರಿಯಾಪದಗಳು ಸಂಶಯ ಅಥವಾ ಊಹೆಯನ್ನು ಸೂಚಿಸುತ್ತವೆ.

ಸೂತ್ರ: ಕ್ರಿಯೆ ನಡೆಯುವ ಬಗ್ಗೆ ಸಂಶಯ ಅಥವಾ ಊಹೆಯನ್ನು ವ್ಯಕ್ತಪಡಿಸುವಂತಹ ಪದಗಳೇ ಸಂಭಾವನಾರ್ಥಕ ಕ್ರಿಯಾಪದಗಳು.

- **ಕಾಲಗಳ ಸ್ಥೂಲ ಪರಿಚಯ ವಿವರ :**

  ನಮೂದಿತ ವಾಕ್ಯಗಳನ್ನು ಗಮನಿಸಿ

  –ಅವನು ಶಾಲೆಗೆ ಹೋಗುತ್ತಾನೆ

–ಅವನು ಶಾಲೆಗೆ ಹೋದನು

–ಅವನು ಶಾಲೆಗೆ ಹೋಗುವನು

ಮೂರು ವಾಕ್ಯಗಳಲ್ಲಿ ಹೋಗು ಎಂಬ ಪದ ಧಾತುವಾಗಿದ್ದು ಇದರ ಜತೆಗೆ ಮೊದಲ ವಾಕ್ಯದಲ್ಲಿ –ಉತ್ತ ಎರಡನೇ ವಾಕ್ಯದಲ್ಲಿ –ದ ಮೂರನೆ ವಾಕ್ಯದಲ್ಲಿ –ವ ಎಂಬ ಪ್ರತ್ಯಯ ಇರುವುದನ್ನು ಗಮನಿಸಬಹುದು.

ಇವುಗಳಲ್ಲಿ –ಉತ್ತ ಎಂಬುದು ವರ್ತಮಾನ ಕಾಲವನ್ನೂ –ದ ಎಂಬುದು ಭೂತಕಾಲವನ್ನೂ –ವ ಎಂಬುದು ಭವಿಷ್ಯತ್ ಕಾಲವನ್ನೂ ಸೂಚಿಸುವ ಪ್ರತ್ಯಯಗಳಾಗಿರುವುದರಿಂದ ಮೊದಲ ವಾಕ್ಯ ವರ್ತಮಾನಕಾಲದಲ್ಲೂ ಎರಡನೆಯ ವಾಕ್ಯ ಭೂತಕಾಲದಲ್ಲೂ ಮೂರನೆಯ ವಾಕ್ಯ ಭವಿಷ್ಯತ್ ಕಾಲದಲ್ಲೂ ಇವೆ ಎಂದು ತಿಳಿಯಬೇಕು.

ಧಾತುಗಳಿಗೆ 'ಉತ್ತ' ಎಂಬ ಕಾಲಸೂಚಕ ಪ್ರತ್ಯಯ ಸೇರಿದಾಗ ವರ್ತಮಾನ ಕಾಲ ರೂಪವೂ 'ದ' ಎಂಬ ಪ್ರತ್ಯಯ ಸೇರಿದಾಗ ಭೂತಕಾಲ ರೂಪವೂ 'ವ' ಎಂಬ ಪ್ರತ್ಯಯ ಸೇರಿದಾಗ ಭವಿಷತ್ ಕಾಲರೂಪವೂ ಉಂಟಾಗುತ್ತದೆ. ಧಾತುಗಳಿಗೆ ಕಾಲಸೂಚಕದ ಜೊತೆಗೆ ಅಖ್ಯಾತ ಪ್ರತ್ಯಯಗಳು ಸೇರಿದಾಗ ಪುರುಷವಾಚಕಗಳಿಗೆ ಅನುಗುಣವಾಗಿ ಬೇರೆಬೇರೆ ರೂಪಗಳನ್ನು ಹೊಂದುತ್ತವೆ.

ಉದಾ:

| ಕಾಲ | ಉತ್ತಮ ಪುರುಷ | ಮಧ್ಯಮಪುರುಷ | ಅನ್ಯಪುರುಷ |
|---|---|---|---|
| ವರ್ತಮಾನ ಕಾಲ | ತಿನ್ನುತ್ತೇನೆ | ತಿನ್ನುತ್ತಿ | ತಿನ್ನುತ್ತಾನೆ |
| ಭೂತಕಾಲ | ತಿಂದೆನು | ತಿಂದೆ | ತಿಂದನು |
| ಭವಿಷತ್ಕಾಲ | ತಿನ್ನುವೆನು | ತಿನ್ನುವೆ | ತಿನ್ನುವನು |

## ಸಂಧಿ ಪರಿಚಯಾತ್ಮಕ ವಿವರ:

ಮಾತನಾಡುವಾಗ ಕೆಲವು ಪದಗಳನ್ನು ಬಿಡಿಬಿಡಿಯಾಗಿ ಹೇಳದೆ ಕೂಡಿಸಿ ಹೇಳುತ್ತೇವೆ. ಉದಾ: ಅಲ್ಲಿ ಅಲ್ಲಿ ಎಂಬ ಎರಡು ಪದಗಳನ್ನು ಅಲ್ಲಲ್ಲಿ ಎಂದು ಒಂದೇ ಪದವಾಗಿ ಹೇಳುತ್ತೇವೆ. ಹೀಗೆ ಪದರಚನೆಯಾಗುವಾಗ ಎರಡು ಅಕ್ಷರಗಳು ಕಾಲವಿಳಂಬವಿಲ್ಲದೆ ಒಟ್ಟು ಸೇರುವುದೇ ಸಂಧಿ.ಈ ರೀತಿ ಪದಗಳು ಒಟ್ಟಾಗಿ ಸೇರುವಾಗ ಮೂಲ ಪದಗಳ ಅರ್ಥಕ್ಕೆ ಯಾವ ಲೋಪವೂ ಬರಬಾರದು. ಅರ್ಥಕ್ಕೆ ಲೋಪ ಬರುವುದಾದಲ್ಲಿ ಸಂಧಿ ಮಾಡಬಾರದೆಂಬ ನಿಯಮವುಂಟು.

ಹೀಗೆ ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಇದ್ದು ಸಂಧಿಯಾದರೆ ಅದು ಸ್ವರ ಸಂಧಿ. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ಸ್ವರ ಇದ್ದು ಸಂದಿಯಾದರೆ ಅದು ವ್ಯಂಜನ ಸಂಧಿ.

1 Manjunathಗ Manjunath

**ಈ ಸಂಧಿಗಳಲ್ಲಿ ಎರಡು ವಿಧಗಳಿವೆ. 1) ಕನ್ನಡ ಸಂಧಿ  2) ಸಂಸ್ಕೃತ ಸಂಧಿ**

**ಕನ್ನಡ ಪದಗಳೇ ಸೇರಿ  ಅಥವಾ ಕನ್ನಡ ಮತ್ತು ಸಂಸ್ಕೃತ ಪದಗಳು ಸೇರಿ ಸಂಧಿಯಾದರೆ 'ಕನ್ನಡ ಸಂಧಿ'**

**ಎಂತಲೂ ಸಂಸ್ಕ್ರತ ಪದಗಳು ಸೇರಿ ಸಂಧಿಯಾದರೆ ಸಂಸ್ಕೃತಸಂಧಿ ಎಂತಲೂ ಕರೆಯಲ್ಪಡುತ್ತವೆ.**

- **ಕನ್ನಡ ಸಂಧಿ :**

**ಕನ್ನಡ ಸಂಧಿಗಳಲ್ಲಿ ಮೂರು ವಿಧಗಳು. ಅವುಗಳೆಂದರೆ ಲೋಪಸಂಧಿ ,ಆಗಮಸಂಧಿ ,ಆದೇಶ ಸಂಧಿ.**

- **ಲೋಪಸಂಧಿ:**
  **ನಾನು+ಇಲ್ಲ                    ಬೇರೆ+ಒಬ್ಬ=ಬೇರೊಬ್ಬ**
  **ಉ+ಇ=  ಇ                     ಎ +ಒ=  ಒ**

**ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಉ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಇ ಕಾರವುಪರವಾಗಿ ಸಂಧಿಯಾದಾಗ ಪೂರ್ವ ಪದದ ಅಂತ್ಯದಲ್ಲಿರುವ ಉ ಕಾರವು ಲೋಪವಾಗಿರುವುದು ಕಂಡು ಬರುತ್ತದೆ.**

- **ಸೂತ್ರ :  ಸಂಧಿಕಾರ್ಯ ಆಗುವಾಗ ಸ್ವರದ ಮುಂದೆ ಸ್ವರ ಬಂದು ಪೂರ್ವಪದದ ಸ್ವರ ಲೋಪವಾದರೆ ಅದು ಲೋಪಸಂಧಿ**

**ಉದಾ: ಊರಿಂದ, ಮುಚ್ಚಿಟ್ಟು, ಹೆಸರಾಗಿದೆ, ಒಬ್ಬೊಬ್ಬ, ನೀನಖಿಲ, ಅವನೊಬ್ಬ, ಉಸಿರಾಡು, ಊರೂರು ಬಲ್ಲೆನೆಂದು, ಮಾತಂತು, ಸಂಪನ್ನರಾದ, ಇರುಳಳಿದು, ತೆರೆದಿಕ್ಕುವ, ತಪ್ಪಲೀಯದೆ, ಕಾಣಲಾಗದು, ಲೇಖನವನೋದಿ, ತೆದೆದುತ್ತರೀಯಮಂ, ಬೇಡಬೆಡರಸುಗಳ, ನಿಂತಿರ್ದನು,ಕಾದಾಟದಾಟ,ಆದನೆಂದು**

- **ಆಗಮಸಂಧಿ :**
  **ಮನೆ+ಅಲ್ಲಿ=ಮನೆಯಲ್ಲಿ        ನದಿ+ಇಂದ=ನದಿಯಿಂದ   ಮಗು+ಅನ್ನು=ಮಗುವನ್ನು**

**ಇಲ್ಲಿ ಪೂರ್ವ ಪದ ಮತ್ತು ಉತ್ತರ ಪದದ ಆದಿಯಲ್ಲಿರುವ ಸ್ವರಗಳು ಸೇರಿ ಸಂಧಿಯಾದಾಗ  'ಯ' ಅಥವಾ 'ವ' ಎಂಬ ಅಕ್ಷರಗಳು ಹೊಸದಾಗಿ ಬಂದಿರುವುದು  ಕಂಡು ಬರುತ್ತದೆ.**

- **ಸೂತ್ರ: ಸ್ವರದ ಮುಂದೆ ಸ್ವರ ಬಂದು ಸಂಧಿಯಾಗುವಾಗ 'ಯ' ಕಾರ ಅಥವಾ 'ವ' ಕಾರವು ಈ ಸ್ವರಗಳ ಮಧ್ಯೆ ಹೊಸದಾಗಿ ಬಂದು ಸೇರಿದರೆ ಅದು ಆಗಮ ಸಂಧಿ.**
  **ಉದಾಹರಣೆ: ಭೇಧವಿಲ್ಲ,ಕೈವಿಡಿದು,ವೃದ್ಧಿಯಾಗಿ,ಮನೆಯಲ್ಲಿ ,ನದಿಯಲ್ಲಿ,ನಗುವಿಗೆ,ವಧುವನ್ನು ಕೈಯನ್ನು,ಹೂವಿಂದ,ಹಸುವನ್ನು,ಮರವನ್ನು,ಶಾಲೆಯಿಂದ,ಕೆರೆಯಲ್ಲಿ ಇತ್ಯಾದಿ**

- **ಆದೇಶ ಸಂಧಿ :**

  **ಹುಲ್ಲು+ಕಾವಲು=ಹುಲ್ಲುಗಾವಲು  ಮೈ+ತೊಳೆ=ಮೈದೊಳೆ  ಕಣ್+ಪನಿ=ಕಂಬನಿ**
  **ಕಡು+ಪೇಳ್ಪು =ಕಡುವೆಳ್ಪು,  ಮೆಲ್ +ಮಾತು=ಮೆಲ್ವಾತು**

ಇಲ್ಲಿ ಸಂಧಿಯಾಗುವಾಗ ಉತ್ತರ ಪದದ ಆದಿಯಲ್ಲಿರುವ ಕ ಕಾರದ ಬದಲಿಗೆ ಗ ಕಾರವೂ, ತ ಕಾರದ ಬದಲಿಗೆ ದ ಕಾರವು ಆದೇಶವಾಗಿ ಬಂದಿದೆ.(ಅಂದರೆ ಒಂದು ಅಕ್ಷರದ ಬದಲಿಗೆ ಬೇರೊಂದು ಅಕ್ಷರ ಬಂದಿದೆ)

- **ಸೂತ್ರ: ಸಂಧಿ ಕ್ರಿಯೆ ಆಗುವಾಗ ಉತ್ತರ ಪದದ ಆದಿಯಲ್ಲಿರುವ ವ್ಯಂಜನದ ಬದಲಿಗೆ ಬೇರೊಂದು ವ್ಯಂಜನ ಬಂದು ಸೇರುವುದೇ ಆದೇಶ ಸಂಧಿ ( ಕ ತ ಪ ಗಳಿಗೆ ಗ ದ ಬ ಗಳು ಕೆಲವೊಮ್ಮೆ ಪ ಬ ಮ ಗಳಿಗೆ ' ವ ' ಕಾರವೂ ಆದೇಶವಾಗಿ ಬರುತ್ತದೆ.)**

**ಉದಾ: ಬೆಂಬತ್ತು,ಕೆನೆವಾಲ್,ಕಂಬನಿ,ಬೆಟ್ಟದಾವರೆ,ತಲೆಗೂದಲು,ಬರಿಗನಸು,ಸಿರಿಗನ್ನಡ,ಹಳಗನ್ನಡ, ಹೊಸಗಾಲ ಹಗಲುಗನಸು,ಹುಲ್ಲುಗಾವಲು,ಮೈದೋರು,ಮಳೆಗಾಲ,ಚಳಿಗಾಲ,**

- **ಪ್ರಕೃತಿ ಭಾವ :**

**ಆ+ ಆಡು , ಅಯ್ಯೋ+ಇದೇನು , ಓಹೋ+ಅಜ್ಜಿ ಬಂದರೇ , ಅಕ್ಕಾ+ಇತ್ತಬಾ.**

ಈ ಉದಾಹರಣೆಯನ್ನು ಗಮನಿಸಿದಾಗ ಸ್ವರದ ಮುಂದೆ ಸ್ವರ ಬಂದಿರುವುದರಿಂದ ಲೋಪ ಅಥವಾ ಆಗಮ ಸಂಧಿ ಆಗಬೇಕಿತ್ತು. ಹಾಗೆ ಸಂಧಿ ಮಾಡಿದರೆ ಅರ್ಥ ಕೆಡುತ್ತದೆ. ಹಾಗಾಗಿ ಸಂಧಿ ಮಾಡುವುದಿಲ್ಲ ಪ್ಲುತ ಸ್ವರದ ಮುಂದೆ ಸ್ವರ ಬಂದಾಗ :ಅಯ್ಯೋ,ಆಹಾ,ಓಹೋ ಮುಂತಾದ ಭಾವಸೂಚಕ ಅವ್ಯಯಗಳ ಮುಂದೆ ಸ್ವರ ಬಂದಾಗ ಹಾಗೂ ಆ ಎಂಬ ಪದದ ಮುಂದೆ (ಅಕ್ಷರದ ಮುಂದೆ ಅಲ್ಲ) ಸ್ವರ ಬಂದಾಗ ಸಂಧಿ ಮಾಡಬಾರದು .

- **ಸಂಸ್ಕೃತ ಸಂಧಿಗಳ ಸ್ಥೂಲ ವಿವರ :**

**ಸಂಸ್ಕೃತ ಸಂಧಿಗಳಲ್ಲಿ ನಾಲ್ಕು ಸ್ವರ ಸಂಧಿಗಳು ಹಾಗೂ ಮೂರು ವ್ಯಂಜನ ಸಂಧಿಗಳಿವೆ. ಅವುಗಳೆಂದರೆ 1) ಸವರ್ಣಧೀರ್ಘಸಂಧಿ 2)ಗುಣಸಂಧಿ 3) ವೃದ್ದಿಸಂದಿ 4)ಯಣ್ ಸಂಧಿ 5) ಜಸ್ತ್ವ ಸಂಧಿ 6) ಶ್ಚುತ್ವ ಸಂಧಿ 7) ಅನುನಾಸಿಕ ಸಂಧಿ**

- **ಸವರ್ಣ ದೀರ್ಘ ಸಂಧಿ:**

  **1) ವಿದ್ಯಾಭ್ಯಾಸ ಮಾಡು .   2) ಗುರೂಪದೇಶವನ್ನು ಪಡೆ**

**ನಮೂದಿತ ಎರಡೂ ಹೇಳಿಕೆಗಳಲ್ಲಿರುವ ವಿದ್ಯಾಭ್ಯಾಸ, ಗುರೂಪದೇಶ ಪದಗಳನ್ನು ಗಮನಿಸಿ**

ವಿದ್ಯಾ + ಅ ಭ್ಯಾ ಸ > ವಿದ್ಯಾ ಭ್ಯಾಸ

ದ್ + ಯ್+ಆ+ ಅ > ದ್+ಯ್ +ಆ

ಇಲ್ಲಿ ಪೂರ್ವಪದದ ಕೊನೆಯಲ್ಲಿರುವ ಆ ಸ್ವರದ ಮುಂದೆ ಉತ್ತರ ಪದದ ಆದಿಯಲ್ಲಿ ಅ ಸ್ವರ ಇರುವುದು ಇವೆರಡು ಸ್ವರಗಳು ಒಂದೇ ಸ್ಥಾನದಲ್ಲಿ ಹುಟ್ಟುವುದರಿಂದ ಇವು ಸವರ್ಣಗಳು. ಈ ಸವರ್ಣ ಸ್ವರಗಳು ಸಂಧಿಯಾದಾಗ ದೀರ್ಘಸ್ವರವಾಗಿ ಪರಿವರ್ತನೆಯಾಗುತ್ತದೆ.ಹಾಗಾಗಿ ಇದನ್ನು ಸವರ್ಣಧೀರ್ಘಸಂಧಿ ಎಂದು ಕರೆಯಲಾಗಿದೆ.

ಗುರು+ಉಪದೇಶ = ಗುರೂಪದೇಶ

ರ್+ಉ+ಉ > ರ್+ಊ

ಇಲ್ಲಿಯೂ ಎರಡು ಉ ಕಾರಗಳು ಸೇರಿ ಊ ಕಾರ ಆಗಿದೆ. ಹಾಗಾಗಿ ಇದು ಕೂಡಾ ಸವರ್ಣ ಧೀರ್ಘಸಂಧಿಗೆ ಉದಾಹರಣೆ

- ಸೂತ್ರ: ಸವರ್ಣಸ್ವರಗಳು ಒಂದರ ಮುಂದೆ ಒಂದು ಸೇರಿ ಸಂಧಿಯಾದಾಗ ಅವೆರಡರ ಸ್ಥಾನದಲ್ಲಿ ಅದೆ ಜಾತಿಯ ದೀರ್ಘಸ್ವರ ಆದೇಶವಾಗಿ ಬಂದರೆ ಅದನ್ನು ಸವರ್ಣಧೀರ್ಘಸಂಧಿ ಎಂದು ಕರೆಯುವರು.

ಉದಾ:

ಹರೀಶ, ಕವೀಂದ್ರ, ಮಂತ್ರಾಲಯ, ಕಾರ್ಯಾಲಯ, ಮಹಾತ್ಮ, ಗ್ರಂಥಾಲಯ, ಶಿವಾಲಯ, ದೇವಾಲಯ, ಏಕಾಕ್ಷ, ಹಿಮಾಚಲ, ಸ್ವರಾಚಲ, ರಾಜಾನ್ನ, ಕೋಪಾರುಣ, ಕಾಲಾಗ್ನಿ, ಗರ್ವಾಲಂಕೃತ, ಕೋಪಾರಕ್ತ,ಗಿರೀಶ,ಸುರಾಸುರ,ವಧೂಪೇತ,ಜಿನಾಲಯ,ಚಂದ್ರಾರ್ಕ ,ರಾಜೀವ,ಗುರೂಪದೇಶ

- **ಗುಣಸಂಧಿ:**

1) ದೇವೇಂದ್ರನ ಸಭೆ 2) ಅರುಣೋದಯವಾಯಿತು

ಇಲ್ಲಿರುವ ದೇವೇಂದ್ರ ಮತ್ತು ಅರುಣೋದಯ ಪದಗಳನ್ನು ಗಮನಿಸಿ

ದೇವ+ಇಂದ್ರ > ದೇವೇಂದ್ರ

ವ್+ಅ+ಇಂ > ವ್+ಏಂ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಇ ಕಾರ ಸೇರಿ ಏ ಕಾರ ಆದೇಶವಾಗಿದೆ.

ಅರುಣ+ಉದಯ > ಅರುಣೋದಯ

ಣ್+ಅ+ಉ > ಣ್+ಓ

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಉ ಕಾರ ಸೇರಿ ಓ ಕಾರ ಆದೇಶವಾಗಿದೆ.

- ಸೂತ್ರ:_ ಅಆ ಕಾರಗಳಿಗೆ ಇಈ ಕಾರಗಳು ಪರವಾದರೆ ಅವೆರಡರ ಸ್ಥಾನದಲ್ಲಿ ಏ ಕಾರವೂ ಉಊ ಕಾರಗಳು ಪರವಾದರೆ ಓ ಕಾರವೂ ಋ ಕಾರ ಪರವಾದರೆ ಅರ್ ಕಾರವೂ ಆದೇಶವಾಗಿ ಬಂದರೆ ಅದು ಗುಣ ಸಂಧಿ.
-

ಉದಾಹರಣೆ:ಸೂರ್ಯೋದಯ,ಗಜೇಶ,ಸುರೇಶ,ಮಂಡಳೇಶ್ವರ,ಗಜೇಂದ್ರ,ಚಂದ್ರೋದಯ,ಮಹರ್ಷಿ ರಾಜರ್ಷಿ,ವಂಶೋದ್ಧಾರಕ,ಮಹೇಶ

- **ವೃದ್ಧಿಸಂಧಿ:**

**ಅವನು ಏಕೈಕ ವೀರ** ಇಲ್ಲಿರುವ **ಏಕೈಕ** ಪದವನ್ನು ಗಮನಿಸಿ

**ಏಕ + ಏಕ > ಏಕೈಕ**

**ಕ್+ಅ + ಏ > ಕ್+ಐ**

**ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಅ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಏ ಕಾರವು ಪರವಾಗಿ ಸಂಧಿಯಾದಾಗ ಐ ಕಾರವು ಆದೇಶವಾಗಿ ಬರುತ್ತದೆ.**

- **ಸೂತ್ರ : 'ಅಆ' ಕಾರಗಳಿಗೆ 'ಏಐ'ಕಾರಗಳು ಪರವಾದಾಗ ಅವೆರಡರ ಸ್ಥಾನದಲ್ಲಿ 'ಐ'ಕಾರವೂ 'ಓಔ' ಕಾರಗಳು ಪರವಾದಾಗ 'ಔ' ಕಾರವು ಆದೇಶವಾಗಿ ಬಂದರೆ (ಐ,ಔ ಕಾರಗಳು ಆದೇಶವಾಗಿ ಬಂದರೆ) ಅದು ವೃದ್ಧಿ ಸಂಧಿ ಎನಿಸುವುದು.**

**ಉದಾ:**

**ಜನೈಕ್ಯ,ವನೌಷಧಿ,ಮಹೌದಾರ್ಯ,ಲೋಕೈಕವೀರ,ಭಾವೈಕ್ಯ,ಮಹೌನ್ನತ್ಯ,ಏಕೈಕ,ವನೌಷಧ,ಅಷ್ಟೈಶ್ವರ್ಯ**

- **ಯಣ್ ಸಂಧಿ:**

**ಅವನು ಅತ್ಯಂತ ಪರಾಕ್ರಮಿ ಈ ವಾಕ್ಯದಲ್ಲಿರುವ ಅತ್ಯಂತ ಎಂಬ ಪದವನ್ನು ಗಮನಿಸಿ**

**ಅತಿ+ಅಂತ >ಅತ್ಯಂತ**

**ತ್+ಇ+ಅಂ >ತ್+ಯ್+ಅಂ**

**ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಇ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಅಂ ಕಾರವು ಸೇರಿ ಸಂಧಿಯಾದಾಗ ಇ ಕಾರದ ಬದಲಿಗೆ ಯ್ ಕಾರ ಆದೇಶವಾಗಿದೆ.**

- **ಸೂತ್ರ: 'ಇ,ಈ,ಉ,ಊ,ಋ' ಕಾರಗಳಿಗೆ ಸವರ್ಣವಲ್ಲದ ಸ್ವರ ಪರವಾದರೆ 'ಇ,ಈ'ಕಾರಗಳಿಗೆ 'ಯ್'ಕಾರವೂ 'ಉ,ಊ'ಕಾರಗಳಿಗೆ 'ವ್' ಕಾರವೂ 'ಋ'ಕಾರಕ್ಕೆ 'ರ್' ಕಾರವೂ ಆದೇಶವಾಗಿ ಬಂದರೆ ಇದನ್ನು ಯಣ್ ಸಂಧಿ ಎನ್ನುವರು**

**ಉದಾ**

**ಅತ್ಯಂತ, ಇತ್ಯಾದಿ, ಗತ್ಯಂತರ, ಅಧ್ಯಾತ್ಮ, ಅತ್ಯವಸರ,ಗುರ್ವಾಜ್ಞೆ,ಅತ್ಯಮೂಲ್ಯ,ಕೋಟ್ಯಧೀಶ,ಮನ್ವಂತರ,ಪಿತ್ರರ್ಥ ಅತ್ಯುನ್ನತ, ಪ್ರತ್ಯುತ್ತರ,ಶಾಲ್ಯನ್ನ, ಪರ್ಯಾವಸಾನ,ಜಾತ್ಯಾತೀತ,ಮನ್ವಾದಿ,ಪಿತ್ರಾರ್ಜಿತ**

**ಸಂಸ್ಕೃತ ವ್ಯಂಜನ ಸಂಧಿಗಳ ಸ್ಥೂಲ ವಿವರ**

- **ಜಸ್ತ್ವ ಸಂಧಿ :**

**ಷಣ್ಮುಕನಿಗೆ ಷಡಾನನ ಎಂಬ ಹೆಸರೂ ಇದೆ.**

ಈ ವಾಕ್ಯದಲ್ಲಿರುವ **ಷಡಾನನ** ಪದರಚನೆಯನ್ನು ಗಮನಿಸಿ

**ಷಟ್+ಆನನ > ಷಡಾನನ**

**ಟ್+ಆ > ಡ್+ಆ**

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಟ (ವರ್ಗದ ಪ್ರಥಮಾಕ್ಷರಕ್ಕೆ) ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಆ ಕಾರವು ಪರವಾಗಿ ಸಂಧಿಯಾದಾಗ ಡ ಕಾರ(ಅದೇ ವರ್ಗದ ತೃತೀಯಾಕ್ಷರ) ಆದೇಶವಾಗಿ ಬಂದಿದೆ.

- **ಸೂತ್ರ: ಪೂರ್ವಪದದ ಕೊನೆಯಲ್ಲಿರುವ ವರ್ಗದ ಪ್ರಥಮಾಕ್ಷರಕ್ಕೆ ಅಂದರೆ ಕ್,ಚ್,ಟ್,ತ್,ಪ್ಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೇ ವ್ಯಂಜನಾಕ್ಷರಗಳಾದ ಗ್,ಜ್,ಡ್,ದ್,ಬ್ ಗಳು ಆದೇಶವಾಗಿ ಬರುವುದಕ್ಕೆ ಜಶ್ತ್ವ ಸಂಧಿ ಎನ್ನುವರು**

**ಉದಾ: ಸದಾನಂದ, ಅಬ್ಧಿ, ದಿಗಂತ, ಸದಾನಂದ,ವಾಗ್ದೇವಿ,ಅಜಂತ,ಷಡಂಗ,ಚಿದಾನಂದ ಇತ್ಯಾದಿ**

## • ಶ್ಚುತ್ವ ಸಂಧಿ:

**ಮನವನಿಗೆ ಮನಶ್ಶುದ್ಧಿ ಇರಬೇಕು**

ಈ ವಾಕ್ಯದಲ್ಲಿರುವ **ಮನಶ್ಶುದ್ಧಿ** ಪದರಚನೆಯನ್ನು ಗಮನಿಸಿ

**ಮನಸ್+ಶುದ್ಧಿ > ಮನಶ್ಶುದ್ಧಿ**

**ಸ್+ಶ್+ಉ > ಶ್+ಶ್+ಉ**

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಸ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಶ ಕಾರವು ಪರವಾಗಿ ಸಂಧಿಯಾದಾಗ ಪೂರ್ವ ಪದದ ಅಂತ್ಯದಲ್ಲಿರುವ ಸ ಕಾರಕ್ಕೆ ಶ ಕಾರ ಆದೇಶವಾಗಿ ಬಂದಿದೆ.

- **ಸೂತ್ರ : ಸ್ ಕಾರ,ತ್ ವರ್ಗಾಕ್ಷರಗಳಿಗೆ ಶ್ ಕಾರ ಚ್ ವರ್ಗಾಕ್ಷರಗಳು ಪರವಾದಾಗ ಸ್ ಕಾರಕ್ಕೆ ಶ್ ಕಾರವೂ ತ್ ವ ರ್ಗ(ತ್,ಥ್,ದ್,ಧ್,ನ್)ಗಳಿಗೆ ಚ್ ವರ್ಗ(ಚ್,ಛ್,ಜ್,ಜ್,ಞ್)ಗಳು ಆದೇಶವಾಗಿ ಬರುವುದಕ್ಕೆ ಶ್ಚುತ್ವಸಂದಿ ಎನ್ನುವರು.**

**ಉದಾ: ಮನಶ್ಚಂಚಲ, ಜಗಜ್ಜ್ಯೋತಿ, ಚಲಚ್ಚಿತ್ರ, ಶರಚ್ಚಂದ್ರ , ಸಚ್ಚಿತ್ರ ,ಬೃಹಜ್ಜ್ಯೋತಿ.**

## • ಅನುನಾಸಿಕ ಸಂಧಿ:

**ಅನುನಾಸಿಕ ಅಕ್ಷರಗಳಾದ ಙ್ ಞ್,ಣ್,ನ್.ಮ್ ವ್ಯಂಜನಗಳು ಆದೇಶವಾಗಿ ಬರುವ ಸಂಧಿಗಳೇ ಅನುನಾಸಿಕ ಸಂಧಿ**

ಉದಾ: **ವಾಕ್+ಮಯ > ವಾಙ್ಮಯ**

**<u>ಕ್</u>+<u>ಮ್</u>+ಅ > <u>ಙ್</u>+<u>ಮ್</u>+ಅ**

ಇಲ್ಲಿ ಪೂರ್ವ ಪದದ ಅಂತ್ಯದಲ್ಲಿರುವ ಕ ಕಾರಕ್ಕೆ ಉತ್ತರ ಪದದ ಆದಿಯಲ್ಲಿರುವ ಮ ಕಾರವು ಪರವಾಗಿ ಸಂಧಿಯಾದಾಗ ಕ ಕಾರದ ಬದಲಿಗೆ ಅದೇ ವರ್ಗದ ಅನುನಾಸಿಕ ಅಕ್ಷರ ಙ ಕಾರ ಆದೇಶವಾಗಿ ಬಂದಿದೆ.

**–ಸೂತ್ರ :ವರ್ಗದ ಪ್ರಥಮಾಕ್ಷರ ಗಳಿಗೆ (ಕ್,ಚ್,ಟ್,ತ್,ಪ್) ಯಾವುದೇ ಅನುನಾಸಿಕ ಅಕ್ಷರಗಳು ಪರವಾದರೂ ಅವುಗಳಿಗೆ ಅಂದರೆ ವರ್ಗದ ಪ್ರಥಮಾಕ್ಷರ ಗಳಿಗೆ ಅದೇ ವರ್ಗದ ಅನುನಾಸಿಕ ಅಕ್ಷರಗಳು (ಙ,ಞ,ಣ,ನ,ಮ) ಗಳು ಆದೇಶವಾಗಿ ಬರುತ್ತವೆ ಇದಕ್ಕೆ ಅನುನಾಸಿಕ ಸಂಧಿ ಎನ್ನುವರು**

**ಉದಾ: ಸನ್ಮಣಿ,ತನ್ಮಯ,ಉನ್ಮದ ದಿಜ್ಞೂಡ. ಷಣ್ಮಾಸ, ಚಿನ್ಮಯ, ಷಣ್ಮುಖ ,ಉನ್ಮಾದ**

- **ಸಮಾಸಗಳು:**

  **ಮೈಸೂರಿನ ಅರಮನೆ ಸುಂದರವಾಗಿದೆ**
  **ಹುಣಸೆ ಮರದಲ್ಲಿ ಹೆಜ್ಜೇನು ಗೂಡು ಕಟ್ಟಿದೆ**

ಈ ಎರಡು ವಕ್ಯಗಳಲ್ಲಿರುವ **ಅರಮನೆ , ಹೆಜ್ಜೇನು** ಎಂಬ ಎರಡು ಪದಗಳನ್ನು ಗಮನಿಸಿದಾಗ **ಅರಮನೆ** ಎಂಬ ಪದ **ಅರಸನ ಮನೆ** ಎಂಬ ಅರ್ಥವನ್ನೂ **ಹೆಜ್ಜೇನು** ಎಂಬ ಪದ **'ಹಿರಿದಾದ ಜೇನು'** ಎಂಬ ಅರ್ಥವನ್ನೂ ಕೊಡುವ ಪದಗಳೆಂದು ತಿಳಿದು ಬರುತ್ತದೆ.
**ಹೀಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಪದಗಳು ಅರ್ಥಕ್ಕೆ ಅನುಸಾರವಾಗಿ ಸೇರಿ ಪೂರ್ವಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯ ಇದ್ದರೆ ಅದು ಲೋಪವಾಗಿ ಒಂದು ಪದವಾಗುವುದೇ ಸಮಾಸ.**

**ಸಮಾಸದಲ್ಲಿ ಬರುವ ಮೊದಲನೆ ಪದವು ಪೂರ್ವಪದವೆಂದೂ ನಂತರ ಬರುವ ಪದವನ್ನು ಉತ್ತರ ಪದವೆಂದೂ ಕರೆಯುವರು. ಸಮಸ್ತ ಪದವನ್ನು ಬಿಡಿಸಿ ಬರೆಯುವುದಕ್ಕೆ ವಿಗ್ರಹವಾಕ್ಯ ಎನ್ನುವರು.**
**ಪೂರ್ವಪದ+ ಉತ್ತರ ಪದ = ವಿಗ್ರಹವಾಕ್ಯ**
**ಚಳಿಯ+ಕಾಲ= ಚಲಿಗಾಲ**
**ಹಿರಿದಾದ+ ಜೇನು= ಹೆಜ್ಜೇನು**

## ಕನ್ನಡದಲ್ಲಿ ಒಟ್ಟು ಎಂಟು ಸಮಾಸಗಳಿವೆ ಅವುಗಳೆಂದರೆ

**1) ತತ್ಪುರುಷ ಸಮಾಸ 2) ಕರ್ಮಧಾರೆಯ ಸಮಾಸ 3) ದ್ವಿಗುಸಮಾಸ 4) ದ್ವಂದ್ವಸಮಾಸ 5) ಕ್ರಿಯಾ ಸಮಾಸ 6) ಅಂಶಿಸಮಾಸ 7) ಬಹುವ್ರೀಹಿಸಮಾಸ 8) ಗಮಕಸಮಾಸ**

- **ತತ್ಪುರುಷ ಸಮಾಸ**

  **ಹಗಲಿನಲ್ಲಿ+ಕನಸು= ಹಗಲುಗನಸು (ಸಪ್ತಮೀ ತತ್ಪುರುಷ)**
  **ಬೆಟ್ಟದ+ತಾವರೆ =ಬೆಟ್ಟದಾವರೆ (ಷಷ್ಠೀ ತತ್ಪುರುಷ)**
  **ವಯೋಸ್ಸಿನಿಂದ+ವೃದ್ದ= ವಯೋವೃದ್ದ (ತೃತೀಯಾ ತತ್ಪುರುಷ)**

**ಕೊಟ್ಟಿರುವ ಪದಗಳನ್ನು ಗಮನಿಸಿದಾಗ ಎರೆಡೆರಡು ಪದಗಳು ಸೇರಿ ಒಂದು ಪದವಾಗಿರುವುದು,ಪೂರ್ವ ಪದದ ಅಂತ್ಯದಲ್ಲಿ ವಿಭಕ್ತಿ ಪ್ರತ್ಯಯವಿದ್ದು ಸಮಾಸವಾಗುವಾಗ ಆಪ್ರತ್ಯಯಗಳು ಲೋಪವಾಗಿರುವುದು ಕಂಡು ಬರುತ್ತದೆ.ಯಾವ ವಿಭಕ್ತಿ ಪ್ರತ್ಯಯ ಲೋಪವಾಗಿದೆಯೋ ಅದರ ಆಧಾರದಿಂದ ಸಮಾಸವನ್ನು ಹೆಸರಿಸುವರು.**

–ಸೂತ್ರ : ಪೂರ್ವೋತ್ತರ ಪದಗಳು ನಾಮಪದಗಳಾಗಿದ್ದು ಪೂರ್ವ ಪದದ ಅಂತ್ಯದಲ್ಲಿರುವ ವಿಭಕ್ತಿ ಪ್ರತ್ಯಯ ಸಮಾಸವಾಗುವಾಗ ಲೋಪವಾದರೆ ಅದೇ ತತ್ಪುರುಷ ಸಮಾಸ.ಇದರಲ್ಲಿ ಉತ್ತರ ಪದದ ಅರ್ಥ ಪ್ರಧಾನ

ಉದಾ: ಬೆಟ್ಟದಾವರೆ, ತಲೆನೋವು, ಸ್ವಾಮಿದ್ರೋಹ, ಪರಧನ, ಧನಹರಣ, ಮದಾಂಧ, ಇನತನೂಜ, ಮೇದಿನೀಪತಿ, ಪೂದೋಟ , ರಾಜ್ಯರಕ್ಷಣೆ, ಅರಮನೆ, ರಾಜಪುತ್ರಿ,

- ಕರ್ಮಧಾರೆಯ ಸಮಾಸ:

ಹೊಸದು+ಕನ್ನಡ=ಹೊಸಗನ್ನಡ ಚಿಕ್ಕದು+ಮಗು=ಚಿಕ್ಕಮಗು
ದಿವ್ಯವಾದ+ಪ್ರಕಾಶ=ದಿವ್ಯಪ್ರಕಾಶ ಕೆಂಪಾದ+ತಾವರೆ=ಕೆಂದಾವರೆ
ಕೆಂಪಾದ+ಅಕ್ಕಿ=ಕೆಂಪಕ್ಕಿ ಹಿರಿದು+ಮರ= ಹೆಮ್ಮರ

–ಸೂತ್ರ: "ಪೂರ್ವೋತ್ತರ ಪದಗಳು ಲಿಂಗ,ವಚನ,ವಿಭಕ್ತಿಗಳಿಂದ ಸಮಾನವಾಗಿದ್ದು ವಿಶೇಷಣ–ವಿಶೇಷ
ಸಂಬಂಧದಿಂದ ಕೂಡಿ ಆಗುವ ಸಮಾಸಕ್ಕೆ ಕರ್ಮಧಾರೆಯ ಸಮಾಸ ಎನ್ನುವರು.

ಉದಾ: ಕೇಸಕ್ಕಿ, ಮೆಲ್ನುಡಿ, ಪೆರ್ಬಯಕೆ, ಕೆನ್ನಾಲಿಗೆ, ಕೋಪಾರುಣ ನೇತ್ರ, ಸುಖಸ್ಪರ್ಷ, ಮೆಲ್ನುಡಿ, ದಿವ್ಯಪ್ರಕಾಶ
ಮೆಲ್ವಾತು, ಅತಿಕುಟಿಲ, ಪೆರ್ಮಗ, ಪೆರ್ಮರ, ಹೆಜ್ಜೇನು,

- ದ್ವಿಗುಸಮಾಸ

ಒಂದು + ಕಟ್ಟು = ಒಗ್ಗಟ್ಟು
ಎರಡು + ಮಡಿ = ಇಮ್ಮಡಿ
ಮೂರು + ಮಡಿ = ಮುಮ್ಮಡಿ

ಈ ಮೂರು ಸಮಾಸಗಳಲ್ಲಿ ಪೂರ್ವ ಪದ ಸಂಖ್ಯಾವಾಚಕಗಳಾಗಿದ್ದು ಉತ್ತರ ಪದ ನಾಮಪದ ದಿಂದ ಕೂಡಿವೆ
–ಸೂತ್ರ : "ಪೂರ್ವ ಪದವು ಸಂಖ್ಯಾವಾಚಕವಾಗಿದ್ದು ಉತ್ತರ ಪದದಲ್ಲಿರುವ ನಾಮಪದದೊಡನೆ ಸೇರಿ ಆಗುವ ಸಮಾಸವೇ ದ್ವಿಗು ಸಮಾಸ"
ಉದಾ : ಏಕಾಂಗ, ಸಪ್ತಸಾಗರ, ಇಕ್ಕೆಲ, ಏಕಾಕ್ಷ, ಪಂಚೇಂದ್ರಿಯಾ, ಷಟ್ಕೋನ, ಎಣ್ದೆಸೆ, ಸಪ್ತಲೋಕ,ಮೂಗಾವುದ, ಮುಕ್ಕಣ್ಣು, ಸಪ್ತಸ್ವರಗಳು,

- ದ್ವಂದ್ವಸಮಾಸ

ಕೆರೆಯೂ + ಕಟ್ಟೆಯೂ + ಬಾವಿಯೂ = ಕೆರೆಕಟ್ಟೆಬಾವಿಗಳು
ಗಿಡವೂ + ಮರವೂ + ಬಳ್ಳಿಯೂ = ಗಿಡಮರಬಳ್ಳಿಗಳು
ಗುಡುಗು + ಮಿಂಚು + ಸಿಡಿಲು = ಗುಡುಗುಮಿಂಚುಸಿಡಿಲುಗಳು

ಈ ಉದಾಹರಣೆಗಳನ್ನು ಗಮನಿಸಿದಾಗ ಬೇರೆ ಸಮಾಸಗಳಲ್ಲಿದ್ದಂತೆ ಪೂರ್ವ ಪದ ಉತ್ತರ ಪದ ಎಂಬ ವಿಭಾಗಗಳು ಇಲ್ಲವೆಂಬುದು ಗೋಚರವಾಗುತ್ತದೆ. ಅಲ್ಲದೆ ಅರ್ಥ ಪ್ರಾಧಾನ್ಯದಲ್ಲೂ ಒಂದೇ ಪದಕ್ಕೆ ಅಂದರೆ ಪೂರ್ವ ಪದ ಅಥವಾ ಉತ್ತರ ಪದಕ್ಕೆ ಸೀಮಿತವಾಗಿಲ್ಲದೆ ಎಲ್ಲ ಪದಗಳ ಅರ್ಥ ಪ್ರಧಾನವಾಗಿರುತ್ತದೆ.

–ಸೂತ್ರ : "ಎರಡು ಅಥವ ಅನೇಕ ನಾಮಪದಗಳು ಸಹಯೋಗ ತೋರುವಂತೆ ಸೇಸಮಾಸವಾಗುವಾಗ ಎಲ್ಲ ಪದಗಳ ಅರ್ಥವೂ ಪ್ರಧಾನವಾಗಿ ಇರುವ ಸಮಾಸಕ್ಕೆ ದ್ವಂದ್ವಸಮಾಸ ಎನ್ನುವರು"

ಉದಾ : ದೀನಾನಾಥ, ಆನೆ ಕುದುರೆ ಒಂಟೆ,ಕೆರೆಕುಂಟೆ, ಸುಖದುಃಖ ,ಅಣ್ಣತಮ್ಮಂದಿರು, ಕುರುಡಕುಂಟ, ಮಾದ್ರಮಾಗದಯಾದವರು, ಹನುಮಭೀಮರಾಮ,

- **ಕ್ರಿಯಾ ಸಮಾಸ:**

  ಮನೆಯನ್ನು + ಕಟ್ಟಿದನು = ಮನೆ ಕಟ್ಟಿದನು

ಸೂತ್ರ : "ಪೂರ್ವ ಪದವು ಪ್ರಾಯಶಃ ದ್ವಿತಿಯಾಂತ ನಾಮಪದವಾಗಿದ್ದು ಉತ್ತರದಲ್ಲಿರುವ ಕ್ರಿಯೆಯೊಡನೆ ಸೇರಿ ಆಗುವ ಸಮಾಸವನ್ನು ಕ್ರಿಯಾ ಸಮಾಸ ಎನ್ನುವರು"

ಉದಾ: ಮೃಗವನಟ್ಟು, ನೀರ್ಗುಡಿಯಲ್, ತಲೆತಗ್ಗಿಸು, ಮುಡಿಕಟ್ಟು, ಉಡಿತುಂಬಿ, ತಲೆದೂಗಿದನು, ಅಸುಂಗೊಳೆ,
ಮೈಮುಚ್ಚು, ಕಣ್ದೆರೆ, ಕಂಗೆಡು, ಮೋಸಮಾಡು, ಬಲವಂದು, ಸಾಕ್ಷಿಮಾಡು, ಹೊಗೆದೋರು, ಸೊಲ್ಗೇಳಿ, ಬಿಲ್ದಿರುವನೇರಿಸಿ, ಕೈಕೊಳ್ವುದು, ಬಿಲ್ಗೊಂಡು

- **ಬಹುವ್ರೀಹಿಸಮಾಸ**

  ಮೂರು ಕಣ್ಣು ಉಳ್ಳವನು = ಮುಕ್ಕಣ್ಣ (ಶಿವ)
  ಹಣೆಯಲ್ಲಿ ಕಣ್ಣು ಉಳ್ಳವನು = ಹಣೆಗಣ್ಣ (ಶಿವ)

ಈ ಪದಗಳಲ್ಲಿ ಪೂರ್ವ ಪದದ ಅರ್ಥವಾಗಲೀ ಉತ್ತರ ಪದದ ಅರ್ಥವಾಗಲೀ ಪ್ರಧಾನವಾಗಿಲ್ಲದೆ ಬೇರೊಂದು ಪದವಾದ ಶಿವ ಪದದ ಅರ್ಥವೇ ಪ್ರಧಾನವಾಗಿದೆ.

- ಸೂತ್ರ : ಎರಡು ಅಥವ ಅನೇಕ ನಾಮಪದಗಳು ಸೇರಿ ಸಮಾಸವಾದಾಗ ಬೇರೋಂದು ಪದದ ಅರ್ಥವು ಪ್ರಧಾನವಾಗಿರುವ ಸಮಾಸವೇ ಬಹುವ್ರೀಹಿಸಮಾಸ.

ಉದಾ: ನಾಲ್ಕು ಮೊಗವುಳ್ಳವ =ನಾಲ್ಮೊಗ (ಬ್ರಹ್ಮ) ಕೆಂಪು ಕಣ್ಣುವುಳ್ಳವ =ಕೆಂಗಣ್ಣ(ಶಿವ)

ಚಕ್ರಪಾಣಿ, ಸಿಂಹಕೇತನ, ಉರಗಪತಾಕ, ಅಗಜಾತೆ, ಗಾಂಡೀವಿ, ಮಾರರಿಪು, ವಿಪಿನ ಚರ, ಕೆಂಗಣ್ಣ, ಫಾಲನೇತ್ರ, ಘಟಸಂಭೂತ, ಪವನನಂದನ, ದನುಜರಿಪು, ಮುರಾರಿ, ಚಕ್ರಪಾಣಿ,ಹಣೆಗಣ್ಣ, ಮುಕ್ಕಣ್ಣ,

- ಗಮಕಸಮಾಸ

ಅದು+ಮನೆ = ಆಮನೆ

ಇವನು+ಮನುಷ್ಯ = ಈ ಮನುಷ್ಯ

ಇಲ್ಲಿ ಪೂರ್ವಪದಗಳಾದ ಅದು ಮತ್ತು ಅವನು ಸರ್ವನಾಮಗಳಾಗಿದ್ದು,ಉತ್ತರ ಪದಗಳಾದ ಮನೆ ಮತ್ತು ಮನುಷ್ಯ ನಾಮಪದಗಳಾಗಿವೆ.

- ಸೂತ್ರ : "ಪೂರ್ವ ಪದವು ಸರ್ವನಾಮ ಅಥವಾ ಕೃದಂತಗಳಲ್ಲಿ ಒಂದಾಗಿದ್ದು ಉತ್ತರದಲ್ಲಿರುವ ನಾಮಪದದೊಡನೆ ಕೂಡಿ ಆಗುವ ಸಮಾಸವೇ ಗಮಕಸಮಾಸ ಎನ್ನುವರು"

ಉದಾ: ಈ ಹೆಂಗಸು ಆ ಊರು ಈ ನಾಯಿ, ಆ ಬೆಟ್ಟ, ತಿಂದನ್ನ, ಕಡೆಗೋಲು ಮಾಡಿದಡಿಗೆ, ಸಿಡಿಮದ್ದು, ಆ ಕಲ್ಲು, ಈ ಬೆಕ್ಕು, ನೆಯ್ದವಸ್ತ್ರ,

- ಅಂಶಿಸಮಾಸ:

ಕಾಲ+ಮುಂದು=ಮುಂಗಾಲು ತಲೆಯ+ಮುಂದೆ=ಮುಂದಲೆ ಕೈಯ+ಅಡಿ=ಅಂಗೈ

ಈ ಉದಾಹರಣೆಗಳನ್ನು ಗಮನಿಸಿದಾಗ ಪೂರ್ವ ಪದ ಅನೇಕ ಅಂಶಗಳನ್ನು ಹೊಂದಿರುವ ಅಂಶಿಯೂ ಉತ್ತರ ಪದ ಅಂಶಿಯ ಒಂದು ಅಂಶವನ್ನೂ ಸೂಚಿಸುವುದು.

ಸೂತ್ರ : "ಪೂರ್ವ ಪದವು ಅಂಶವಾಚಕವಾಗಿಯೂ ಉತ್ತರಪದವು ಅಂಶಿವಾಚಕವಾಗಿಯೂ ಇದ್ದು ಪೂರ್ವಪದ ಅರ್ಥವು ಪ್ರಧಾನವಾಗಿರುವ ಸಮಾಸಕ್ಕೆ ಅಂಶಿಸಮಾಸ ಎನ್ನುವರು

ಉದಾ:

ಕಾಲ+ಅಡಿ=ಅಂಗಾಲು ಮೂಗಿನ+ತುದಿ=ತುದಿಮೂಗು ರಾತ್ರಿಯ+ನಡು=ನಡುರಾತ್ರಿ
ಮನೆಯ+ನಡು=ನಡುಮನೆ , ಮುಂಗೈ, ಕುಡಿಹುಬ್ಬು, ತುದಿಬೆಟ್ಟ, ಕೆಳದುಟಿ, ಒಳಮೈ, ತುದಿಬೆರಳು, ಅಂಗೈ, ಕಡೆಗಣ್ಣು,ಹಿಂದಲೆ,

- ## ವಾಕ್ಯ ರಚನಾವಿವರ:

ಮಾತು ಪದಗಳಿಂದ ಆರಂಭವಾಗುತ್ತದೆ.ಆದರೆ ಅದು ವಿಕಾಸಗೊಳ್ಳುವುದು ವಾಕ್ಯಗಳ ಮೂಲಕ ಹಾಗಾಗಿ ಪದಗಳ ಅರ್ಥಪೂರ್ಣ ಸಮೂಹವೇ ವಾಕ್ಯ.ಹಾಗೆಂದ ಮಾತ್ರಕ್ಕೆ ಅದೊಂದು ಪದಗಳ ಗುಂಪು

ಎಂದು ಹೇಳಲಾಗದು. ಆ ಪದಗಳು ಒಂದು ನಿರ್ದಿಷ್ಟ ರೀತಿಯಲ್ಲಿ (ಅರ್ಥವತ್ತಾದ) ಜೋಡಣೆಯಾದಾಗಮಾತ್ರ ವಾಕ್ಯ ಎನಿಸಿಕೊಳ್ಳುತ್ತದೆ.

ಈ ವಾಕ್ಯಗಳನ್ನು ಗಮನಿಸಿ

1) ಜಿಂಕೆ ಹುಲ್ಲನ್ನು ತಿಂದಿತು.

2) ರಾಮನಿಂದ ರಾವಣ ಕೊಲ್ಲಲ್ಪಟ್ಟನು.

ಈ ಎರಡೂ ವಾಕ್ಯಗಳು ಸಂಪೂರ್ಣ ಅರ್ಥವನ್ನು ಕೊಡುತ್ತವೆ.

ಇಲ್ಲಿ ಜಿಂಕೆ ಎಂಬುದು ಕರ್ತೃಪದ ಹುಲ್ಲು ಎಂಬುದು ಕರ್ಮಪದ ತಿಂದಿತು ಎಂಬುದು ಕ್ರಿಯಾಪದ. ಅರ್ಥಪೂರ್ಣ ವಾಕ್ಯ ಎಂದರೆ ಕರ್ತೃ ಕರ್ಮ ಕ್ರಿಯಾಪದಗಳಿಂದ ವ್ಯವಸ್ಥಿತವಾಗಿಕೂಡಿರುವ ಪದಸಮೂಹ. ಆದರೆ ಕೆಲವು ಕ್ರಿಯಾಪದಗಳು ಕರ್ಮಪದವನ್ನು ಅಪೇಕ್ಷಿಸುವುದಿಲ್ಲ. ಅಂತಹ ಕ್ರಿಯಾಪದದ ಜತೆಗೆ ಕರ್ತೃಪದ ಇದ್ದರೆ ಅರ್ಥಪೂರ್ಣ ವಾಕ್ಯವಾಗುತ್ತದೆ.

- **ವಾಕ್ಯ ಪ್ರಬೇಧಗಳು:**

ವಾಕ್ಯಗಳನ್ನು ಸಾಮಾನ್ಯ ವಾಕ್ಯ, ಸಂಯೋಜಿತ ವಾಕ್ಯ ಹಾಗೂ ಮಿಶ್ರ ವಾಕ್ಯ ಎಂದು ವಿಂಗಡಿಸಲಾಗಿದೆ.

- **ಸಾಮಾನ್ಯವಾಕ್ಯ :**
  1) ಸುಬ್ರಹ್ಮಣ್ಯಮ್ ನಮ್ಮನ್ನು ವಿಶ್ವಾಸದಿಂದ ಸ್ವಾಗತಿಸಿದರು.
  2) ಹಕ್ಕಿ ಹಣ್ಣನ್ನು ತಿನ್ನುತ್ತದೆ.

ಈ ಎರಡು ವಾಕ್ಯಗಳು ಒಂದೊಂದು ಪೂರ್ಣ ಕ್ರಿಯಾ ಪದದೊಡಗೂಡಿ ಸ್ವತಂತ್ರ ವಾಕ್ಯಗಳಾಗಿವೆ ಹೀಗೆ ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥಕೊಡುವ ವಾಕ್ಯಗಳೇ ಸಾಮಾನ್ಯ ವಾಕ್ಯಗಳು.

ಉದಾ:

1) ಹುಲಿಯನ್ನು ಕಂಡರೆ ಜಿಂಕೆಗಳಿಗೆ ಭಯ.

2) ನದಿ ಹರಿಯುತ್ತದೆ.

3) ನರಸಜ್ಜನ ಬಾಯಲ್ಲಿ ಒಂದು ಹಲ್ಲೂ ಇಲ್ಲ.

- **ಸಂಯೋಜಿತ ವಾಕ್ಯ/ಸಂಯುಕ್ತ ವಾಕ್ಯ:**
  1. ಪಾಂಡವರ ಯಜ್ಞತುರಗ ಮಣಿಪುರವನ್ನು ಪ್ರವೇಶಿಸಿತು; ಆಗ ಬಬ್ರುವಾಹನನು ಅದನ್ನು ಕಟ್ಟಿಹಾಕಿದನು; ಆದ್ದರಿಂದ ಬಬ್ರುವಾಹನನಿಗೂ ಅರ್ಜುನನಿಗೂ ಯುದ್ಧ ನಡೆಯಿತು

ಇಲ್ಲಿ ಮೂರು ವಾಕ್ಯಗಳು ಆಗ ,ಆದ್ದರಿಂದ ಪದಗಳ ಸಹಾಯದಿಂದ ಒಂದಕ್ಕೊಂದು ಸಂಯೋಜನೆಗೊಂಡು ಒಂದು ಪೂರ್ಣಾರ್ಥದ ವಾಕ್ಯವಾಗಿದೆ.

–ಹೀಗೆ ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಎರಡು ಅಥವ ಹೆಚ್ಚು ಉಪವಾಕ್ಯಗಳು ಸೇರಿ ಒಂದು ಪೂರ್ಣ ಅಭಿಪ್ರಾಯದ ವಾಕ್ಯವಾಗಿದ್ದರೆ ಅದು ಸಂಯೋಜಿತ ವಾಕ್ಯ

ಉದಾ:

1) ಭರತನು ರಾಮನಿದೆ ರಾಜ್ಯಭಾರ ಮಾಡುವಂತೆ ಕೇಳಿಕೊಂಡನು;ಆದರೆ ರಾಮನು ಒಪ್ಪಲಿಲ್ಲ.
2) ಆಗ ಮಳೆ ಸಣ್ಣಗೆ ಹನಿಯುತ್ತಿತ್ತು ; ಅದಕಾರಣ ಕೊಡೆ ಹಿಡಿದುಕೊಂಡು ಪೇಟೆಗೆ ಹೊರಟೆನು.
3) ಆ ಕೊಳದಲ್ಲಿ ಕೆಲವರು ಸ್ನಾನ ಮಡುತ್ತಿದ್ದರು ; ಆದರೆ ಕೆಲವರು ಬಟ್ಟೆ ಒಗೆಯುತ್ತಿದ್ದರು

- ## ಮಿಶ್ರ ವಾಕ್ಯ :

- **ಆಶಾ ಗಾಯನ ಸ್ಪರ್ಧೆಯಲ್ಲಿ ಗೆದ್ದಳಾದರೂ ಅವಳಿಗೆ ಬಹುಮಾನ ಸ್ವೀಕರಿಸಲು ಸಾದ್ಯವಾಗ ದಿದ್ದಾಗ ಆಕೆ ತುಂಬಾ ನೊಂದುಕೊಂಡಳು.**

ಇಲ್ಲಿ **ಆಕೆ ತುಂಬಾನೊಂದುಕೊಂಡಳು.**ಎಂಬ ಪ್ರಧಾನ ವಾಕ್ಯಕ್ಕೆ **ಆಶಾ ಗಾಯನ ಸ್ಪರ್ಧೆಯಲ್ಲಿ ಗೆದ್ದಳು, ಅವಳಿಗೆ ಬಹುಮಾನ ಸ್ವೀಕರಿಸಲು ಸಾದ್ಯವಾಗಲಿಲ್ಲ** ಎಂಬ ಉಪವಾಕ್ಯಗಳು ಅಧೀನವಾಗಿ ಮಿಶ್ರವಾಕ್ಯವಾಗಿದೆ.

–ಹೀಗೆ ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧಿನವಾಗಿದ್ದರೆ ಅಂತಹ ವಾಕ್ಯವೇ ಮಿಶ್ರವಾಕ್ಯ
ಉದಾ:

1) ತನ್ನ ಹಡಗು ಬಂಡೆಗೆ ತಗುಲಿ ಒಡೆಯಿತೆಂದು ಆ ವರ್ತಕನಿಗೆ ತಿಳಿಯಿತು.
2) ಕೋಟೆಯೊಳಗೆ ಶತ್ರುಗಳು ನುಗ್ಗಿದರೆಂಬ ಸುದ್ದಿಯನ್ನು ಕೇಳಿ ಜನಗಳು ತಲ್ಲಣಗೊಂಡರು.
3) ಅವನನ್ನು ಎಲ್ಲಿಯೋ ನೋಡಿದ್ದೆನೆಂಬ ಸಂಗತಿ ನನಗೆ ಜ್ಞಾಪಕ ಬಂದೀತೆ ಹೊರತು ,ಅವನ ಹೆಸರು ಏನೆಂಬುದು ಎಷ್ಟು ಯೋಚಿಸಿದರೂ ಹೊಳೆಯಲಿಲ್ಲ

- ## ಲೇಖನ ಚಿನ್ಹೆ ವಿವರ :

**ಸಾಮಾನ್ಯವಾಗಿ ಬರವಣಿಗೆಯಲ್ಲಿ ಖಚಿತ ಸ್ಥಳದಲ್ಲಿ ಪೂರ್ಣ ನಿಲುಗಡೆ ಅರ್ಧ ಇಲ್ಲವೇ ಅಲ್ಪ ನಿಲುಗಡೆ ಪ್ರಶ್ನೆ,ಅಚ್ಚರಿ,ಒಪ್ಪಿತ ಭಾವಗಳನ್ನು ಸೂಕ್ತ ರೀತಿಯಲ್ಲಿ ಸೂಚಿಸಲು ಅವಶ್ಯ ಸಂಕೇತಗಳನ್ನು ಬಳಸುವುದು ರೂಡಿ, ಅಂತಹ ಸ್ಪಷ್ಟಾರ್ಥ ಸೂಚಿತ ಭಾವಗಳನ್ನು ಲಿಖಿತ ಸಂಕೇತಗಳ ಮೂಲಕ ನಿರ್ದೇಶಿಸುವವೇ ಲೇಖನ ಚಿನ್ಹೆಗಳು. ಲೇಖನ ಚಿನ್ಹೆಗಳು ಇಲ್ಲದ ಬರವಣಿಗೆ ಖಚಿತ ಭಾವಾರ್ಥವನ್ನು ಕೊಡದು.**

• **ಪೂರ್ಣ ವಿರಾಮ/ಬಿಂದು (.)**

ಒಂದು ಪೂರ್ಣ ಕ್ರಿಯೆಯಿಂದ ಕೂಡಿದ ವಾಕ್ಯದ ಕೊನೆಯಲ್ಲಿ ಈ ಪೂರ್ಣವಿರಾಮ ಚಿಹ್ನೆಯನ್ನು ಬಳಸಬೇಕು

ಉದಾ: 1) ಮಕ್ಕಳು ಶಾಲೆಗೆ ಸರಿಯಾದ ವೇಳೆಗೆ ಬರಬೇಕು.

2) ರಾಮನು ಮರವನ್ನು ಕಡಿದನು.

• **ಅರ್ಧವಿರಾಮ ( ;)**

ಅನೇಕ ಉಪವಾಕ್ಯಗಳು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಬಹುದು

ಉದಾ: 1) ತಾವು ಕಡಿಮೆ ಮಾತನಾಡಿದ್ದೀರಿ ; ಹೆಚ್ಚು ಕೆಲಸ ಮಾಡಿದ್ದೀರಿ.

2) ಅವನು ಕಾಶಿಗೆ ಹೋಗಿಬಂದನು ; ಆದರೂ ಕೆಟ್ಟತನ ಬಿಡಲಿಲ್ಲ

• **ಪ್ರಶ್ನಾರ್ಥಕ ಚಿನ್ಹೆ (?)**

ಪ್ರಶ್ನ ರೂಪದ ಪದ ಮತ್ತು ವಾಕ್ಯಗಳ ಮುಂದೆ (ಪ್ರಶ್ನೆ ಕೇಳುವ ಸಂದರ್ಭದಲ್ಲಿ )ವಾಕ್ಯದ ಅಂತ್ಯದಲ್ಲಿ ಪ್ರಶ್ನಾರ್ಥಕ ಚಿನ್ಹೆ ಬಳಸಲಾಗುವುದು

ಉದಾ: 1. ಯಾರು? ಎಲ್ಲಿ? ಯಾವಾಗ?

2. ರಾಜನು ಮಾಡಿದ ಶಪಥವೇನು?

• **ಅಲ್ಪ ವಿರಾಮ (,)**

ಸಂಬೋದನೆಯ ಮುಂದೆ ಅಲ್ಲದೆ ಕರ್ತೃ,ಕರ್ಮ ಹಾಗೂ ಕ್ರಿಯಾಪದಗಳಿಗೆ ವಿಶೇಷಣಗಳು ಬಂದಾಗ ಕೊನೆಯಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಬಳಸುವ ಚಿನ್ಹೆ

ಉದಾ: 1) ಹೌದು ಮೇಷ್ಟ್ರೆ,ತಪ್ಪು ಮಾಡುತ್ತೀರಿ,ಜುಲ್ಮಾನೆ ಬೀಳುತ್ತದೆ

2) ಮಕ್ಕಳೇ,ಬನ್ನಿರಿ

• **ಭಾವಸೂಚಕ ಚಿನ್ಹೆ ( ! )**

ಹರ್ಷ,ಅಚ್ಚರಿ,ದುಃಖ,ಕೋಪ,ಸಂತಸ,ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವ ಸಂದರ್ಭದಲ್ಲಿ

ಬಳಸುವ ಚಿನ್ಹೆ

ಉದಾ : ಆಹಾ! ಎಷ್ಟು ಸುಂದರವಾಗಿದೆ!

ಅಯ್ಯೋ! ಹೀಗಾಗಬಾರದಿತ್ತು!

• **ವಾಕ್ಯವೇಷ್ಟನ ಚಿನ್ಹೆ ‘ ’**

ಬರವಣಿಗೆಯಲ್ಲಿ ಪಾರಿಭಾಷಿಕ /ಪ್ರಧಾನ/ವಿಶಿಷ್ಟ ಪದಗಳನ್ನು ಬಳಸಿದಾಗ ಬಳಸುವಚಿನ್ಹೆ ಕನ್ನಡಭಾಷೆಯಲ್ಲಿ ಅನೇಕ ‘ಇಂಗ್ಲೀಷ್’ ‘ಪರ್ಷಿಯನ್’ ಭಾಷೆಯ ಪದಗಳು ಬಳಕೆಯಲ್ಲಿವೆ.

• **ವಿವರಣಾತ್ಮಕ ಚಿನ್ಹೆ :–/:/–**

ಒಂದು ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವ ಚಿನ್ಹೆ

ಉದಾ: ಭಾಷಾ ವಿಜ್ಞಾನ:– ಭಾಷೆಯ ವೈಜ್ಞಾನಿಕ ಅಧ್ಯಯನ

- ಉದ್ಧರಣ ಚಿನ್ಹೆ “ ”

ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿನ್ಹೆ ಯನ್ನು ಬಳಸಲಾಗುವುದು
ಉದಾ: “ ಶಿಕ್ಷಣವು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು” ಎಂದು ಸರ್.ಎಂ.ವಿಶ್ವೇಶ್ವರಯ್ಯನವರು ಹೇಳಿದರು.

- ಆವರಣ ಚಿನ್ಹೆ ( )

ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ

ಉದಾ: ಒಮ್ಮೆ ಕಾನನ (ಅರಣ್ಯ) ದಲ್ಲಿ ಹಸುವೊಂದು ಹುಲಿಯ ಬಾಯಿಗೆ ತುತ್ತಾಯಿತು

ನೀರನ್ನು ವಿಭಜಿಸಿದರೆ ಆಮ್ಲಜನಕ(ಆಕ್ಸಿಜನ್ ) ಜಲಜನಕ( ಹೈಟ್ರೋಜನ್ ) ಗಳು ಉತ್ಪತ್ತಿಯಾಗುತ್ತದೆ.

- ಗ್ರಾಂಥಿಕರೂಪ:

ಗ್ರಾಮೀಣ ಭಾಗದ ಜನರು ಮಾತನಾಡುವ ಭಾಷೆ ಗ್ರಾಂಥಿಕ ಭಾಷೆಯಿಂದ ಸ್ವಲ್ಪ ಭಿನ್ನವಾಗಿರುತ್ತದೆ ಅಂತಹ ಪದಗಳನ್ನು ಗ್ರಾಂಥಿಕಭಾಷೆಗೆ ಪರಿವರ್ತಿಸಿ ಬರೆಯುವ ರೂಪವೇ ಗ್ರಾಂಥಿಕ ರೂಪ

| | |
|---|---|
| ಉದಾ: ಬ್ಯಾಸರ–ಬೇಸರ | ಹೀಂಗ–ಹೀಗೆ |
| ಐಸಿರಿ–ಐಶ್ವರ್ಯ | ಮ್ಯಾಗ–ಮೇಲೆ |
| ಮೊಗ–ಮಗ | ಕಳುವ್ಯಾರೆ–ಕಳುಹಿಸಿದ್ದಾರೆ |
| ಬ್ಯಾಸಕಿ–ಬೇಸಿಗೆ | ಇಲ್ಲದ್ಹಂಗ–ಇಲ್ಲದಂತೆ |
| ಇಸವಾಸ– ವಿಶ್ವಾಸ | ಸಕ್ಕಾರಿ–ಸಕ್ಕರೆ |
| ಸಿಡಿದ್ಹಾಂಗ–ಸಿಡಿದಹಾಗೆ | ವಿಲಾತಿ–ವಿಲಾಯಿತಿ |

- ಅವ್ಯಯ:

–ಅವನು ಸುತ್ತಲೂ ನೋಡಿದನು
– ಅವಳು ಸುತ್ತಲೂ ನೋಡಿದಳು
–ಅವರು ಸುತ್ತಲೂ ನೋಡಿದರು
–ಅದು ಸುತ್ತಲೂ ನೋಡಿತು

ಈ ನಾಲ್ಕು ವಾಕ್ಯಗಳಲ್ಲಿ ಬಂದಿರುವ ‘ಸುತ್ತಲೂ’ ಎಂಬ ಪದವನ್ನು ಗಮನಿಸಿದಾಗ ಅದು ಪುಲ್ಲಿಂಗ,ಸ್ತ್ರೀಲಿಂಗ, ನಪುಂಸಕಲಿಂಗ ಗಳಲ್ಲೂ ಏಕವಚನ, ಬಹುವಚನಗಳಲ್ಲೂ ಯಾದುದೇ ವ್ಯತ್ಯಾಸವನ್ನು ಹೊಂದದೆ ಏಕರೂಪದಲ್ಲಿರುವುದನ್ನು ನೋಡಬಹುದು.’ಸುತ್ತಲೂ’ ಎಂಬ ಪದದ

ಮೇಲೆ ಯಾವುದೇ ಪ್ರತ್ಯಯವನ್ನು ಹಚ್ಚಲಾಗುವುದಿಲ್ಲ.ಇದು ನಾಮಪದ,ಕ್ರಿಯಾಪದದ ಹಾಗೆ ರೂಪದಲ್ಲೂ ಯಾವ ಬದಲಾವಣೆಯನ್ನೂ ಹೊಂದುವುದಿಲ್ಲ ಎಂಬುದು ತಿಳಿಯುತ್ತದೆ.

-- ಹೀಗೆ ಲಿಂಗ,ವಚನ, ವಿಭಕ್ತಿಗಳಿಂದ ಯಾವ ವ್ಯತ್ಯಾಸವನ್ನೂ ಹೊಂದದೆ ಚೆನ್ನಾಗಿ,ನೆಟ್ಟಗೆ,ಮೆಲ್ಲಗೆ,ಸುಮ್ಮನೆ,ತರುವಾಯ ಇತ್ಯಾದಿ ಪದಗಳು ನಮ್ಮ ಭಾಷೆಯಲ್ಲಿ ಪ್ರಯೋಗಿಸಲೊಡುತ್ತವೆ. ಇಂತಹ ಪದಗಳೇ ಅವ್ಯಯಗಳು.

ಸೂತ್ರ: 'ನಾಮಪದ ಕ್ರಿಯಾಪದಗಳಂತೆ ಲಿಂಗ,ವಚನ,ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ ಏಕರೂಪವಾಗಿರುವ ಪದಗಳನ್ನು ಅವ್ಯಯ' ಎಂದು ಕರೆಯಲಾಗುತ್ತದೆ.

ಈ ಅವ್ಯಯಗಳನ್ನು ಸಾಮಾನ್ಯಾವ್ಯಯ, ಅನುಕರಣಾವ್ಯಯ, ಭಾವಸೂಚಕ ಅವ್ಯಯ, ಕ್ರಿಯಾರ್ಥಕಾವ್ಯಯ, ಸಂಬಂಧಾರ್ಥಕಾವ್ಯಯ,ಕೃದಂತಾವ್ಯಯ,ತ ದ್ಧಿತಾಂತಾವ್ಯಯ,ಅವಧರಣಾರ್ಥಕಾವ್ಯ ಇತ್ತಯಾದಿ ಗುಂಪುಗಳಾಗಿ ವಿಂಗಡಿಸಬಹುದು.

ಅವ್ಯಯ ವರ್ಗೀಕರಣ ವಿವರ

- **ಸಾಮಾನ್ಯಾವ್ಯಯ:**

1) ಅವಳು <u>ಚೆನ್ನಾಗಿ</u> ಹಾಡಿದಳು

2) ಅದು <u>ತಟ್ಟನೆ</u> ಬಿತ್ತು

ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂಥ ಅವ್ಯಯಗಳು. ಇವು ಹೆಚ್ಚಾಗಿ ಕ್ರಿಯೆಗೆ ವಿಷೇಶಣಗಳಾಗಿರುತ್ತವೆ.

ಉದಾ: ಬೇಗನೆ, ಮೆಲ್ಲನೆ, ಸೊಗಸಾಗಿ, ಸುಮ್ಮನೆ, ತಟ್ಟನೆ, ತರುವಾಯ, ಹಾಗೆ, ಅಂತು, ಬೇರೆ, ಬಳಿಕ, ಕೂಡಲೆ, ಚೆನ್ನಾಗಿ ಇತ್ಯಾದಿಗಳು

- **ಅನುಕರಣಾವ್ಯಯ :**

1) ನೀರು <u>ದಬದಬ</u> ಬಿತ್ತು.

2) ಮಳೆ <u>ಪಟಪಟ</u> ಸುರಿಯಿತು

ನಿರ್ದಿಷ್ಟ ಅರ್ಥವಿಲ್ಲದ ಧ್ವನಿ ವಿಷೇಶಣಗಳನ್ನು ತಾನು ಕಿವಿಯಿಂದ ಕೇಳಿದಂತೆಯೇ ಮತ್ತೆ ಅನುಕರಣೆ ಮಾಡಿ ಹೇಳುವ ಪದಗಳನ್ನು ಅನುಕರಣಾವ್ಯಯ ಗಳೆಂದು ಕರೆಯುತ್ತಾರೆ.

ಉದಾ: ಪಟಪಟ,ಢಣಢಣ, ದಬದಬ, ಗುರುಗುರು, ತಕತಕ,ರಪರಪ,ಜುಳುಜುಳು, ದಡದಡ, ಪರಪರ, ಗರಗರ, ತಟತಟ, ಕ್ಲಕ್ ಕ್ಲಕ್, ರೊಯ್ಯನೆ, ಸುಯ್ಯನೆ, ಜುಮ್ ಜುಮ್ ಇತ್ಯಾದಿ

- **ಭಾವಸೂಚಕಾವ್ಯಯ**

ಮನಸ್ಸಿನಲ್ಲಿ ಉಂಟಾಗುವ ಕೋಪ,ಹರ್ಷ,ದುಃಖ,ಮೆಚ್ಚುಗೆ,ಆಕ್ಷೇಪ,ತಿರಸ್ಕಾರ ಮುಂತಾದ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ.ಅಂತಹ ಪದಗಳನ್ನು ಭಾವಸೂಚಕ ಅವ್ಯಗಳೆಂದು ಕರೆಯುತ್ತಾರೆ.

1) ಅಬ್ಬಾ! ಎಷ್ಟು ಸೊಗಸಾಗಿದೆ

2) ಛೆ,ಥೂ,ಅಯ್ಯೋ

ಉದಾ: ಆಹಾ! ಭಲೆ! ಅಯ್ಯೋ! ಓಹೋ! ಅಃ! ಆಃ ಇತ್ಯಾದಿ ಪದಗಳು

**ಸಂಬಂಧಾರ್ಥಕಾವ್ಯಯ**

ಎರಡು ಪದಗಳನ್ನಾಗಲೀ ಹಲವು ಪದಸಮುಚ್ಚಯಗಳನ್ನಾಗಲೀ, ವಾಕ್ಯಗಳನ್ನಾಗಲೀ ಜೋಡಿಸುವಂತಹ ಅಥವಾ ಸಂಬಂಧಗೊಳಿಸುವಂತಹ ಪದಗಳೇ ಸಂಬಂಧಾರ್ಥಕಾವ್ಯಯ

ಉದಾ: ಮತ್ತು, ಅಥವಾ, ಆದ್ದರಿಂದ, ಅಲ್ಲದೆ ಇತ್ಯಾದಿ

ಪದಗಳ ಜೋಡಣೆ 1) ರಾಮನೂ ಲಕ್ಷ್ಮಣನೂ ಸೀತೆಯೂ ಕಾಡಿಗೆ ಹೊರಟರು.

2) ಅವನು ಮತ್ತು ನೀನು ಇಬ್ಬರೂ ಹೋಗಿರಿ.

ಪದಸಮುಚ್ಚಯ ಜೋಡಣೆ:- ಅವನು ಬರುವುದು ಬೇಡ: ಆಕೆಲಸ ಆಗುವುದೂ ಬೇಡ.

ವಾಕ್ಯಗಳ ಜೋಡಣೆ:- ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ

- **ಅವಧಾರಣಾರ್ಥಕಾವ್ಯಯ**

ಒಂದು ನಿಶ್ಚಯಾರ್ಥದಲ್ಲಿರುವ ಅವ್ಯಯವನ್ನು ಅವಧಾರಣಾರ್ಥಕಾವ್ಯಯ ಎಂದು ಕರೆಯುತ್ತಾರೆ .ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯವಾಗಿ ಹೇಳುವ ಸಂದರ್ಭದಲ್ಲಿ ಈ ಅವ್ಯಯವನ್ನು ಬಳಸಲಾಗುತ್ತದೆ

1) ಅದೇ ನನ್ನ ಪುಸ್ತಕ

2) ನಾನೇ ಪುಸ್ತಕ ಕೊಟ್ಟೆ

ಉದಾ: ಅವನೇ,ಅದುವೇ,ನೀನೇ,ಅವಳೇ,ಅವರೇ, ಇತ್ಯಾದಿ ಪದಗಳ ಕೊನೆಯಲ್ಲಿ 'ಏ' ಎಂಬ ಅಕ್ಷರವೇ ಅವಧಾರಣಾರ್ಥಕಾವ್ಯಯ

- **ಜೋಡುನುಡಿ:**

ಕನ್ನಡ ಭಾಷೆಯಲ್ಲಿ ಒಂದು ಪದದ ಜೊತೆಗೆ ಇತರೆ ಪದವು ಜೋಡಿಯಾಗಿ ಬರುತ್ತವೆ ಇವನ್ನು ಜೋಡುನುಡಿಗಳೆನ್ನುತ್ತಾರೆ.ಅವುಗಳಲ್ಲಿ ಸಮನಾರ್ಥಕ ಪದಗಳು ವಿರುದ್ದಾರ್ಥಕ ಪದಗಳು ಪೂರಕಾರ್ಥ ಹೊಂದಿದ ಪದಗಳು ಜೊತೆಜೊತೆಯಾಗಿ ಬರುತ್ತವೆ.

ಉದಾ:

| ಸಮನಾರ್ಥಕ | ಪೂರಕಾರ್ಥಕ | ವಿರುದ್ದಾರ್ಥಕ |
|---|---|---|
| ಅವಳಿಜವಳಿ | ಅಕ್ಕಪಕ್ಕ | ಹಗಲುರಾತ್ರಿ |

| | | |
|---|---|---|
| ಅಂದಚೆಂದ | ಆಚಾರವಿಚಾರ | ನಗುಅಳು |
| ಕಪ್ಪಕಾಣಿಕೆ | ಕಾಡುಮೇಡು | ಸುಖದುಃಖ |
| ಬೆಟ್ಟಗುಡ್ಡ | ವನಬನ | ಅಪ್ಪಅಮ್ಮ |
| ನೆರೆಹೊರೆ | ನಡೆನುಡಿ | ಸಿಹಿಕಹಿ |
| ಬಂಧುಬಳಗ | ಆಸ್ತಿಅಂತಸ್ತು | ಬೇವುಬೆಲ್ಲ |
| ಹಣ್ಣುಹಂಪಲು | ತಿಂಡಿತೀರ್ಥ | ನೋವುನಲಿವು |
| ರೀತಿನೀತಿ | ಮನೆಮಠ | ಆದಿಅಂತ್ಯ |
| ಕಾಳುಕಡ್ಡಿ | ಗಿಡಗಂಟೆ | ಕನಸುನನಸು |

- **‘ತದ್ಧಿತ’**

**ಕೊಟ್ಟಿರುವ ರಚನೆಯನ್ನು ಗಮನಿಸಿ**

**– ಚಿತ್ರವನ್ನು ಬರೆಯುವವನು – ಚಿತ್ರಕಾರ**
**– ಹಾವನ್ನು ಆಡಿಸುವವನು – ಹಾವಾಡಿಗ**
**– ಮೋಸವನ್ನು ಮಾಡುವವನು – ಮೋಸಗಾರ**

**‘ತದ್ಧಿತ’ ಎಂಬ ಎಂಬ ಹೆಸರಿನ ಪ್ರತ್ಯಯಗಳು ಪದಾಂತ್ಯದಲ್ಲಿ ಉಳ್ಳವುಗಳನ್ನು ತದ್ಧಿತಾಂತಗಳೆಂದು ಕರೆಯುತ್ತಾರೆ .**

**ನಾಮಪದಗಳಿಗೆ ಗಾರ– ಕಾರ, ಇಗ, ವಂತ, ವಳ, ಅಡಿಗ, ಅಳಿ , ಗುಳಿ , ಅರ ,ಅನೆಯ ಎಂಬ ತದ್ಧಿತ ಪ್ರತ್ಯಗಳನ್ನು ಸೆರಿಸಿ ಒಂದೇ ಪದ ರಚಿಸುವ ಪರಿಯೇ ತದ್ಧಿತಾಂತ ನಾಮ ರಚನೆಗಳು. ತದ್ಧಿತ ಪ್ರತ್ಯಯಗಳು ನಾಮಪದಗಳಿಗೆ ಸೇರುವಲ್ಲಿ ಮಧ್ಯದ ವಿಭಕ್ತಿ ಪ್ರತ್ಯಯ ಲೋಪವಾಗುವುದು ಸಾಮಾನ್ಯ. ತದ್ಧಿತಾಂತ ರಚನಾ ವಿಷೇಶತೆಯನ್ವಯ**
**ತದ್ಧಿತಾಂತ ನಾಮ, ತದ್ಧಿತಾಂತ ಭಾವನಾಮ, ತದ್ಧಿತಾಂತಾವ್ಯಯ ಎಂಬ ಮೂರು ಬಗೆಗಳಿವೆ.**

## ತದ್ಧಿತಾಂತ ನಾಮ :

| ತದ್ಧಿತ ಪ್ರತ್ಯಯ | ನಾಮಪದ ಅರ್ಥ | ತದ್ಧಿತಾಂತ ರಚನೆ |
|---|---|---|
| –ಗಾರ | ಮಾಲೆಯನ್ನು+ಕಟ್ಟುವವನು | ಮಾಲೆಗಾರ |
| –ಕಾರ | ಓಲೆಯನ್ನು +ತರುವವನು | ಓಲೆಕಾರ |
| –ಇಗ | ಲೆಕ್ಕವನ್ನು+ಬಲ್ಲವನು | ಲೆಕ್ಕಿಗ |
| –ವಂತ | ಹಣವನ್ನು+ಉಳ್ಳವನು | ಹಣವಂತ |
| –ವಳ | ಮಡಿಯನ್ನು+ಮಾಡುವವನು | ಮಡಿವಾಳ |
| –ಅಡಿಗ | ಹೂವನ್ನು+ಕಟ್ಟುವವನು | ಹೂವಾಡಿಗ |
| –ಅಳಿ | ಮಾತನ್ನು+ಹೆಚ್ಚು ಆಡುವವನು | ಮಾತಾಳಿ/ವಾಚಾಳಿ |
| –ಗುಳಿ | ಲಂಚವನ್ನು +ತೆಗೆದುಕೊಳ್ಳುವವನು | ಲಂಚಗುಳಿ |
| –ಆರ | ಕುಂಭವನ್ನು +ಮಾಡುವವನು | ಕುಂಬಾರ |
| –ಅನೆಯ | ಹತ್ತು+ಸಂಖ್ಯೆಯುಳ್ಳದ್ದು | ಹತ್ತನೆಯ |

**ಪುಲ್ಲಿಂಗ –ಸ್ತ್ರೀಲಿಂಗ**
**ಒಕ್ಕಲಿಗ – ಒಕ್ಕಲಗಿತ್ತಿ, ಹೂವಾಡಿಗ–ಹೂವಾಡಗಿತ್ತಿ, ಬೀಗ–ಬೀಗತಿ ,ಗೊಲ್ಲ–ಗೊಲ್ಲತಿ, ಮಾಲೆಗಾರ– ಮಾಗೆಗಾರ್ತಿ, ಗುಣವಂತ–ಗುಣವಂತೆ.**

## ತದ್ಧಿತಾಂತ ಭಾವನಾಮ:–

**–ಬಡತನ ,ಸಿರಿತನಗಳು ಶಾಶ್ವತವಲ್ಲ**

**–ನಮಗೆ ಅದೊಂದು ಹಿರಿಮೆ**

**ಈ ವಾಕ್ಯದಲ್ಲಿರುವ ಬಡತನ. ಸಿರಿತನ, ಹಿರಿಮೆ** ಎಂಬ ಪದಗಳನ್ನು ಗಮನಿಸಿದಾಗ ಬಡವನ ಭಾವ ಬಡತನ ಸಿರಿವಂತನ ಭಾವ ಸಿರಿತನ ಹಿರಿದರ ಭಾವ ಹಿರಿತನ ಎಂಬುದು ತಿಳಿಯುತ್ತದೆ. ಇಲ್ಲಿರುವ ತನ,ಮೆಎಂಬ ಪದಗಳು ಬಾವಾರ್ಥದಲ್ಲಿ ಪ್ರಯೋಗವಾಗಿವೆ.

**ಸಾಮಾನ್ಯವಾಗಿ ಷಷ್ಠೀ ವಿಭಕ್ತಿ ಪ್ರತ್ಯಯಾಂತ ನಾಮಪದಗಳಿಗೆ ಭಾವಾರ್ಥದಲ್ಲಿ –ತನ, ಇಕೆ, ಉ , ಪು, ಮೆ, ಇತ್ಯಾದಿ ತದ್ದಿತ ಪ್ರತ್ಯಯಗಳನ್ನು ಸೇರಿಸುವ ಪದ ರಚನೆಯೇ ತದ್ಧಿತಾಂತ ಭಾವನಾಮ**

| ತದ್ದಿತ ಪ್ರತ್ಯಯ | ನಾಮಪದ ಭಾವಾರ್ಥದಲ್ಲಿ | ತದ್ಧಿತಾಂತ ಭಾವನಾಮ |
|---|---|---|
| –ತನ | ದೊಡ್ಡವನ (ಭಾವ) ತನ | ದೊಡ್ಡತನ |
| –ಇಕೆ | ಚೆಲುವಿನ(ಭಾವ) ಇಕೆ | ಚೆಲುವಿಕೆ |
| –ಉ | ಕುರುಡಿನ (ಭಾವ) ಉ | ಕುರುಡು |
| –ಪು | ಬಿಳಿದರ (ಭಾವ) ಪು | ಬಿಳುಪು |
| –ಮೆ | ಜಾಣನ( ಭಾವ) ಮೆ | ಜಾಣ್ಮೆ |

**ತದ್ಧಿತಾಂತಾವ್ಯಯ :**

**–ಇವನು ಭೀಮನಂತೆ ಬಲಶಾಲಿ**

**–ಮನೆತನಕ ಬನ್ನಿ**

**–ಆಕೆಗಿಂತ ಇವನು ಚಿಕ್ಕವನು**

**ಈ ವಾಕ್ಯಗಳಲ್ಲಿರುವ ಭೀಮನಂತೆ, ಮನೆತನಕ, ಆಕೆಗಿಂತ ಎಂಬ ಪದಗಳನ್ನು ಬಿಡಿಸಿದಾಗ ಭೀಮನ+ಅಂತೆ, ಶಾತೆಯ+ತನಕ, ಆಕೆಗೆ+ಇಂತ ಎಂದಾಗುವುದು –ಹೀಗೆ..**

**ನಾಮಪದಗಳ ಮುಂದೆ ಅಂತೆ, –ವೋಲ್, –ವೋಲು, – ವೊಲು, –ತನಕ, –ವರೆಗೆ, –ಮಟ್ಟಿಗೆ, –ಓಸ್ಕರ, –ಇಂತ, –ಆಗಿ, –ಓಸುಗ ಇತ್ಯಾದಿ ತದ್ಧಿತ ಪ್ರತ್ಯಯಗಳು ಸೇರಿ ರಚಿತವಾಗುವ ಪದರಚನೆಯೇ ತದ್ಧಿತಾಂತಾವ್ಯಯ ಇಲ್ಲಿ ನಾಮ ಪದಗಳ ವಿಭಕ್ತಿ ಪ್ರತ್ಯಯಗಳು ಲೋಪವಾಗುವುದಿಲ್ಲ**

**–ಅಂತೆ : ರಾಮನಂತೆ,ಅವನಂತೆ**

**–ವೊಲ್ : ಚಂದ್ರನವೊಲ್,ಅವನವೋಲ್**

**–ವೋಲು : ಮನೆಯವೋಲು**

**–ತನಕ : ಅಲ್ಲಿಯ ತನಕ,ಮನೆಯತನಕ**

**–ವರೆಗೆ : ಶಾಲೆಯವರೆಗೆ,ಅಲ್ಲಿಯವರೆಗೆ**

**–ಓಸ್ಕರ : ರಾಮನಿಗೋಸ್ಕರ,ನನಗೋಸ್ಕರ**

**–ಇಂತ : ಮನೆಗಿಂತ,ಅದಕ್ಕಿಂತ**

**–ಓಸುಗ : ಅವನಿಗೋಸುಗ**

**–ಮಟ್ಟಿಗೆ : ಅವನ ಮಟ್ಟಿಗೆ,ರಾಮನಮಟ್ಟಿಗೆ**

**–ಆಗಿ: ನನಗಾಗಿ**

- **ಕೃದಂತಗಳು:**

ಧಾತುಗಳಿಗೆ ಕೃತ್ ಪ್ರತ್ಯಯಗಳು ಸೇರಿ ಕೃದಂತಗಳೆನಿಸುವುವು. ಇವುಗಳನ್ನು ಕೃದಂತನಾಮ, ಕೃದಂತ ಭಾವನಾಮ, ಕೃದಂತಾವ್ಯಯಗಳೆಂದು ವಿಂಗಡಿಸಲಾಗಿದೆ

- **ಕೃದಂತನಾಮಗಳು:**

ಧಾತುಗಳಿಗೆ ಕರ್ತೃ ಮಾದಲಾದ ಅರ್ಥದಲ್ಲಿ ಸಾಮಾನ್ಯವಾಗಿ 'ಅ' ಎಂಬ ಕೃತ್ ಪ್ರತ್ಯಯ ಬರುವುದು. ಆಗ ಧಾತುವಿಗೂ ಕೃತ್ ಪ್ರತ್ಯಯಕ್ಕೂ ನಡುವೆ ವರ್ತಮಾನ , ಭವಿಷ್ಯತ್ ಕಾಲದಲ್ಲಿ 'ವ' 'ಉವ' ಎಂಬ ಕಾಲಸೂಚಕ ಪ್ರತ್ಯಯಗಳೂ ಭೂತಕಾಲದಲ್ಲಿ 'ದ' ಎಂಬ ಪ್ರತ್ಯಯವೂ ನಿಷೇಧಾರ್ಥಕದಲ್ಲಿ 'ಅದ'ಎಂಬ ಪ್ರತ್ಯವೂ ಆಗಮವಾಗುತ್ತದೆ.

ಉದಾ:

ವರ್ತಮಾನ ಕೃದಂತ: ಮಾಡು+ವ+ಅ = ಮಾಡುವ
ಬರೆ+ಉವ+ಅ = ಬರೆಯುವ
ಭೂತ ಕೃದಂತ: ತಿನ್ನು+ದ+ಅ = ತಿಂದ
ಹೋಗು+ದ+ಅ = ಹೋದ
ನಿಷೇಧ ಕೃದಂತ: ಮಾಡು+ಅದ+ಅ = ಮಾಡದ

- **ಕೃದಂತ ಭಾವನಾಮ:**

ಧಾತುಗಳ ಮೇಲೆ ಭಾವಾರ್ಥದಲ್ಲಿ ಕೃತ್ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳಾಗುತ್ತವೆ.
ಇಕೆ,ಇಗೆ,ಗೆ,ತ,ಟ,ವಳಿಕೆ,ವಣಿಗೆ ಮುಂತಾದ ಭಾವಾರ್ಥ ಕೃತ್ ಪ್ರತ್ಯಯಗಳಿವೆ.

ಉದಾ:

ಅಂಜು + ಇಕೆ = ಅಂಜಿಕೆ – ನಂಬಿಕೆ, ತೆಗಳಿಕೆ, ನಾಚಿಕೆ.
ಓಡು + ಟ = ಓಟ – ಮಾಟ, ಕೂಟ, ನೋಟ, ಆಟ,ಕಾಟ
ಕೊರೆ + ತ = ಕೊರೆತ – ಸೆಳೆತ, ಕಟೆತ, ಇರಿತ, ತಿವಿತ, ಒಗೆತ
ಬೆಳೆ + ವಳಿಕೆ = ಬೆಳೆವಳಿಕೆ – ತಿಳಿವಳಿಕೆ
ಉಡು + ಇಗೆ = ಉಡುಗೆ. – ತೊಡಿಗೆ ಅಡಿಗೆ, ಹಾಸಿಗೆ, ಏಳಿಗೆ

- **ಕೃದಂತಾವ್ಯಯ:**

ಧಾತುಗಳ ಮೇಲೆ ಉತ ,ಉತ್ತ,ಅದೆ,ದರೆ,ಅಲು,ಅಲಿಕ್ಕೆ,ಅ,ಇ,ದು, ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯಗಳೆನಿಸುವುವು

ಉದಾ:

| | | | |
|---|---|---|---|
| ಮಾಡು+ಉತ= ಮಾಡುತ | – ನೋಡುತ | ಮಾರುತ, | ಬರುತ |
| ಮಾಡು+ಅದೆ= ಮಾಡದೆ | – ನೋಡದೆ | ತಿನ್ನದೆ | ಬರೆಯದೆ |
| ತಿನ್ನು+ಉತ್ತ= ತಿನ್ನುತ್ತ | – ನೋಡುತ್ತಾ | ಮಾರುತ್ತಾ, | ಬರುತ್ತಾ |
| ಹೇಳು+ಅ=ಹೇಳ | – ಮಾಡ | ನೋಡ, | ನುಡಿಯ |
| ಬರು+ಅಲು=ಬರಲು | – ತಿನ್ನಲು | ಉಣ್ಣಲು, | ನೋಡಲು |
| ಮಾಡು+ಇ=ಮಾಡಿ | – ಹೇಳಿ | ಕೇಳಿ, | ನೋಡಿ |
| ತಿನ್ನು +ಅಲಿಕ್ಕೆ =ತಿನ್ನಲಿಕ್ಕೆ | – ತಿಳಿಯಲಿಕ್ಕೆ | ಬರಲಿಕ್ಕೆ, | ಮಾಡಲಿಕ್ಕೆ. |

- ರಳ–ಕುಳ–ಕ್ಷಳ

  ಕನ್ನಡದಲ್ಲಿ ಹಿಂದೆ ಮೂರು ರೀತಿಯ 'ಳ' ಕಾರಗಳಿದ್ದವು ಅವೇ ರಳ,ಕುಳ,ಕ್ಷಳ

–'ೞ' ಈ 'ಳ' ಕಾರವೇ ರಳ. ಸೂೞ್ ಪದಕ್ಕೆ ಸರದಿ ಪಾಳಿ ಎಂಬ ಅರ್ಥವಿದೆ.
'ಳ' ಅಕ್ಷರವೇ ಕುಳ. ಎಳ–ಚಿಕ್ಕ,ಸಣ್ಣ ; ಕಳಿ–ಪಕ್ವವಾಗು,ಮಾಗು ಎಂಬ ಅರ್ಥವುಳ್ಳ ಪದಗಳು
ಸಂಸ್ಕೃತದ 'ಲ'ಕಾರಕನ್ನಡಕ್ಕೆ ಬರುವಾಗ 'ಳ' ಕಾರ ರೂಪವನ್ನು ಹೊಂದುತ್ತದೆ ಇದೇ 'ಕ್ಷಳ' .
ಮಂಗಲ–ಮಂಗಳ; ಪಿಂಗಲ–ಪಿಂಗಳ ; ಜಳ – ಜಲ

- ರೇಫ – ಶಕಟ ರೇಫ :

'ರ' ಅಕ್ಷರವೇ ರೇಫ ಮತ್ತು 'ಱ' ಅಕ್ಷರವೇ ಶಕಟ ರೇಫ
ಈ ಅಕ್ಷರಗಳಿಂದ ಕೂಡಿದ ಪದಗಳಿಗೆ ಅರ್ಥ ವ್ಯತ್ಯಾಸವಿತ್ತು.

ಉದಾ: ಏರು–ಹತ್ತು ; ಏಱ್– ಗಾಯ
ಅರಿ–ತಿಳಿ ; ಅಱೆ–ಕತ್ತರಿಸು
ಮೊರೆ–ಪ್ರಾರ್ಥನೆ ಮೊಱೆ –ಗೋಳಾಡು, ಗುಂಯ್ ಗುಡು
ತೊರೆ–ಹೊಳೆ ತೊಱೆ – ಬಿಟ್ಟುಬಿಡು

- **ಅಲಂಕಾರ:**

**ಕನ್ನಡ ಸಾಹಿತ್ಯದಲ್ಲಿ ಕವಿಗಳು ಕಾವ್ಯದ ಸೌಂದರ್ಯವನ್ನು ಹೆಚ್ಚಿಸಲು ಬಳಸುವ ರೂಪವೇ ಅಲಂಕಾರ.**
**ಅಲಂಕಾರಗಳಲ್ಲಿ ಎರಡು ವಿಧ 1) ಶಬ್ದಾಲಂಕಾರ 2) ಅರ್ಥಾಲಂಕಾರ**

- **ಶಬ್ದಾಲಂಕಾರ:**

**"ಶಬ್ದ ಅಥವಾ ಅಕ್ಷರಗಳ ಜೋಡಣೆಯ ಚಮಾತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದೇ ಶಬ್ದಾಲಂಕಾರ. ಈ ಶಬ್ದಾಲಂಕಾರದಲ್ಲಿ ಮೂರು ಪ್ರಧಾನ ವಿಧಗಳಿವೆ ಅವೇ**
**ಅನುಪ್ರಾಸ, ಯಮಕ, ಚಿತ್ರ ಕವಿತ್ವ**

- **ಅನುಪ್ರಾಸ: ಅನುಪ್ರಾಸವನ್ನು ವೃತ್ತ್ಯನುಪ್ರಾಸ, ಛೇಕಾನುಪ್ರಾಸ ಎಂದು ವಿಂಗಡಿಸಲಾಗಿದೆ**

- **ವೃತ್ಯಾನುಪ್ರಾಸ:**

**ಒಂದು ಅಥವಾ ಎರಡು ವ್ಯಂಜನಾಕ್ಷರಗಳು ಪದ್ಯದ ಸಾಲುಗಳಲ್ಲಿ ಪುನರಾವರ್ತಿತವಾಗಿದ್ದರೆ ಅದನ್ನು ವೃತ್ಯಾನುಪ್ರಾಸ ಎಂದು ಕರೆಯುತ್ತಾರೆ**

**ಉದಾ: "ಎಳಗಿಳಿಗಳ ಬಳಗಗಳು ನಳನಳಿಸಿ ಬೆಳೆದ ಕಳವೆಯ ಎಳೆಯ ಕಾಳಿಗೆ ಎಳಸಿ ಬಂದವು"**
**ಇಲ್ಲಿ 'ಳ' ಕಾರ ಮತ್ತು 'ಗ' ಕಾರಗಳು ಪುನರಾವರ್ತಿತಗೊಂಡಿವೆ**
**ಉದಾ: ಬಲ್ಲವನೇ ಬಲ್ಲ ಬೆಲ್ಲದ ರುಚಿಯ**
**ಇಲ್ಲಿ 'ಲ' ಕಾರ ಮತ್ತು 'ಬ' ಕಾರಗಳು ಪುನರಾವರ್ತಿತಗೊಂಡಿವೆ**

- **ಛೇಕಾನುಪ್ರಾಸ:**

**ಎರಡು ವ್ಯಂಜನಗಳಿಂದ ಕೂಡಿದ ಪದ ಪುನರಾವರ್ತಿತವಾದರೆ ಅದನ್ನು ಛೇಕಾನುಪ್ರಾಸ ಎನ್ನುತ್ತಾರೆ.**

**ಉದಾ: ಉಗುಳಿ ಉಗುಳಿ ರೋಗ; ಬಗುಳಿ ಬಗುಳಿ ರಾಗ**
**ಮಾಡಿ ಮಾಡಿ ಕೆಟ್ಟರು; ನೀಡಿ ನೀಡಿ ಕೆಟ್ಟರು**

ಕೆಲದೋಳ್ ಪಳಿಂದಿಯಿರೆ ಪೆ
ರ್ಬುಲಿ ಮಂದೊಡಮಂಜನಳ್ಕ **ನೋಡಂ ನೋಡಂ**
ಚಲದಿಂದ **ಕಾಡಂಕಾಡಂ**
ಸಲೆ ಪಸಿವಂ ಮರೆದು ತಣಿದು **ಬೇಡಂ ಬೇಡಂ**

- **ಯಮಕಾಲಂಕಾರ:**

**ಮೂರು ಅಥವಾ ಅದಕ್ಕಿಂತ ಹೆಚ್ಚು ಅಕ್ಷರಗಳುಳ್ಳ ಪದ ಅಥವಾ ಪದ ಭಾಗ ಪಧ್ಯದ ಅದಿ, ಮದ್ಯ, ಅಂತ್ಯ ದಲ್ಲಿ ಎಲ್ಲಿಯಾದರೂ ನಿಯತವಾಗಿ ಪುನಃ ಪುನಃ ಬಂದರೆ ಅದು ಯಮಕಾಲಂಕಾರವೆನಿಸುವುದು.**

**ಅಮಳ್ಗಳ್** ನಯವಿಕ್ರಮ ಗುಣ
**ದಮಳ್ಗಳ್** ನೃಪಶಾಸ್ತ್ರ ಪರಿಣತರವರಂ
**ಸಮರ** ದೊಳಗಗ್ರ ಶೌರ್ಯಂ
**ಸಮರಸ** ಸಂಪನ್ನನಾವನುದಾರನಪ್ಪನ್

- **ಚಿತ್ರ ಕವಿತ್ವ**

**ಪ್ರೌಡ ಪಂಡಿತ ಕವಿಗಳು ತಮ್ಮ ಬುದ್ಧಿಕೌಶಲದಿಂದ ವೈಚಿತ್ರ್ಯ ಪೂರ್ಣವಾಗಿ ಅಕ್ಷರಗಳನ್ನೂ ಪದಗಳನ್ನೂ ಜೋಡಿಸಿ ಪದ್ಯ ರಚಿಸುತ್ತಾರೆ.ಇದಕ್ಕೆ ಚಿತ್ರಕವಿತ್ವ ಅಥವಾ ಬಂಧ ಎಂದು ಹೆಸರು.**
**ಇದರಲ್ಲಿ ನಿರೋಷ್ಠ್ಯ ,ತಾಲವ್ಯ, ಏಕಾಕ್ಷರ, ದ್ವ್ಯಕ್ಷರ,ತ್ರ್ಯಕ್ಷರ,ಹಾರಬಂಧ ಮುರುಜ ಬಂಧ ಇತ್ಯಾದಿ ಪ್ರಕಾರಗಳಿವೆ**

**ನನ್ದನ ನನ್ದನ ನಿನ್ನೊ**
**ನ್ದನ್ದದ ಮಯ ಮುನ್ದೆ ನಿನ್ದುದೆನ್ದೆನೆ ಮುದದಿ**
**ನ್ದನ್ದಿನ್ದುನ್ದೆನ್ದದೆ ನೀ**
**ನೆನ್ದುಂ ಮನ್ನನದೆ ನೆಮ್ಮಿನಿನ್ದೀ ಮುದಮಂ**

- **ಅರ್ಥಾಲಂಕಾರ:**

**ಪದಗಳ ಅರ್ಥ ಚಮಾತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಿದರೆ ಅದೇ ಅರ್ಥಾಲಂಕಾರ**
**ಅರ್ಥಾಲಂಕಾರದಲ್ಲಿ ಸುಮಾರು ನೂರಕ್ಕೂ ಹೆಚ್ಚು ಅಲಂಕಾರಗಳಿವೆ.ಅವುಗಳಲ್ಲಿ ಪ್ರಕೃತ ಆರು ಅಲಂಕಾರಗಳನ್ನು ನೀಡಿದೆ.ಉಪಮೇಯ ಉಪಮಾನಗಳೊಳಗಿನ ಸಂಬಂಧದಿಂದ ಅಲಂಕಾರ ಯಾವುದು ಎಂದು ನಿರ್ಧರಿಸಬಹುದು**
**ಉಪಮೇಯ: ಇದನ್ನು ವರ್ಣ್ಯ ಎಂತಲೂ ಕರೆಯುವರು ವಾಕ್ಯದಲ್ಲಿ ಕವಿ ಯಾವವಸ್ತುವನ್ನು ವರ್ಣಿಸುತ್ತಾನೆಯೋ ಅದೇ ವರ್ಣ್ಯ ಅಥವಾ ಉಪಮೇಯ**
**ಉಪಮಾನ : ಇದನ್ನು ಅವರ್ಣ್ಯ ಎಂತಲೂ ಕರೆಯುವರು. ವಾಕ್ಯದಲ್ಲಿ ಕವಿ ಯಾವ ವಸ್ತುವನ್ನು ಆದಾರವಾಗಿಟ್ಟುಕೊಂಡು ಅಥವಾ ಮಾನ ವಾಗಿಟ್ಟುಕೊಂಡು ವರ್ಣಿಸಲಾಗಿದೆಯೋ ಆ ವಸ್ತುವೇ ಅವರ್ಣ್ಯ ಅಥವಾ ಉಪಮಾನ**

- ಉಪಮಾಲಂಕಾರ:

ಉಪಮ ಎಂದರೇ ಹೋಲಿಕೆ ಎಂದರ್ಥ.ಉಪಮೆಯ ಉಪಮಾನಗಳೊಳಗೆ ಉಪಮಾ(ಹೋಲಿಕೆ) ಇರುವ ಅಲಂಕಾರವೇ ಉಪಮಾಲಂಕಾರ

ಉದಾ: ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.ಇಲ್ಲಿ ಮನೋರಮೆಯ ಹಣೆ ಅರ್ಧಚಂದ್ರಾಕೃತಿಯಲ್ಲಿದೆ ಎಂದು ಹೇಳುವ ಬದಲಿಗೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು ಎಂದು ಹೇಳಲಾಗಿದೆ.

- ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ ಮನೋರಮೆಯ ಹಣೆ ಎಂಬುದು ಉಪಮೇಯವಾಯ್ತು.
- ಬಾಲಚಂದ್ರನನ್ನು ಆಧಾರವಾಗಿಟ್ಟುಕೊಂಡು ಮನೋರಮೆಯ ಹಣೆಯನ್ನು ವರ್ಣಿಸುತ್ತಿರುವುದರಿಂದ ಬಾಲಚಂದ್ರ ಎಂಬುದು ಉಪಮಾನವಾಯ್ತು.
- ಉಪಮೆಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳುವಂತಹ ಅಂತೆ,ವೊಲ್,ವೋಲ್, ಮುಂತಾದ ಪದಗಳೇ ಉಪಮಾವಾಚಕಗಳು.ಇಲ್ಲಿ ಅಂತೆ ಎಂಬುದು ಉಪಮವಾಚಕ.
- ಉಪಮೆಯಕ್ಕೂ ಉಪಮಾನಕ್ಕೂ ಸಮನವಾಗಿ ಹೊಂದಿಕೆಯಾಗುವ ಕ್ರಿಯಾಪದವೇ ಸಮಾನ ಧರ್ಮ ಇಲ್ಲಿ ಆಕರ್ಷಣೀಯವಾಗಿತ್ತು ಎಂಬುದು ಸಮಾನ ಧರ್ಮ
- ಉಪಮೆಯಕ್ಕೂ ಉಪಮಾನಕ್ಕೂ ಹೋಲಿಕೆಯನ್ನು ಹೇಳಿರುವುದರಿಂದ ಇದು ಉಪಮಾಲಂಕಾರ

ಉಪಮಾಲಂಕಾರದಲ್ಲಿ ಪೂರ್ಣೋಪಮಾಲಂಕಾರ ,ಲುಪ್ತೋಪಮಾಲಂಕಾರ ಎಂದು ಎರಡು ವಿಧಗಳಿವೆ.

- ಪೂರ್ಣೋಪಮಾಲಂಕಾರ :

ಯಾವ ಉಪಮಾಲಂಕಾರದಲ್ಲಿ ಉಪಮೇಯ, ಉಪಮಾನ, ಉಪಮವಾಚಕ,ಸಮಾನ ಧರ್ಮ ಎಂಬ ನಾಲ್ಕು ಅಂಶಗಳು ಇರುತ್ತವೆಯೋ ಅದೇ ಪೂರ್ಣೋಪಮಾಲಂಕಾರ

ಉದಾ: " ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು"

| | | |
|---|---|---|
| ಉಪಮೇಯ (ವರ್ಣ್ಯ) | : | ಭೀಮ ದುರ್ಯೋಧನರು |
| ಉಪಮಾನ (ಅವರ್ಣ್ಯ) | : | ಮದಗಜಗಳು |
| ಉಪಮ ವಾಚಕ | : | ಅಂತೆ |
| ಸಮಾನ ಧರ್ಮ | : | ಹೋರಾಟ |
| ಅಲಂಕಾರ | : | ಉಪಮಾಲಂಕಾರ |

- **ಸಮನ್ವಯ:** ಇಲ್ಲಿ **ಉಪಮೇಯವಾದ ಭೀಮ ದುರ್ಯೋಧನರನ್ನು ಉಪಮಾನ** ವಾದ **ಮದಗಜಗಳಿಗೆ** ಹೋಲಿಸಲಾಗಿದೆ.**'ಅಂತೆ'** ಎಂಬ **ವಾಚಕ** ಪದವಿದ್ದು **'ಹೋರಾಟ'** ಎಂಬ **ಸಮಾನ ಧರ್ಮ** ಇರುವುದರಿಂದ ಇದನ್ನು **ಪೂರ್ಣೋಪಮಾಲಂಕಾರ ಎಂದು ಹೇಳ ಬಹುದು**

**ಉದಾ : "ಸತಿಪತಿಗಳೊಂದಾಗದ ಭಕ್ತಿ ಅಮೃತದೊಳು ವಿಷಬೆರೆತಂತೆ "**

**" ಹೊಳೆ ದಂಡೆಲಿರುವ ಕರಕೀಯ ಕುಡಿಯಾಂಗ ಹಬ್ಬಲೆ ಅವರ ರಸಬಳ್ಳಿ "**

- **ಲುಪ್ತೋಪಮಾಲಂಕಾರ :**

ಇದು ಉಪಮಲಂಕಾರದ ಇನ್ನೊಂದು ಪ್ರಭೇದ. ಪೂರ್ಣೋಪಮಾಲಂಕಾರವಾಗಬೇಕಾದರೆ ಇರಬೇಕಾದ ನಾಲ್ಕು ಅಂಶಗಳಲ್ಲಿ ಯಾವುದಾದರೂ **ಅಂಶ** ಇಲ್ಲವಾದರೆ **ಅದು ಲುಪ್ತೋಪಮಾಲಂಕಾರ ವಾಗುತ್ತದೆ.ಯಾವ ಅಂಶ ಲುಪ್ತವಾಗಿದೆಯೋ ಅದೇ ಹೆಸರಿನಿಂದ ಆ ಅಲಂಕಾರವನ್ನು ಕರೆಯಲಾಗುತ್ತದೆ. ಅಂದರೆ ಉಪಮೇಯ ಇಲ್ಲವಾದರೆ ಉಪಮೇಯಲು ಪ್ತೋಪಮಾಲಂಕಾರ. ಹಾಗೆಯೇ ಉಪಮಾನ ಲುಪ್ತೋಪಮಾಲಂಕಾರ, ವಾಚಕಲುಪ್ತೋಪಮಾಲಂಕಾರ, ಧರ್ಮಲುಪ್ತೋಪಮಾಲಂಕಾರ, ವಾಚಕ ಧರ್ಮಲುಪ್ತೋಪಮಾಲಂಕಾರ ಇತ್ಯಾದಿ ಲುಪ್ತೋಪಮಾಲಂಕಾರಗಳಿವೆ.**

- **ಉದಾ : ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ**

**ಗುಂಡು ಹೊಡೆದರೊ ಮುಂಗಾರಿ ಸಿಡಿಲ ಸಿಡಿದ್ದಾಂಗ**

- **ರೂಪಕಾಲಂಕಾರ:**

**–ಶಾಲೆಗೆ ಈ ವಿದ್ಯಾರ್ಥಿಯೊಂದು ರತ್ನ**

**–ಮನೆಯೇ ಧರ್ಮಾಶ್ರಮ**

**ಮೊದಲ ವಾಕ್ಯದಲ್ಲಿ ವಿದ್ಯಾರ್ಥಿ ಎಂಬುದು ಉಪಮೇಯ ರತ್ನ ಎಂಬುದು ಉಪಮಾನ. ಎರಡನೆಯ ವಾಕ್ಯದಲ್ಲಿ ಮನೆ ಎಂಬುದು ಉಪಮೇಯ ಧರ್ಮಾಶ್ರಮ ಎಂಬುದು ಉಪಮಾನ. ಎರಡೂ ವಾಕ್ಯಗಳಲ್ಲಿ ಉಪಮೇಯಕ್ಕೂ ಉಪಮಾನಕ್ಕೂ ಯಾವುದೇ ಭೇದವಿಲ್ಲದಂತೆ ವರ್ಣಿಸಲಾಗಿದೆ.**

- **ಸೂತ್ರ: ಉಪಮೇಯ,ಉಪಮಾನಗಳು ಎರಡೂ ಒಂದೇ ಎಂದು ಭೇದವಿಲ್ಲದಂತೆ ಹೇಳುವ ಅಲಂಕಾರವೇ ರೂಪಕಾಲಂಕಾರ**

**ಉದಾ : "ಸೀತೆಯ ಮುಖ ಕಮಲ ಅರಳಿತು"**

**ಉಪಮೇಯ : ಸೀತೆಯ ಮುಖ**

**ಉಪಮಾನ : ಕಮಲ**

**ಅಲಂಕಾರ : ರೂಪಕಾಲಂಕಾರ**

**ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಅಭೇದವಾಗಿ ರೂಪಿಸಿದೆ. ಹಾಗಾಗಿ ಇದು ರೂಪಕಾಲಂಕಾರ**

**ಉದಾ : ಮಾರಿಗೌತಣವಾಯ್ತು ನಾಳಿನ ಭಾರತವು**

- **ದುಷ್ಟಾಂತಾಲಂಕಾರ:**

  **ಮಾತು ಬಲ್ಲವನಿಗೆ ಜಗಳವಿಲ್ಲ , ಊಟ ಬಲ್ಲವನಿಗೆ ರೋಗವಿಲ್ಲ**

ಮಾತಿನ ಮಹತ್ವ ತಿಳಿದವನಿಗೆ ಜಗಳ ಮಾಡಬೇಕಾದ ಪ್ರಮೇಯವಿಲ್ಲ .ಊಟದ ಮರ್ಮ ಅರಿತವನಿಗೆ ರೋಗದ ಭಯವಿಲ್ಲ ಎಂಬ ಅರ್ಥ ಈ ಎರಡೂ ಹೇಳಿಕೆಗಳಿಂದ ತಿಳಿದು ಬರುತ್ತದೆ. ಇಲ್ಲಿ ಒಂದು ಹೇಳಿಕೆ ಮತ್ತೊಂದು ಹೇಳಿಕೆಯಲ್ಲಿ ಬಿಂಬ–ಪ್ರತಿಬಿಂಬ ಭಾವಗಳಂತೆ ವ್ಯಕ್ತವಾಗಿದೆ.
ಸೂತ್ರ : ಎರಡು ಬೇರೆಬೇರೆ ವಾಕ್ಯಗಳು (ಉಪಮೇಯ,ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು ದುಷ್ಟಾಂತಾಲಂಕಾರ

ಉದಾ: ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೇ, ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣವನ್ನು ಪಸರಿಸದಿರುವನೇ?

ಉಪಮೇಯ: ದುರ್ಜನರು ನಿಂದಿಸುವರೆಂಬ ಭಯದಿಂದ ಸತ್ಕವಿಯಾದವನು ತನ್ನ ಕೃತಿಯನ್ನು ರಚಿಸದಿರುವನೇ?

ಉಪಮಾನ: ಕತ್ತಲೆಯ ಭಯದಿಂದ ಸೂರ್ಯ ತನ್ನ ಕಿರಣವನ್ನು ಪಸರಿಸದಿರುವನೇ?
ಅಲಂಕಾರ: ದುಷ್ಟಾಂತಾಲಂಕಾರ:

ಸಮನ್ವಯ: ದುರ್ಜನರು ನಿಂದಿಸುವರೆಂಬ ಭಯವನ್ನು ಗಣನೆಗೆ ತೆಗೆದುಕೊಳ್ಳದೇ ಒಳ್ಳೆಯ ಕವಿಯಾದವನು ತನ್ನ ಕೃತಿಯನ್ನು ರಚಿಸಿಯೇ ರಚಿಸುತ್ತಾನೆ ಎಂಬ ಮಾತಿಗೂ ಕತ್ತಲೆಯ ಹೆದರಿಕೆಯಿಂದ ಸೂರ್ಯನು ಸುಮ್ಮನಿರದೆ ತನ್ನ ಕಿರಣವನ್ನು ಪಸರಿಸಿಯೆ ಪಸರಿಸುತ್ತಾನೆ ಎಂಬ ಮಾತಿಗೂಅರ್ಥ ಸಾದೃಶ್ಯದಿಂದ ಬಿಂಬ ಪ್ರತಿಬಿಂಬಭಾವವೂ ಉಪಮೇಯ ಉಪಮಾನಗಳೆರಡರಲ್ಲೂ ವ್ಯಕ್ತವಾಗುವುದರಿಂದ ಇದು ದುಷ್ಟಾಂತಾಲಂಕಾರ

- ಉತ್ಪ್ರೇಕ್ಷಾಲಂಕಾರ :

ಸೂತ್ರ : ಒಂದು ವಸ್ತುವನ್ನು ಅಥವಾ ಸನ್ನಿವೇಶವನ್ನು ಮತ್ತೊಂದಾಗಿ ಸಂಭಾವಿಸಿ (ಕಲ್ಪಿಸಿಕೊಂಡು) ವರ್ಣಿಸಿದರೆ ಉತ್ಪ್ರೇಕ್ಷಾಲಂಕಾರವಾಗುವುದು.

ಉದಾ: ಸೀತೆಯ ಮುಖ ಕಮಲವೋ ಎಂಬಂತೆ ಅರಳಿತು
ಉಪಮೇಯ: ಸೀತೆಯ ಮುಖ
ಉಪಮಾನ: ಕಮಲ
ಅಲಂಕಾರ;ಉತ್ಪ್ರೇಕ್ಷಾಲಂಕಾರ:

ಸಮನ್ವಯ: ಉಪಮೇಯವಾದ ಸೀತೆಯ ಮುಖವನ್ನು ಕಮಲವೆಂಬುದಾಗಿ ಕಲ್ಪಿಸಿಕೊಳ್ಳಲಾಗಿರುವುದರಿಂದ ಇದು ಉತ್ಪ್ರೇಕ್ಷಾಲಂಕಾರ

- **ಅರ್ಥಾಂತರನ್ಯಾಸಾಲಂಕಾರ:**

ಒಂದು ವಿಷೇಶ ವಾಕ್ಯವನ್ನು (ಸಾಂದರ್ಭಿಕ ವಾಕ್ಯ) ಸಾಮಾನ್ಯ ವಾಕ್ಯದಿಂದ (ರೂಢಿರಲ್ಲಿರುವ ವಾಕ್ಯ) ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರ

ಉದಾ: ಆತ ಉಂಡ ಮನೆಗೆ ಕೇಡು ಬಗೆದ; ಕೃತಘ್ನರು ಏನನ್ನುತಾನೆ ಮಾಡರು?

ಉಪಮೇಯ: (ವಿಶೇಷ ವಾಕ್ಯ) ಆತ ಉಂಡ ಮನೆಗೆ ಕೇಡು ಬಗೆದ
ಉಪಮಾನ: (ಸಾಮಾನ್ಯ ವಾಕ್ಯ) ಕೃತಘ್ನರು ಏನನ್ನುತಾನೆ ಮಾಡರು

ಇಲ್ಲಿ ಉಪಮಾನವಾದ ಕೃತಘ್ನರು ಏನನ್ನುತಾನೆ ಮಾಡರು ಎಂಬ ಲೋಕರೂಢಿಯ ಮಾತನ್ನು ಆಧರಿಸಿ ಉಪಮೇಯವಾದ ಆತ ಉಂಡ ಮನೆಗೆ ಕೇಡು ಬಗೆದ ಎಂಬ ವಿಶೇಷ ವಾಕ್ಯವನ್ನು ಸಮರ್ಥಿಸಲಾಗಿದೆ.

- **ಶ್ಲೇಷಾಲಂಕಾರ:**

ಒಂದಕ್ಕಿಂತ ಹೆಚ್ಚು ಅರ್ಥಕೊಡುವ ಪದಶಕ್ತಿಗೆ ಶ್ಲೇಷೆ ಎಂದು ಹೆಸರು ಬೇರೆ ಬೇರೆ ಅರ್ಥಗಳನ್ನು ಹೊಂದಿದ ಒಂದೇ ಶಬ್ದ ಉಪಮೇಯ ಮತ್ತು ಉಪಮಾನಗಳಿಗೆ ಬೇರೆಬೇರೆ ಅರ್ಥವನ್ನು ನೀಡುವಂತೆ ವರ್ಣಿಸಲ್ಪಟ್ಟರೆ ಅದು ಶ್ಲೇಷಾಲಂಕಾರ:

ಉದಾ: ಆ ವಿವಾಹ ಮಂಟಪ ಪುರಂದರಪುರದಂತೆ ಸದಾ ರಂಭಾನ್ವಿತ ವಿಬುಧ ಮಿಳಿತವಾಗಿತ್ತು

ಇಲ್ಲಿ ವಿವಾಹ ಮಂಟಪವೊಂದರ ವರ್ಣನೆ ಮಾಡಲಾಗಿದೆ. ಪುರಂದರಪುರವೆಂದರೆ ದೇವೇಂದ್ರನ ಪಟ್ಟಣ ಅಂದರೆ ಸ್ವರ್ಗ. ರಂಭಾನ್ವಿತ ವಿಬುಧ ಮಿಳಿತ ಎರಡು ಪದಗಳು ಉಪಮೇಯ ಮತ್ತು ಉಪಮಾನಗಳಿಗೆ ಬೇರೆಬೇರೆ ಅರ್ಥವನ್ನು ನೀಡುತ್ತವೆ.

| ಪದ | ವಿವಾಹ ಮಂಟಪದ ಪರವಾಗಿ | ಸ್ವರ್ಗದ ಪರವಾಗಿ |
|---|---|---|
| ರಂಭಾನ್ವಿತ | ಬಾಳೆಯ ಗಿಡಗಳಿಂದ ಕೂಡಿತ್ತು | ರಂಭೇಯೆಂಬ ಅಪ್ಸರೆಯಿಂದ ಕೂಡಿತ್ತು |
| ವಿಬುಧ ಮಿಳಿತ | ಬ್ರಾಹ್ಮಣರಿಂದ ಕೂಡಿತ್ತು | ದೇವತೆಗಳಿಂದ ಕೂಡಿತ್ತು |

ಉದಾ: "ಚಕ್ರಾಂಕಂ ಅಗಲ್ವಿನ ಶ್ರಮದಿಂ ನಂಬರಮಂ ಬಿಸುಟುರ್ವಿಗಂಧಕಾರಂ ಕವಿತರ್ಪಿನಂ ಕುರುಕುಲಾರ್ಕನಂ ಅರ್ಕನಂ ಅಸ್ತಮೈದಿದರ್"

ಸೂರ್ಯಾಸ್ತಮಾನಕ್ಕೂ ,ಕೌರವನ ಅವಸಾನಕ್ಕೂ ಸರಿಹೊಂದುವಂತೆ ರನ್ನನು ಪದ್ಯ ರಚನೆ ಮಾಡಿ,ಕುರುಕುಲಾರ್ಕನ ಸಾವನ್ನು ಹೀಗೆ ವರ್ಣಿಸಿದ್ದಾನೆ

ಚಕ್ರಾಂಕ– ಚಕ್ರವಾಕ ಪಕ್ಷಿಗಳು : ಚಕ್ರವರ್ತಿ ಪದವಿ
ಅಂಬರ – ಆಕಾಶ , ಬಟ್ಟೆ
ಅಂಧಕಾರ– ಕತ್ತಲೆ , ದುಃಖವೆಂಬ ಕತ್ತಲೆ
ಈ ಪದಗಳು ಸೂರ್ಯನಿಗೂ, ಕೌರವನಿಗೂ ಕೂಡಿಯೇ ಹೊಂದಿಕೆಯಾಗುತ್ತದೆ.

- **ಛಂದಸ್ಸು:**

ಪದ್ಯವನ್ನು ರಚಿಸುವ ಶಾಸ್ತ್ರವೇ ಛಂದಸ್ಸು.ಇದರಲ್ಲಿ ಪ್ರಾಸ,ಯತಿ,ಗಣ ಎಂದು ಮೂರು ವಿಧಗಳಿವೆ

## ಪ್ರಾಸ:

ಒಂದು ನಿರ್ದಿಷ್ಟ ವ್ಯಂಜನವು ಪದ್ಯದ ಆದಿ ,ಮಧ್ಯ ಅಥವಾ ಅಂತ್ಯದಲ್ಲಿ ನಿಯತವಾಗಿ ಬರುವುದೇ ಪ್ರಾಸ. ಕಾವ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆ ಸಾಲಿನ ನಡುವೆ ಬರುವ ಪ್ರಾಸ ಆದಿಪ್ರಾಸ. ಪ್ರತಿ ಸಾಲಿನ ಮದ್ಯದಲ್ಲಿ ಬರುವ ಪ್ರಾಸ ಮದ್ಯಪ್ರಾಸ ಪ್ರತೀ ಸಾಲಿನ ಅಂತ್ಯದಲ್ಲಿ ಬರುವ ಪ್ರಾಸ ಅಂತ್ಯ ಪ್ರಾಸ.

## ಯತಿ:

ಕಾವ್ಯವನ್ನು ವಾಚಿಸುವಾಗ ಅರ್ಥಕ್ಕೆ ಅಡ್ಡಿಯಾಗದಂತೆ ಉಸಿರು ತೆಗೆದುಕೊಳ್ಳಲು ನಿಲ್ಲಿಸುವ ತಾಣ

## ಗಣ:

ಗಣ ಎಂದರೆ ಗುಂಪು.
ಛಂದಸ್ಸಿನಲ್ಲಿ ಮಾತ್ರಾ ಗಣ ,ಅಕ್ಷರ ಗಣ,ಅಂಶಗಣಗಳೆಂಬ ಮೂರು ವಿಧಗಳಿವೆ

- **ಮಾತ್ರಾಗಣ:**

ಮಾತ್ರೆಗಳ ಆಧಾರದಿಂದ ಗಣವಿಂಗಡಣೆ ಮಾಡುವುದೇಮಾತ್ರಾಗಣ.ಮೂರು,ನಾಲ್ಕು,ಐದು ಮಾತ್ರೆಗಳಿಗೆ ಒಂದೊಂದು ಗಣ ಮಾಡಲಾಗುವುದು ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಲಘು( ∪) ಎಂದೂ ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳಿಗೆ ಗುರು( –) ಎಂದೂ ಕರೆಯುವರು.

ಅಕ್ಷರ ಗುರು ಎನಿಸುವ ಲಕ್ಷಣಗಳು:

– ∪   – ∪∪

1. ದೀರ್ಘಾಕ್ಷರಗಳು — ಶಾಲೆ, ಕೀರುತಿ

–∪ –∪

2. ಒತ್ತಕ್ಷರದ ಹಿಂದಿನ ಅಕ್ಷರ — ಅಕ್ಕ ಪಕ್ಕ

– ∪∪   – ∪

3. ಅನುಸ್ವಾರ ವಿಸರ್ಗದಿಂದ ಕೂಡಿದ ಅಕ್ಷರ– — ಬಂದನು, ದುಃಖ

∪ ∪ –   –

4. ವ್ಯಂಜನಾಕ್ಷರದಿಂದ ಕೂಡಿದ ಅಕ್ಷರ — ಮನದೊೞ್, ಕೞ್

– ∪ ∪   – ∪∪

5. 'ಐ' ಮತ್ತು ಔ ಸಹಿತವಾದ ಅಕ್ಷರ — ಮೈಸೂರು, ಯೌವನ

6. ಷಟ್ಪದಿಯ ಮೂರು ಮತ್ತು ಆರನೇ ಸಾಲಿನ ಕೊನೆಯ ಅಕ್ಷರ

ಮೇಲಿನ ಲಕ್ಷಣಗಳನ್ನು ಹೊಂದದ ಅಕ್ಷರಗಳನ್ನು ಲಘುವೆಂದು ಪರಿಗಣಿಸಬೇಕು.

ಕಂದ,ಷಟ್ಪದಿ, ರಗಳೆ ಛಂದಸ್ಸುಗಳು ಮಾತ್ರಾಗಣ ಆಧಾರಿತ ಛಂದಸ್ಸುಗಳು.

- ಕಂದ: * ಇದು ನಾಲ್ಕು ಸಾಲಿನ ಪದ್ಯ ಬಾಗ
- 1 ಮತ್ತು 3ನೇ ಸಾಲು ಸಮ ಇಲ್ಲಿ 4 ಮಾತ್ರೆಯ 3 ಗಣಗಳಿರುತ್ತವೆ
- 2 ಮತ್ತು 4ನೇ ಸಾಲು ಸಮ ಇಲ್ಲಿ 4 ಮಾತ್ರೆಯ 5 ಗಣಗಳಿರುತ್ತವೆ
- ಪ್ರತೀ ಪಾದವೂ ಆದಿ ಪ್ರಸದಿಂದ ಕೂಡಿರಬೇಕು
- ಆರನೇ ಮತ್ತು ಹತ್ತನೆ ಗಣ ಜಗಣ ∪ – ∪ ವಾಗಿರಬೇಕು ಅಥವಾ ಸರ್ವಲಘು ಗಣವಾಗಿರಬೇಕು
- ಕಂದ ಪದ್ಯದ ಒಟ್ಟು ಮಾತ್ರೆಯ ಸಂಖ್ಯೆ 64

— — | ∪ — ∪ | ∪ ∪ ∪ ∪

ನೀನು । ಳ್ಗೊಡೆಲ್ಲ । ರೊಳರೆಮ

— ∪ ∪ | —∪ ∪ | ∪—∪ | — ∪∪ | ∪∪ —

ಗೇನುಮ । ಳಿಲ್ ಮನ । ದೊಳಿಲ್ಲ । ದೆಂತೆನೆ । ಮಗನೇ

**ಷಟ್ಪದಿ:** ಲಕ್ಷಣಗಳು:

1. 6ಸಾಲಿನ ಪಧ್ಯ 2.) 1,2,4,5 ನೇ ಸಾಲುಗಳು ಸಮನಾಗಿದ್ದು ಮಾತ್ರೆಗಳ ಧೃಷ್ಟಿಯಿಂದಲೂ ಸಮ
2. 3 ಮತ್ತು 6 ನೇ ಸಾಲುಗಳು ಸಮ.ಕೊನೆಯಲ್ಲಿನ ಅಕ್ಷರ ಲಘುವಾಗಿದ್ದರೂ ಗುರುವೇಂದು ಪರಿಗಣಿಸಬೇಕು
3. ಪರೀಕ್ಷೆಯಲ್ಲಿ ಮೊದಲರ್ಧ(3ಸಾಲು) ನೀಡುವರು 6. ಷಟ್ಪಧಿಗಳಲ್ಲಿ 6 ವಿಧ
4. ಶರ, ಕುಸುಮ , ಭೋಗ, ಭಾಮಿನಿ, ವಾರ್ಧಕ ಹಾಗು ಪರಿವರ್ದಿನಿ

**ಭಾಮಿನಿ ಷಟ್ಪದಿ:**

ಲಕ್ಷಣಗಳು:

1).ಇದು 6 ಸಾಲಿನ ಪದ್ಯ

2) ಇಲ್ಲಿ 1,2,4,5, ಸಾಲುಗಳು ಸಮನಾಗಿದ್ದು 3–4 ಮಾತ್ರೆಯ ಎರಡೆರಡು ಗಣಗಳಿರುತ್ತವೆ.

3).ಇಲ್ಲಿ 3 ಮತ್ತು 6ನೇ ಸಾಲುಗಳು ಸಮನಾಗಿದ್ದು 3–4 ಮಾತ್ರೆಯ ಮೂರು ಮೂರು ಗಣ,ಕೊನೆಯಲ್ಲಿ ಒಂದು ಗುರು ಇರುತ್ತದೆ. 4.)ಒಟ್ಟು 102 ಮಾತ್ರೆಗಳಿರುತ್ತವೆ.

∪∪∪ | —∪∪ | —∪ | —∪∪ |

ಇನತ । ನೂಜನ । ಕೂಡೆ । ಮೈದುನ

∪∪∪ | ∪∪∪∪ | ∪∪∪ | ∪∪∪∪

ತನದ । ಸರಸವ । ನೆಸಗಿ । ರಥದೊಳು

∪∪∪ | ∪∪∪∪ | ∪∪∪ | —∪∪ | ∪∪∪ | —∪∪ | —

ದನುಜ । ರಿಪುಬರ । ಸೆಳೆದು । ಕುಳ್ಳಿರಿ । ಸಿದನು । ಪೀಠದ । ಲಿ

(ಕೌರವೇಂದ್ರನ ಕೊಂದೆ ನೀನು ಪದ್ಯಕ್ಕೆ ಪ್ರಸ್ತಾರ ಹಾಕಿರಿ)

## • ವಾರ್ಧಕ ಷಟ್ಪದಿ:

**1).ಇದು 6 ಸಾಲಿನ ಪದ್ಯ 2) ಇಲ್ಲಿ 1,2,4,5, ಸಾಲುಗಳು ಸಮನಾಗಿದ್ದು 5 ಮಾತ್ರೆಯ 4 ಗಣಗಳಿರುತ್ತವೆ.**
**3).ಇಲ್ಲಿ 3 ಮತ್ತು 6ನೇ ಸಾಲುಗಳು ಸಮನಾಗಿದ್ದು 5 ಮಾತ್ರೆಯ 6 ಗಣಗಳು ಮತ್ತು ,ಕೊನೆಯಲ್ಲಿ ಒಂದು ಗುರು ಇರುತ್ತದೆ. 4.) ಒಟ್ಟು 144 ಮಾತ್ರೆಗಳಿರುತ್ತವೆ.**

**––U | UU–U | UUU– | U– UUU |**

**ಬಲ್ಗಯ್ಯ । ನೃಪರಂಜಿ । ತಡೆಯದೇ । ರಘೂದ್ವಹನ ।**

**– – U | UU UUU | – UU U | –UUU |**

**ಸೊಲ್ಗೇಳಿ । ನಮಿಸಲಿಳೆ । ಯೊಳ್ಚರಿಸು । ತದ್ವರದ**

**–UUU | – U – | –UUU | –UUU | UU – U | UUUUU | –**

**ನಲ್ನುಡುರೆ । ಬಂದು ವಾ । ಲ್ಮೀಕಿಯ ನಿ । ಜಾಶ್ರಮದ । ವಿನಿಯೋಗ । ದುಪವನದೊ । ಳು**

**(ವೀರಲವ ಪದ್ಯಕ್ಕೆ ಪ್ರಸ್ಥಾರ ಹಾಕಿರಿ)**

## • ರಗಳೆ

**ರಗಳೆ ಎಂಬುದು "ರಘಟಾ" ಎಂಬ ಸಂಸ್ಕೃತ ಪದದ ತದ್ಭವ ರೂಪ.ಕನ್ನಡದಲ್ಲಿ ಸಾಮಾನ್ಯವಾಗಿ ಉತ್ಸಾಹ,ಮಂದಾನಿಲ,ಲಲಿತ ಎಂಬ ಮೂರು ವಿಧದ ರಗಳೆಗಳು ಪ್ರಸಿದ್ಧವಾಗಿವೆ. 'ರಗಳೆ'ಯಲ್ಲಿ ಇಂತಿಷ್ಟೆ ಸಾಲುಗಳು ಇರಬೇಕೆಂಬ ನಿಯಮವಿಲ್ಲ ಆದರೆ ಎಲ್ಲಾ ಸಾಲುಗಳು ಸಮಾನವಾದ ಮಾತ್ರಾ ಗಣದಿಂದ ಕೂಡಿರುತ್ತವೆ.ಎರಡೆರಡು ಸಾಲುಗಳಲ್ಲಿ ಪ್ರಾಸಗಳಿರುತ್ತವೆ.**

## • ಉತ್ಸಾಹರಗಳೆ:

**ಇದರಲ್ಲಿ ಎರಡು ಬಗೆಗಳಿವೆ.**
**ಮೊದಲನೆಯದರಲ್ಲಿ ಪ್ರತೀ ಪಾದದಲ್ಲಿ ಮೂರು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ.**
**ಎರಡನೆಯದರಲ್ಲಿ ಪ್ರತೀ ಪಾದದಲ್ಲಿ ಮೂರು ಮಾತ್ರೆಯ ಮೂರು ಗಣಗಳ ಮೇಲೆ ಒಂದು ಗುರು ಬರುತ್ತದೆ.**

ಮೊದಲನೆಯ ಬಗೆಗೆ ಉದಾಹರಣೆ:

UUU | –U | –U | –U

ಕುಳಿರ್ವ | ಪೂಗೊ | ಳಂಗ | ಳಲ್ಲಿ

UUU | –U | – U | –U

ತಳಿರ | ಕಾವ | ಣಂಗ | ಳಲ್ಲಿ

–U | –U | –U | –U

ತುಂಬಿ | ವಿಂಡಿ | ನಂತೆ | ಪಾಡಿ

–U | –U | –U | –U

ಜಕ್ಕ | ವಕ್ಕಿ | ಯಂತೆ | ಕೂಡಿ

ನಾಲ್ಕು ಸಾಲುಗಳುಳ್ಳ ಈ ಉತ್ಸಾಹ ರಗಳೆಯಲ್ಲಿ ಪ್ರತೀ ಸಾಲಿನಲ್ಲೂ ಮೂರು ಮಾತ್ರೆಗಳ ನಾಲ್ಕು ಗಣಗಳುಂಟು.ಮೊದಲೆರಡು ಸಾಲುಗಳಲ್ಲಿ ಆದಿ ಮತ್ತು ಅಂತ್ಯ ಪ್ರಾಸಗಳೂ ಮತ್ತೆರಡು ಸಾಲುಗಳಲ್ಲಿ ಅಂತ್ಯಪ್ರಾಸವೂ ಇರುವುದನ್ನು ಗಮನಿಸಬಹುದು.

ಸೂತ್ರ: ಎರಡೆರಡು ಸಾಲುಗಳಲ್ಲಿ ಪ್ರಾಸ ನಿಯಮವನ್ನಿಟ್ಟುಕೊಂಡು ಮೂರು ಮಾತ್ರೆಯ ನಾಲ್ಕು ಗಣಗಳ ಗಣನಿಯಮದಿಂದ ಸಾಲುಗಳ ಸಂಖ್ಯಾ ನಿಯಮವಿಲ್ಲದೆ ಇರುವ ಪದ್ಯ ಜಾತಿಯೇ ಉತ್ಸಾಹ ರಗಳೆ ಎನಿಸುವುದು.

ಎರಡನೆಯದರಲ್ಲಿ , ಪ್ರತೀ ಪಾದದಲ್ಲಿ ಮೂರು ಮಾತ್ರೆಯ ಮೂರು ಗಣಗಳ ಮೇಲೆ ಒಂದು ಗುರು ಬರುತ್ತದೆ

ಎರಡನೆಯ ಬಗೆಗೆ ಉದಾಹರಣೆ:

– U | UUU | –U | –

ಮಾವಿ | ನಡಿಯೊ | ಳಾಡು | ತಂ

– U | –U | –U | –

ಪಾಡ | ನೆಯ್ದೆ | ಕೇಳು | ತಂ

ಎರಡು ಸಾಲುಗಳುಳ್ಳ ಈ ಉತ್ಸಾಹ ರಗಳೆಯಲ್ಲಿ ಪ್ರತೀ ಸಾಲಿನಲ್ಲೂ ಮೂರು ಮಾತ್ರೆಗಳ ಮೂರು ಗಣಗಳು ಮೇಲೆ ಒಂದು ಗುರು ಬಂದಿದೆ. .ಮೊದಲೆರಡು ಸಾಲುಗಳಲ್ಲಿ ಅಂತ್ಯ ಪ್ರಾಸಗಳೂ ಇರುವುದನ್ನುಗಮನಿಸಬಹುದು.

ಶಿಥಿಲದ್ವಿತ್ವ:

ಒಂದು ಅಕ್ಷರವು ಸಂಯುಕ್ತಾಕ್ಷರವಾಗಿದ್ದರೆ (ಒತ್ತಕ್ಷರ) ಆ ಅಕ್ಷರವನ್ನು ತೇಲಿಸಿ ಉಚ್ಚರಿಸಿದಾಗ ಅಲ್ಲಿರುವ ಒತ್ತು ಶಿಥಿಲವಾಗುತ್ತದೆ ಇಂತಹ ಅಕ್ಷರವನ್ನೇ ಶಿಥಿಲದ್ವಿತ್ವಾಕ್ಷರ ಎಂದು ಕರೆಯುವುದು. ಮೇಲಿನ ಪದ್ಯದ ಮೊದಲ ಸಾಲಿನ ಮೊದಲ ಪದವಾದ 'ಕುಳಿರ್ವ' ಎಂಬಲ್ಲಿ 'ರ್ವ' ಎಂಬುದು ಒತ್ತಕ್ಷರವಾಗಿದೆ (ದ್ವಿತ್ವಾಕ್ಷರ) ನಿಯಮಾನುಸಾರ ಅದರ ಹಿಂದಿನ ಅಕ್ಷರ 'ಳಿ' ಎಂಬುದು ಗುರು ಎನಿಸಿಕೊಳ್ಳುತ್ತದೆ .ಆದರೆ ಇಲ್ಲಿರುವ 'ರ್ವ' ಎಂಬ ಅಕ್ಷರವನ್ನು ತೇಲಿಸಿ ಉಚ್ಚರಿಸುವುದರಿಂದ ಇಲ್ಲಿ ಶಿಥಿಲದ್ವಿತ್ವ ಉಂಟಾಗಿ 'ಳಿ" ಎಂಬ ಅಕ್ಷರವು ಲಘು ಎನಿಸಿಕೊಳ್ಳುತ್ತದೆ.

- **ಮಂದಾನಿಲ ರಗಳೆ :**

- ಇದರಲ್ಲೂ ಎರಡು ಬಗೆಗಳಿವೆ.
- ಮೊದಲನೆಯದರಲ್ಲಿ ಪ್ರತೀ ಪಾದದಲ್ಲಿ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ.
- ಎರಡನೆಯದರಲ್ಲಿ ಪ್ರತೀ ಪಾದದಲ್ಲಿ ಮೂರು ಮಾತ್ರೆಯ ನಂತರ ಐದು ಮಾತ್ರೆಯ ಎರಡೆರಡು ಗಣಗಳು ಬರುತ್ತದೆ.

ಮೊದಲನೆಯ ಬಗೆಗೆ ಉದಾಹರಣೆ:

—UU | — — | U U U U | — —

ಆಡುವ । ಗುಂಡ । ಯ್ಯನ ಹೊಸ । ನೃತ್ಯಂ

— U U | U U — | —U U | — —

ನೋಡುವ । ಶಿವನಂ । ಮುಟ್ಟಿತು । ಸತ್ಯಂ

ಸೂತ್ರ: ನಾಲ್ಕು ಮಾತ್ರೆಯ ನಾಲ್ಕು ಗಣಗಳು ಪ್ರತೀ ಪಾದದಲ್ಲೂ ಬಂದು ಎರಡೆರಡು ಸಾಲುಗಳಿಗೆ ಪ್ರಾಸ ನಿಯಮವಿರುವ ಪದ್ಯಜಾತಿಗೆ ಮಂದಾನಿಲ ರಗಳೆ ಎನ್ನುವರು.

- ಎರಡನೆಯದರಲ್ಲಿ ಪ್ರತೀ ಪಾದದಲ್ಲಿ ಮೂರು ಮಾತ್ರೆಯ ನಂತರ ಐದು ಮಾತ್ರೆಯ ಎರಡೆರಡು ಗಣಗಳು ಬರುತ್ತದೆ.

ಎರಡನೆಯ ಬಗೆಗೆ ಉದಾಹರಣೆ:

—U | — U — | UUU | U U U — |

ನಂದ । ನಂಗಳೊಳ್ । ಸುಳಿವ । ಬಿರಯಿಯಿಂ

— U | —UUU | — U | UUU — |

ಕಂಪು । ಕಣ್ಮಲೆಯೆ । ಪೂತ । ಸುರಯಿಯಿಂ ।

- ಸೂತ್ರ: ಎರಡನೆಯದರಲ್ಲಿ ಪ್ರತೀ ಪಾದದಲ್ಲಿ ಮೂರು ಮಾತ್ರೆಯ ನಂತರ ಐದು ಮಾತ್ರೆಯ ಎರಡೆರಡು ಗಣಗಳು ಬಂದು ಎರಡೆರಡು ಸಾಲುಗಳಿಗೆ ಪ್ರಾಸ ನಿಯಮವಿರುವ ಪದ್ಯಜಾತಿಗೆ ಮಂದಾನಿಲ ರಗಳೆ ಎನ್ನುವರು.

- **ಲಲಿತ ರಗಳೆ:**

  – –∪ | –∪∪∪ | ∪∪∪∪∪ | ∪ ∪– ∪ |

  ಏನವ್ವ । ಸಂಪಗೆಯೆ । ಶಿವನಸಿರಿ । ಮುಡಿಗೆಂದು

  – –∪ | ∪ ∪ ∪ ∪ ∪ | – – ∪ | – – ∪ |

  ನೀನೀವ । ಪೊಸ ಕುಸುಮ । ಮಂ ನೀಡು । ನೀಡೆಂದು ।

ಈ ಪದ್ಯದ ಪ್ರತಿಯೊಂದು ಸಾಲಿನಲ್ಲಿಯೂ ಐದು ಮಾತ್ರೆಗಳ ನಾಲ್ಕು ಗಣಗಳಿವೆ.ಎರಡೆರಡು ಸಾಲುಗಳಲ್ಲಿ ಪ್ರಾಸವಿದೆ.

ಸೂತ್ರ: ಪ್ರತೀ ಪಾದದಲ್ಲೂ ಐದು ಮಾತ್ರೆಗಳ ನಾಲ್ಕು ಗಣಗಳು ಬಂದು ಎರಡೆರಡು ಸಾಲುಗಳಿಗೆ ಪ್ರಾಸ ಗಳಿರುವಂತೆ ರಚಿಸಲ್ಪಟ್ಟ ರಗಳೆಯೇ ಲಲಿತ ರಗಳೆ

- ## ಅಂಶಗಣ

ದ್ರಾವಿಡ ಭಾಷೆಗಳಲ್ಲಿ ಮಾತ್ರ ಕಾಣುವ ಈ ಗಣಗಳನ್ನು ಲೆಕ್ಕ ಹಾಕುವ ಕ್ರಮ ಹೀಗಿದೆ. ಇವುಗಳಲ್ಲಿ ಮೂರು ಬಗೆಯ ಗಣಗಳಿವೆ. ಬ್ರಹ್ಮಗಣ, ವಿಷ್ಣುಗಣ ಮತ್ತು ರುದ್ರಗಣಗಳು. ಬ್ರಹ್ಮಗಣದಲ್ಲಿ ಎರಡು ಅಂಶಗಳಿರುತ್ತವೆ. ವಿಷ್ಣುಗಣದಲ್ಲಿ ಮೂರು ಅಂಶಗಳಿರುತ್ತವೆ. ಮತ್ತು ರುದ್ರಗಣದಲ್ಲಿ ನಾಲ್ಕು ಅಂಶಗಳಿರುತ್ತವೆ. ಯಾವುದೇ ಬಗೆಯ ಗಣಗಳಾಗಲಿ, ಮೊದಲನೆಯ ಅಂಶ ಜಾಗದಲ್ಲಿ ಒಂದು ಗುರು ಅಥವಾ ಎರಡು ಲಘುಗಳು ಇರಬೇಕು. ಮುಂದಿನ ಅಂಶಗಳ ಜಾಗದಲ್ಲಿ ಒಂದು ಲಘುವಾದರೂ ಇರಬಹುದು. ಒಂದು ಗುರುವಾದರೂ ಇರಬಹುದು. ಲಘು ಗುರುಗಳನ್ನು ಪ್ರಸ್ತಾರ ಹಾಕುವ ವಿಚಾರದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ.

ಉದಾ:

| ಬ್ರಹ್ಮಗಣ | ವಿಷ್ಣುಗಣ | ರುದ್ರಗಣ |
|---|---|---|
| ∪∪.∪. | –. –.∪. | ∪∪.–.–.–. |
| ಕುವ ರ | ಗೋ ವಿಂ ದ | ಗಿರಿ ಜಾ ನಾ ಥಂ |

- ## ಸಾಂಗತ್ಯ : ಲಕ್ಷಣ

–ಒಟ್ಟು ನಾಲ್ಕು ಪಾದಗಳಿರಬೇಕು.ಒಂದು ಮತ್ತು ಮೂರನೆಯ ಪಾದಗಳಲ್ಲಿ ನಾಲ್ಕು ವಿಷ್ಣು ಗಣಗಳೂ ಎರಡು ಮತ್ತು ನಾಲ್ಕನೆಯ ಪಾದಗಳಲ್ಲಿ ಎರಡು ವಿಷ್ಣುಗಣಗಳೂ

ಕೊನೆಯಲ್ಲಿ ಒಂದು ಬ್ರಹ್ಮ ಗಣ ಸಾಮಾನ್ಯವಾಗಿ ಇರುತ್ತದೆ. ಇದನ್ನು ಒಂದು ಬಗೆಯ ಅರ್ಧ ಸಮವೃತ್ತೆಂದು ಕರೆಯಬಹುದು. ಪೂರ್ವಾರ್ಧದಲ್ಲಿ ಏಳುಗಣಗಳು ; ಮೊದಲ ಆರು ಗಣಗಳು ವಿಷ್ಣು ಗಣಗಳು,ಏಳನೆಯದು ಬ್ರಹ್ಮಗಣ,ಉತ್ತರಾರ್ಧ, ಪೂರ್ವಾರ್ಧವನ್ನು ಅನುಸರಿಸುತ್ತದೆ.
ಸಾಂಗತ್ಯದ ನಕ್ಷೆ ಹೀಗಿದೆ.

ವಿ+ವಿ+ವಿ+ವಿ
ವಿ+ವಿ+ಬ್ರ
ವಿ+ವಿ+ವಿ+ವಿ
ವಿ+ವಿ+ಬ್ರ

- ಇಲ್ಲಿ ವಿಷ್ಣುಗಣಗಳ ಸ್ಥಾನದಲ್ಲಿ ಬ್ರಹ್ಮ ಗಣಗಳು ಬರಬಹುದು.ಆದರೆ ಬ್ರಹ್ಮ ಗಣ ಸ್ಥಾನ ಮಾತ್ರ ನಿಯತವಾಗಿರುತ್ತದೆ.

ಉದಾಹರಣೆ :

UU.U.U. | –.U.U. | UU.U.U. | –.U.U. |
ಪುರು ಪ ರ | ಮೇ ಶ ನ | ಹಿರಿಯ ಕು | ಮಾರನು
UU.–.U. | –.U.U.| –.U.|
ನರಲೋಕ | ಕೊಬ್ಬನೆ | ರಾಯ
UU.U.–. | –.U.U. | UU.U.U. | UU.–.U. |
ಮುರಿದು ಕ | ಣ್ಣಿಟ್ಟರೆ | ಕ್ಷಣಿಕ ಮು | ಕ್ತಿಯ ಕಾಂಬ
UU.U.–.| UU.–.U. | U.–. |
ಭರತ ಚ | ಕ್ರಿಯ ಹೇಳ | ಲಳವೇ

## ಅಕ್ಷರಗಣ:

**ಅಕ್ಷರಗಳ ಆದಾರದಿಂದ ಗಣ ವಿಭಾಗ ಮಾಡುವುದೇ ಅಕ್ಷರಗಣ  ಮೂರು ಮೂರು ಅಕ್ಷರಗಳಿಗೆ ಒಂದೊಂದರಂತೆ ಗಣ ವಿಂಗಡಣೆ ಮಾಡಲಾಗುವುದು ಪದ್ಯದ ಸಾಲುಗಳಲ್ಲಿರುವ ಎಲ್ಲ ಅಕ್ಷರಗಳು ಗಣಗಳಾಗಿ ವಿಂಗಡಿಸಲ್ಪಡಬೇಕೆಂಬ ನಿಯಮಇಲ್ಲ ಗಣ ವಿಂಗಡಣೆಯ ನಂತರ ಒಂದು ಅಥವ ಎರಡು ಅಕ್ಷರಗಳು ಶೇಷವಾಗಿ ಉಳಿಯಬಹುದು.**

ಅಕ್ಷರಗಳಲ್ಲಿ **ಯಗಣ, ಮಗಣ ,ತಗಣ ,ರಗಣ ,ಜಗಣ ,ಭಗಣ, ನಗಣ, ಮತ್ತುಸಗಣ,** ಗಳೆಂದು ಎಂಟು ವಿಧಗಳು ಇವುಗಳನ್ನು **ಯಾ ಮಾ ತಾ ರಾ ಜ ಭಾ ನ ಸ ಲ ಗಂ** ಸೂತ್ರದ ಆದಾರದಿಂದ ನಿರ್ಣಯಿಸಲಾಗಿದೆ

**ಅಕ್ಷರಗಣದಲ್ಲಿ ಬರುವ ಎಂಟು ಗಣಗಳನ್ನು ಗುರುತಿಸಲು ಕೆಳಗಿನ ಪದ್ಯವೂ ಸಹಕಾರಿ**

**ಗುರು ಲಘು ಮೂರಿರೆ ಮ–ನ ಗಣ**

**ಗುರು ಲಘು ಮೊದಲಲಿ ಬರಲು ಭ–ಯ ಗಣ ಮೆಂಬರ್**

**ಗುರು ಲಘು ನಡುವಿರೆ ಜ–ರ ಗಣ**

**ಗುರು ಲಘು ಕೊನೆಯಲ್ಲಿ ಬರಲು ಸ–ತ ಗಣಮಕ್ಕು**

## ಅಕ್ಷರ ವೃತ್ತಗಳು:

**ಅಕ್ಷರ ಗಣಗಳನ್ನೊಳಗೊಂಡ  ಅಕ್ಷರ ವೃತ್ತಗಳನ್ನು ಕನ್ನಡ ಕವಿಗಳು ಸಂಸ್ಕೃತದಿಂದ ತೆಗೆದುಕೊಂಡಿದ್ದಾರೆ. ಈ ಸಂಸ್ಕೃತ ವೃತ್ತಗಳಲ್ಲಿ ಸಮವೃತ್ತ ,ಅರ್ಧ ಸಮವೃತ್ತ,ವಿಷಮ ವೃತ್ತ ಎಂದು ಮೂರು ವಿದಗಳುಂಟು.ಯಾದುವೇ ವಿದವಾದರೂ ಒಂದು ವೃತ್ತಕ್ಕೆ ನಾಲ್ಕು ಪಾದಗಳಿರುತ್ತವೆ.**

### 1. ಸಮವೃತ್ತಗಳು:

**ಸಮವೃತ್ತವೊಂದರ ನಾಲ್ಕು ಪಾದಗಳಲ್ಲೂ ಒಂದೇ ಲಕ್ಷಣವಿರುತ್ತದೆ. .ಸಮವೃತ್ತಗಳಲ್ಲಿ ಪಾದವೊಂದಕ್ಕೆ ಒಂದರಿಂದ ಇಪ್ಪತ್ತಾರು ಅಕ್ಷರಗಳವರೆಗೆ ಇರಬಹುದು.ಪ್ರತೀ ಪಾದದಕ್ಷರ ಸಂಖ್ಯೆಯನ್ನು ಅನುಸರಿಸಿ ಸಮವೃತ್ಗಳಲ್ಲಿ ಇಪ್ಪತ್ತಾರು ಗುಂಪುಗಳಿವೆ.ಪ್ರತಿಯೊಂದು ಗುಂಪಿಗೂ ಛಂದಸ್ಸು ಎನ್ನುತ್ತಾರೆ.**

**ಇವುಗಳಲ್ಲಿ ಕನ್ನಡ ಕವಿಗಳು ಬಳಸಿಕೊಂಡಿರುವ ವೃತ್ತಗಳು ಕೆಲವು ಮಾತ್ರ ಮೊದಲನೇ ನಾಗವರ್ಮನು,ತನ್ನ ಛಂದೋಂಬುಧಿಯಲ್ಲಿ ಕೆಲವು ವೃತ್ತಗಳನ್ನು ಒಂದೆಡೆ ಹೇಳುತ್ತಾ ಅವುಗಳನ್ನು 'ಖ್ಯಾತ ಕರ್ಣಾಟಕಗಳು ಎಂದು ಕರೆದಿದ್ದಾನೆ'. ಆ ಖ್ಯಾತ ಕರ್ಣಾಟಕಗಳ ಜೊತೆಗೆ ಇನ್ನೂ ಕೆಲವು ವೃತ್ತಗಳನ್ನು ಕನ್ನಡ ಕವಿಗಳು ಬಳಸಿದ್ದಾರೆ.ಅವುಗಳಲ್ಲಿ ಮಾಲಿನೀ ವೃತ್ತ,ಉತ್ಸವ ,ಹರಿಣೀ ವೃತ್ತ,ಮಂದಾಕ್ರಾಂತ, ಮಲ್ಲಿಕಾಮಾಲೆ,ತರಳ ವೃತ್ತಗಳು ಪ್ರಸಿದ್ದವಾಗಿವೆ.**

- ಹರಿಣೀ ವೃತ್ತ:

    ಪಂಪನು ಈ ವೃತ್ತವನ್ನು ಪಂಪಭಾರತದಲ್ಲಿ ಬಳಸಿದ್ದಾನೆ

- ಹರಿಣೀ ವೃತ್ತದ ಲಕ್ಷಣಗಳು

  1) ನಾಲ್ಕು ಸಮ ಸಾಲಿನ ಪದ್ಯಬಾಗ
  2) ಪ್ರತೀ ಸಾಲಿನಲ್ಲೂ 17ಅಕ್ಷರಗಳಿವೆ
  3) ನ,ಸ,ಮ,ರ,ಸ, ಎಂಬ ಐದು ಗಣ 1ಲಘು 1 ಗುರು ಬರುತ್ತದೆ

| ನ | ಸ | ಮ | ರ | ಸ | ಲ | ಗ |
|---|---|---|---|---|---|---|
| UUU | UU– | – – – | –U– | UU– | U | – |
| ಪಗೆಗೆ | ಕಣೆಯೊಂ | ದುಂಟೇ ನ | ಣ್ವಂಗಮಾ | ಗರಮುಂ | ಟೆ | ನೀಂ |

- ಖ್ಯಾತ ಕರ್ನಾಟಕಗಳು

ಅಕ್ಷರಗಣ ಛಂದಸ್ಸಿಗೆ ಸೇರಿದ ಪದ್ಯ ಜಾತಿಯಿದು. ಕನ್ನಡ ಸಾಹಿತ್ಯದಲ್ಲಿ ಬಳಕೆಯಾಗುವ ವೃತ್ತಗಳನ್ನು "ಖ್ಯಾತ ಕರ್ನಾಟಕಗಳೆಂದು" ಕರೆಯುವರು

## ಲಕ್ಷಣ:

ಪ್ರತೀ ವೃತ್ತವು ತನ್ನದೇ ಆದ ಲಕ್ಷಣ ಹೊಂದಿರುತ್ತದೆ ಇದು ನಾಲ್ಕು ಸಾಲಿನ ಪದ್ಯವಗಿದ್ದು ನಾಲ್ಕು ಸಾಲುಗಳೂ ಸಮನವಾಗಿರುತ್ತವೆ.
ಪರೀಕ್ಷೆಯಲ್ಲಿ ಒಂದು ಸಾಲನ್ನು ಮಾತ್ರ ನೀಡಿ ಪ್ರಸ್ಥಾರ ಹಾಕಲು ಕೇಳುತ್ತಾರೆ ಗಣ ಗುರುತಿಸಲು ಯಮಾತಾರಾಜಭಾನಸಲಗಂ ಸೂತ್ರ ಬಳಸಬೇಕು
ಖ್ಯಾತ ಕರ್ನಾಟಕಗಳಲ್ಲಿ 6 ವಿಧ. ಅವುಗಳೆಂದರೆ

1) ಉತ್ಪಲ ಮಾಲಾವೃತ್ತ,
2) ಚಂಪಕಮಾಲಾ ವೃತ್ತ,
3) ಸ್ರಗ್ಧರಾ,
4) ಮಹಾಸ್ರಗ್ದರಾ,
5) ಶಾರ್ದೂಲ ವಿಕ್ರೀಡಿತ,
6) ಮತ್ತೇಭ ವಿಕ್ರೀಡಿತ

ಪದ್ಯ: ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ

ಗುರು ನಾಲ್ಕಾಗಿರಲಂತು ಸ್ರಗ್ದರೆ ಲಘು ದ್ವಂದ್ವಂ ಗುರು ದ್ವಂದ್ವಂ ಮಾ
ಗಿರೆ ಮತ್ತೇಭ ಲಘು ದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ದರಾ
ಹರಿಣಾಕ್ಷೀ,ಲಘುನಾಲ್ಕು ಚಂಪಕಮಿವಾರಂ ಖ್ಯಾತ ಕರ್ನಾಟಕಂ

- **ಉತ್ಪಲ ಮಾಲಾವೃತ್ತ:**
  1) ನಾಲ್ಕು ಸಮ ಸಾಲಿನ ಪದ್ಯಬಾಗ
  2) ಪ್ರತೀ ಸಾಲಿನಲ್ಲೂ 20 ಅಕ್ಷರಗಳಿವೆ
  3) ಭ,ರ,ನ,ಭ,ಬ,ರ ಎಂಬ ಆರು ಗಣ 1ಲಘು 1 ಗುರು ಬರುತ್ತದೆ
  4) ಸೂತ್ರ: "ಉತ್ಪಲಮಾಲೆಯಪ್ಪುದು ಭರಂ ನಭಭಂ ರಲಗಂ ನೆಗಳ್ದುರಲ್"

ಭ ರ ನ ಭ ಭ ರ ಲ ಗು

—UU | —U— | UUU | —UU | —UU | —U— | U | — |

ಚಾಗದ । ಭೋಗದ । ಕ್ಕರದ । ಗೇಯದ । ಗೊಟ್ಟಿಯ । ಲಂಪಿನಿಂ । ಪು । ಗ ।
ಳ್ಗಾಗರ

ತೆಂಕಣ । ಗಾಳಿ ಸೋಂ । ಕಿದೊಡ । ಮೊಳ್ನುಡಿ । ಗೇಳ್ದೊಡ । ಮಿಂಪನಾ । ಳ್ದ । ಗೇ

- **ಚಂಪಕ ಮಾಲಾವೃತ್ತ:**
  1) ನಾಲ್ಕು ಸಮ ಸಾಲಿನ ಪದ್ಯಬಾಗ
  2) ಪ್ರತೀ ಸಾಲಿನಲ್ಲೂ 21 ಅಕ್ಷರಗಳಿವೆ
  3) ನ ಜ ಭ ಜ ಜ ಜ ರ ಎಂಬ ಏಳು ಗಣ ಬರುತ್ತದೆ

ಸೂತ್ರ: "ನಜಭಜಜಜರಂ ಬಗೆಗೊಳಿತಿರೆ ಚಂಪಕಮಾಲೆಯೆಂದಪರ್

ನ ಜ ಭ ಜ ಜ ಜ ರ

UUU | U—U | —UU | U—U | U—U | U—U | —U— |

ಕುರುಕು । ಳನಂದ । ನಂ ಪವ । ನನಂದ । ನನೆಂಬ । ಮದಾಂಧ । ಗಂಧಸಿಂ

- **ಸ್ರಗ್ದರಾ ವೃತ್ತ:**
  1) ನಾಲ್ಕು ಸಮ ಸಾಲಿನ ಪದ್ಯಭಾಗ
  2) ಪ್ರತೀ ಸಾಲಿನಲ್ಲೂ 21 ಅಕ್ಷರಗಳಿವೆ

3) ಮರಬನಯಯಯ ಎಂಬ 7 ಬರುತ್ತದೆ

**ಸೂತ್ರ: " ತೋೞಲ್ ಮಂ ರಂಭನಂ ಮೂಯಗಣಮುಮದೆತಾಂಸ್ರಗ್ಧರಾ ವೃತ್ತಮಕ್ಕುಂ"**

| | | | | | | |
|---|---|---|---|---|---|---|
| ಮ | ರ | ಭ | ನ | ಯ | ಯ | ಯ |
| – – – | –∪– | –∪∪ | ∪∪∪ | ∪–– | ∪–– | ∪ – – |
| ಕಾರುಣ್ಯಂ | ಗೆಯ್ದಸ | ದ್ದೀಕ್ಷೆಯ | ನೆಸಗಿ | ಲಸಚ್ಚಿ | ತ್ರಿಯಾಮಾ | ಗ್ರ್ಮೆಂಪೇ |

- **ಮಹಾಸ್ರಗ್ದರಾ ವೃತ್ತ:**
  1. ನಾಲ್ಕು ಸಮ ಸಾಲಿನ ಪದ್ಯಬಾಗ
  2. ಪ್ರತೀ ಸಾಲಿನಲ್ಲೂ 22 ಅಕ್ಷರಗಳಿವೆ
  3. ಸ ತ ತ ನ ಸ ರ ರ ಎಂಬ 7 ಗಣ 1 ಗುರು ಬರುತ್ತದೆ

**ಸೂತ್ರ: " ಸತತಂ ನಂಸಂರರರಂಗಂ ನೆರೆದೆಸೆಯ ಮಹಾಸ್ರಗ್ಧರಾ ವೃತ್ತಮಕ್ಕುಂ"**

| | | | | | | | |
|---|---|---|---|---|---|---|---|
| ಸ | ತ | ತ | ನ | ಸ | ರ | ರ | ಗು |
| ∪∪– | ––∪ | – – ∪ | ∪∪∪ | ∪∪– | –∪– | –∪– | – |
| ಹರಿಸಂ | ಧಾನಕ್ಕೆ | ವಂದಂದ | ವಗಡಿ | ಸಿದಹಂ | ಕಾರಮೆ | ಲ್ಲಿತ್ತೊಕ್ಕ | ಷ್ಣಾಂ |

- **ಶಾರ್ದೂಲ ವಿಕ್ರೀಡಿತ ವೃತ್ತ:**
  1) ನಾಲ್ಕು ಸಮ ಸಾಲಿನ ಪದ್ಯಭಾಗ
  2) ಪ್ರತೀ ಸಾಲಿನಲ್ಲೂ 19 ಅಕ್ಷರಗಳಿವೆ
  3) ಮಸಜಸತತಗ ಎಂಬ 6 ಗಣ ಕಡೆಯಲ್ಲಿ 1 ಗುರು ಬರುತ್ತದೆ

**ಸೂತ್ರ: " ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ"**

| | | | | | | |
|---|---|---|---|---|---|---|
| ಮ | ಸ | ಜ | ಸ | ತ | ತ | ಗ |
| ––– | ∪∪– | ∪–∪ | ∪∪– | ––∪ | ––∪ | – |
| ಇಂತೀಕಾ | ವ್ಯಮನೊ | ಲ್ದುಕೇಳ್ದ | ವಿಭುದರ್ | ಮೈವೆರ್ಚಿ | ಕೊಂಡಾಡೆ | ಪೇ |

- **ಮತ್ತೇಭ ವಿಕ್ರೀಡಿತ ವೃತ್ತ:**

- ನಾಲ್ಕು ಸಮ ಸಾಲಿನ ಪದ್ಯಬಾಗ
- ಪ್ರತೀ ಸಾಲಿನಲ್ಲೂ 20 ಅಕ್ಷರಗಳಿವೆ
- ಸಭರನಮಯ ಎಂಬ 6 ಗಣ ಕಡೆಯಲ್ಲಿ 1 ಲಘು 1 ಗುರು ಬರುತ್ತದೆ.

ಸೂತ್ರ: " ಸಭರಂನಂ ಮಯಲಂಗಮುಂ ಬಗೆಗೊಲಲ್ ಮತ್ತೇಭ ವಿಕ್ರೀಡಿತಂ"

ಸ ಭ ರ ನ ಮ ಯ ಲ ಗ

UU— | —UU | —U— | UUU | ——— | U — — | U | —|

ಕರಿಯಂ । ನುಂಗಿಕ । ಳಿಂಗನಂ । ನೊಣೆದ । ದರ್ಪಕ್ಕೊಂ । ದುಗೊಳ್ ಮ । ತ್ಸ । ಹೊ

ಸ ಭ ರ ನ ಮ ಯ ಲ ಗ

UU— | —UU | —U— | UUU | ——— | U—— | U | —|

ಎನಗಂ । ಪಾಂಡುಗ । ಮಿಲ್ಲಭೇ । ದಮಿಳೆ । ಯಂ ಪಚ್ಚಾ । ಳ್ವಮಾ ಪಾಂ । ಡು । ನಂ

## ಗಾದೆಗಳನ್ನು  ವಿಸ್ತರಿಸಿ ಬರೆಯಿರಿ

### 1) ಕಟ್ಟುವುದು ಕಠಿಣ ಕೆಡಿಸುವುದು ಸುಲಭ

ಗಾದೆಗಳು ವೇದಕ್ಕೆ ಸಮಾನ. ಗಾದೆಸುಳ್ಳಾದರೂ ವೇದ ಸುಳ್ಳಾಗದು ಎಂಬ ಮಾತಿದೆ. ಇವು ಜನಮಾನಸದ ಅನುಭವದ ನುಡಿಮುತ್ತುಗಳು ಗಾದೆಗಳು  ಕಿರಿದರಲ್ಲಿ  ಹಿರಿದಾದ ಅರ್ಥವನ್ನು ಹೊಂದಿವೆ. ದಿನ  ನಿತ್ಯದ ಮಾತಿನಲ್ಲಿ  ನಲಿದಾಡುವ ಗಾದೆಗಳು –ಮಾತಿಗೆ ಚೆಲುವನ್ನು ತಂದು ಕೊಡುತ್ತವೆ.ಇಂತಹ ಪ್ರಸಿದ್ದ ಗಾದೆಗಳಲ್ಲಿ ಕಟ್ಟುವುದು ಕಠಿಣ ಕೆಡಿಸುವುದು ಸುಲಭ ಎಂಬುದೂ ಒಂದಾಗಿದೆ ಯಾವುದೇ ಒಂದು ಕಾರ್ಯವನ್ನು ಮಾಡಲು ಶ್ರಮ ವಹಿಸಬೇಕು.ಆದರೆ, ಹಾಳು ಮಾಡಲು ಹೆಚ್ಚು ಶ್ರಮ ಬೇಡ. ಕುಂಬಾರನಿಗೆ ವರುಷ ದೊಣ್ಣೆಗೆ  ನಿಮಿಷ ಎಂಬ ಗಾದೆ ಈ ಮಾತನ್ನು ಹೆಚ್ಚು ಸ್ಪಷ್ಟಪಡಿಸುತ್ತದೆ. ಒಂದು ಮನೆ ಕಟ್ಟಬೇಕಾದರೆ ಬೇಕಾಗುವ ಶ್ರಮಕ್ಕೂ ಹೋಲಿಕೆ ಮಾಡಿದಾಗ  ಈ ಮೇಲಿನ ಗಾದೆ ಮಾತು ಅರ್ಥವಾಗಬಹುದು. ಜೀವನದಲ್ಲಿ  ಯಶಸ್ಸು ಗಳಿಸಲು ಶ್ರಮ   ವಹಿಸಲೇಬೇಕು.ಉತ್ತಮನೆನಿಸಿಕೊಳ್ಳಲು ಪ್ರಯತ್ನಶೀಲನಾಗಿ ಸದಾ ಎಚ್ಚರದಿಂದಿರಬೇಕು ಎಂಬುದನ್ನು ಈ  ಗಾದೆಯಿಂದ  ಮನಗಾಣಬಹುದು

### 2) ಶಕ್ತಿಗಿಂತ ಯುಕ್ತಿ  ಮೇಲು

ದೈಹಿಕ ಶಕ್ತಿಗಿಂತ ಬುದ್ಧಿಶಕ್ತಿಯೇ ಮೇಲು, ತೋಳ್ಬಲದಲ್ಲಾಗದ್ದು ಬುದ್ಧಿ ಬಲದಿಂದಾಯಿತು ಎನ್ನುತ್ತಾರೆ. ಮೃಗರಾಜನಾದ ಸಿಂಹವನ್ನು ಸಾಮಾನ್ಯ ಜೀವಿ ಮೊಲವೊಂದು ಸಾಹಿಸುವುದು ಬುದ್ಧಿಯ ಬಲದಿಂದಲೇ   ಯುದ್ದ ನೀತಿಯಲ್ಲಿ ಚಾಣುಕ್ಯ ಗೆಲ್ಲುವುದು ಉಪಾಯ ಕುಶಲಿಯಾಗಿ ಬೌದ್ಧಿಕ ಬಲದಿಂದಲೇ ಎದುರಾಳಿಗಳು ಬಲಿಷ್ಟರಾಗಿದ್ದಾಗ ಶಕ್ತಿಗಿಂತ ಯುಕ್ತಿಯಿಂದ ಗೆಲ್ಲಬೇಕಾಗುತ್ತದೆ ಎಂದು ಈ ಗಾದೆ ತಿಳಿಸುತ್ತದೆ.

### 3) ದೇಶ  ಸುತ್ತು  ಕೋಶ ಓದು

ಜ್ಞಾನ  ಸಂಪಾದನೆ ಜೀವನದ ಸಾರ್ಥಕ್ಯಕ್ಕೆ ಅತ್ಯವಶ್ಯಕ , ಓದಿನಿಂದ ಗಳಿಸುವ ಜ್ಞಾನಕ್ಕಿಂತ ಅನುಭವದಿಂದ ಗಳಿಸುವ ಜ್ಞಾನ ಹೆಚ್ಚು ಶ್ರೇಷ್ಟ . ಹಾಗಾಗಿ ಓದು ಒಕ್ಕಾಲು ಬುದ್ಧಿ  ಮುಕ್ಕಾಲು ಎಂಬುದೂ ಒಂದು   ಗಾದೆಯೇ ಆಗಿದೆ .ದೇಶ ಸುತ್ತಿ ಪಡೆದ ಅನುಭವಗಳೊಂದಿಗೆ ಓದಿನಿಂದ ಗಳಿಸಿದ ಜ್ಞಾನವೂ ಸೇರಿದರೆ ಹೆಚ್ಚು ಪ್ರಯೋಜನಗಳನ್ನು ಪಡೆಯಬಹುದೆಂಬುದು  ಈ ಮೇಲಿನ ಗಾದೆಯ

ಅಂತರರ್ಥವಾಗಿದೆ ಹೀಗಾಗಿಯೇ ಪುಸ್ತಕದ ಬದನೆಕಾಯಿ ಏನು ಮಾಡೀತು ಜನರೊಡನೆ ಒಡನಾಡಿ ಬದುಕು ಎಂಬುದು ಹಿರಿಯರ ಆಶಯವಾಗಿದೆ.

### 4) ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳವಿಲ್ಲ

ಆರೋಗ್ಯದ ಬಗೆಗೆ ಎಚ್ಚರವಹಿಸುವವರು ಆಹಾರದ ಬಗೆಗೂ ಜಾಗೃತರಾಗಿರಬೇಕು ಅತಿಯಾದ ಊಟ ಅಜೀರ್ಣಕ್ಕೆ ದಾರಿ ಅಜೀರ್ಣವು ರೋಗಗಳಿಗೆ ಮೂಲ ಸೇವಿಸುವ ಆಹಾರ ಹಿತವು ಮಿತವೂ,ಶುದ್ದವೂ ಆಗಿರಬೇಕು ಸರಿಯಾದ ಸಮಯಕ್ಕೆ ಸರಿಯಾದ ಪ್ರಮಾಣದಲ್ಲಿ ಸರಿಯಾದ ಆಹಾರ ಸೇವಿಸುವುದರಿಂದ ಆರೋಗ್ಯದ ಜೊತೆಗೆ ಸಧೃಡ ಶರೀರವನ್ನು ಹೊಂದಬಹುದು ನುಡಿದರೆ ಮುತ್ತಿನ ಹಾರದಂತಿರಬೇಕು . ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯಿತು.ಮಾತೇ ಮುತ್ತು ಮಾತೇ ಮೃತ್ಯು. ಎಂಬ ಮಾತುಗಳು ಮಾತಿನ ಮಹತ್ವವನ್ನು ಎತ್ತಿ ಹೇಳುತ್ತವೆ. ಹತ್ತು ಮಾತನಾಡುವ ಕಡೆ ಪರಿಣಾಮಕಾರಿಯಾದ ಮನಸ್ಸಿಗೆ ನಾಟುವಂತಹ ಒಂದು ಮಾತು ಸಾಕು. ಮಾತಿನಲ್ಲಿ ಚುರುಕುತನ, ಜಾಣತನವಿರಬೇಕು ಸಮಯೋಚಿತ, ಸಂಧರ್ಬೋಚಿತ ನಡತೆಯೊಂದಿಗೆ ಮಾತು ಆಡಿದಾಗಜಗಳಕ್ಕಾಗಲಿ ಮನಸ್ತಾಪಕ್ಕಾಗಲಿ ಆಸ್ಪದವಿರುವುದಿಲ್ಲ. ಹೀಗೆ ಊಟ ಮಾಡುವ ಬಗೆ ಮಾತನಾಡುವ ರೀತಿಎರಡೂ ಮಿತವಾಗಿದ್ದರೆ ವಿಶ್ವವನ್ನೇ ಜಯಿಸಬಹುದಲ್ಲವೇ?

### 5) ಅತಿಆಸೆ ಗತಿಗೆಡಿಸಿತು

ಆಸೆಯೆ ದುಃಖಕ್ಕೆ ಮೂಲ ಎಂದು ಬುದ್ದ ಉಪದೇಶಿಸಿದ ಅತಿ ಆಸೆಯಿಂದ ಮಾನವ ತನ್ನ ಬದುಕನ್ನು ಆಳು ಮಾಡಿಕೊಳ್ಳುತ್ತಾನೆ. ವ್ಯಕ್ತಿತಿಯೊಬ್ಬ ಪ್ರತಿ ದಿನ ಚಿನ್ನದ ಮೊಟ್ಟೆಯನ್ನು ಪಡೆದು ತೃಪ್ತಿ ಪಡದೆ ಕೋಳಿಯ ಹೊಟ್ಟೆಯಲ್ಲಿರುವ ಎಲ್ಲ ಮೊಟ್ಟೆಗಳನ್ನು ಒಟ್ಟಿಗೆ ಪಡೆದು ಶ್ರೀಮಂತನಾಗಲು ಕೋಳಿಯನ್ನೇ ಕತ್ತರಿಸುತ್ತಾನೆ ಆದರೆ ಬಂದ ಪ್ರತಿಫಲ? ಸೊನ್ನೆ ಅತಿಯಾದ ಆಸೆಯ ಬಲೆಗೆ ಬಿದ್ದ ವ್ಯಕ್ತಿ ಸಾಧಿಸಿದ್ದಾದರೂ ಏನು? ಹಾಗಾಗಿ ಆಸೆ ಇರಬೇಕು ಆದರೆ ಆ ಆಸೆಗೆ ಮಿತಿ ಇರಬೇಕು ನಾವು ಆಸೆಯನ್ನು ಹಿಡಿತದಲ್ಲಿಟ್ಟು ಕೊಂಡು ಬದುಕಿನಲ್ಲಿ ತಾಳ್ಮೆ, ಶ್ರದ್ಧೆ, ಸಂಯಮ, ಪರಿಶ್ರಮ ಮತ್ತು ಸಂತೃಪ್ತಿಗಳ ಮೂಲಕ ನೆಮ್ಮದಿ ಕಂಡುಕೊಳ್ಳುವುದು ಲೇಸು.

### 6) ಹೆತ್ತ ತಾಯಿ ಹೊತ್ತ ನಾಡು ಸ್ವರ್ಗಕ್ಕಿಂತ ಮಿಗಿಲು

“ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ”ಎಂಬ ಮಾತನ್ನೇ ಮೇಲಿನ ಗಾದೆ ಧ್ವನಿಸುತ್ತದೆ. ಹಡೆದ ತಾಯಿ ಜನ್ಮಕೊಟ್ಟ ನಾಡು, ಸ್ವರ್ಗಕ್ಕಿಂತ ಶ್ರೇಷ್ಠವಾದವು. ಅವುಗಳ ರಕ್ಷಣೆಗಾಗಿ ನಾವು ಸದಾ ಸಿದ್ಧರಾಗಿರಬೇಕು. ಹೆತ್ತ ತಾಯಿಯ ಮಡಿಲಲ್ಲಿ ದೊರಕುವ ಸುಖಕ್ಕಿಂತ ಸಮಾನವಾದ

ಸುಖ ಬೇರೊಂದಿಲ್ಲ ತಾಯಿ ಮಕ್ಕಳನ್ನು ಹೆತ್ತು ಹೊತ್ತು ಸಲಹಿ ತನ್ನ  ಸುಖವನ್ನೆಲ್ಲ  ಮರೆತು ಆಹಾರ  ನಿದ್ರೆಗಳನ್ನು ತೊರೆದು ಮಗುವಿನ ಲಾಲನೆ ಪಾಲನೆಯಲ್ಲಿ ಸುಖವನ್ನು ಕಾಣುತ್ತಾಳೆ ಹಾಗೆಯೇ ನಾವು ಜನ್ಮ ಪಡೆದ ನಾಡು ನಮಗೆ ಇಂದ್ರನ ನಂದನವನಕ್ಕಿಂತಲೂ ಮಿಗಿಲು. ನಮಗೆ ಜಗತ್ತಿನಾದ್ಯಂತ ಉನ್ನತ ಹುದ್ದೆಗಳು ದೊರೆತರೂ ನಮ್ಮ ಮನ ಸದಾ ತಾಯ್ನಾಡನ್ನು ಕುರಿತು ಚಿಂತಿಸುತ್ತದೆ. ಇದಕ್ಕೆ ಮೂಲ ಕಾರಣ ನಮ್ಮಲ್ಲಿ ಹುದುಗಿರುವ  ಮಾತೃಭೂಮಿಯ  ಕುರಿತಾದ ಗೌರವ ಭಾವನೆಗಳು .ಒಟ್ಟಾರೆ ನಮ್ಮ ತಾಯಿ ಮತ್ತು ನಮ್ಮ  ತಾಯ್ನಾಡಿನ ರಕ್ಷಣೆಗಾಗಿ ಪ್ರಾಣ ಕೊಡಲು ನಾವು ಸಿದ್ದರಾಗಿರಬೇಕು.

**7) ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ**

ಸತ್ಯ ಸದಾ ಜೀವಂತವಾದುದು.ಸುಳ್ಳು ಎಂದೂ ಸುಖವನ್ನು ಕೊಡಲಾರದು ಎಂಬುದೇ ಈ ಗಾದೆ ಮಾತಿನ ಅರ್ಥ.ಸತ್ಯವನ್ನು ಹೇಗೆ  ಹುದುಗಿಸಿಟ್ಟರೂ ಮರೆಮಾಚಿದರೂ ಒಂದಲ್ಲ ಒಂದು  ದಿನ ಪ್ರಕಟ ವಾಗಿಯೇ ತೀರುತ್ತದೆ ಈ ಕಾರಣಕ್ಕಾಗಿಯೇ ಸತ್ಯಕ್ಕೆ ಜಯ ಸತ್ಯಮೇವ ಜಯತೆ ಎಂದು ಉಪನಿಷತ್ತು ಸಾರಿರುವುದು.  ಅಂತೆಯೇ ‘ಸತ್ಯಂ ಶಿವಂ  ಸುಂದರಂ ಸತ್ಯವು ಶಿವನಷ್ಟೇ ಪ್ರಕಾಶಮಾನವಾದುದು. ಸುಳ್ಳು  ಕತ್ತಲೆಯಾದರೆ ಸತ್ಯವು  ಜ್ಯೋತಿ ಅದಕ್ಕೆ ಎಂದೂ ಸಾವಿಲ್ಲ . ಜೀವನದಲ್ಲಿ ನಾವು ಎಷ್ಟೇ ಸುಳ್ಳನ್ನು ಹೇಳಬಹುದು ಆದರೆ ಅದು ಕ್ಷಣಿಕ ನಮ್ಮ ಅಂತರಾತ್ಮಕ್ಕೆ ಮಾತ್ರ ಸತ್ಯ ಗೊತ್ತಿರುತ್ತದೆ. ಸುಳ್ಳಿನಿಂದ ಸುಖವೆಷ್ಟೇ ಇದ್ದರೂ ಸಹ ಆ ಸುಳ್ಳು ಸತ್ಯಕ್ಕೆ ಹೆದರುತ್ತದೆ. ಸತ್ಯವನ್ನು  ಮುಚ್ಚಲು ಹಲವಾರು ಸುಳ್ಳಿನ ಸರಮಾಲೆಯನ್ನೇ ನಾವು ಕಟ್ಟುತ್ತೇವೆ. ಒಮ್ಮೆ ನಾವು ಸುಳ್ಳುಗಾರರೆಂದು  ಸಾಬೀತಾದರೆ ಶಾಶ್ವತ ದುಃಖವನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಸತ್ಯ ಶಾಶ್ವತ ಸುಳ್ಳು ಕ್ಷಣಿಕ..

**8) ಚಿಂತೆಯೇ ಮುಪ್ಪು ಸಂತೋಷವೇ ಯೌವನ**

ಇದು ಅನುಭವ ಪೂರ್ಣವಾದ ಉಕ್ತಿ. ಗಾದೆಗಳಿಂದ ಜೀವನ  ಮೌಲ್ಯ ಹೆಚ್ಚುತ್ತದೆ. ಚಿಂತೆಗೂ ಚಿತೆಗೂ ಒಂದು ಸೊನ್ನೆಯಷ್ಟೇ ವ್ಯತ್ಯಾಸ. ಆದರೆ ಚಿತೆ ಸತ್ತ ವ್ಯಕ್ತಿಯನ್ನು  ಸುಟ್ಟರೆ ಚಿಂತೆ ಜೀವಂತ ವ್ಯಕ್ತಿಯನ್ನೇ ಸುಡುತ್ತದೆ ಹಾಗಾಗಿ ಚಿತೆಗಿಂತಲೂ ಚಿಂತೆ ಹೆಚ್ಚು ಅಪಾಯಕಾರಿ..ಚಿಂತೆ ಮಾನಸಿಕ ನೆಮ್ಮದಿಯನು ಹಾಳು ಮಾಡಿ ಮುಪ್ಪನ್ನು ತರಿಸುತ್ತದೆ. ಅದ್ದರಿಂದ ಚಿಂತೆಯನ್ನು ಬಿಡಬೇಕು. ಜೀವನವೆಲ್ಲ ಬರಿ ಸಂತೋಷವು ಅಲ್ಲ ಚಿಂತೆಯೂ ಅಲ್ಲ ಹಾಗಾಗಿ ಚಿಂತೆಯ ಚಿತೆಯಲ್ಲಿ ಬದುಕಿರುವಾಗಲೇ ಬೇಯುವುದು ತಪ್ಪು ಸಂತೋಷ  ಸಾವಿರ ಜನರನ್ನು ಹತ್ತಿರ ತಂದರೆ ಚಿಂತೆ

ಸಾವಿರ ಜನರನ್ನು ದೂರಮಾಡುತ್ತದೆ. ಆದರೆ ಸಂತೋಷವು ಬದುಕಬೇಕು, ಸಲ್ಲಬೇಕು, ಗೆಲ್ಲಬೇಕು ಎಂಬ ಛಲವನ್ನು ಬೆಳೆಸುತ್ತದೆ.

**9) ಹಾಸಿಗೆ ಇದ್ದಷ್ಟು ಕಾಲುಚಾಚು**

ಈ ಗಾದೆಯು ಮುಖ್ಯವಾಗಿ ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು ಜೀವನ ಮಾಡಬೇಕೆಂದು ತಿಳಿಸಿಕೊಡುತ್ತದೆ. ಹಾಸಿಗೆಯ ಅಳತೆಗೆ ತಕ್ಕಂತೆ ಕಾಲುಚಾಚಿ ಮಲಗುವುದೆಂದರೆ ಇರುವ ಸ್ತಿತಿಗೆ ಹೊಂದಿಕೊಳ್ಳುವುದು ಎಂದರ್ಥ. ಮನುಷ್ಯನ ಆಸೆಗಳಿಗೆ ಇತಿಮಿತಿಯೇ ಇರುವುದಿಲ್ಲ.ಅತಿಆಸೆ ಗತಿಗೆಡಿಸಿತು ಎಂಬಂತೆ ಕೆಲವರು ತಮ್ಮ ಶಕ್ತಿಮೀರಿ ಅಲ್ಲಿ ಇಲ್ಲಿ ಸಾಲಮಾಡಿ ದುಂದುವೆಚ್ಚ ಮಾಡುವುದನ್ನು ನೋಡುತ್ತೇವೆ.ಕೊನೆಗೆ ಸಾಲ ತೀರಿಸಲಾಗದೆ ಎಲ್ಲವನ್ನೂ ಮಾರಿ ಹಿಂದೆ ಇದ್ದುದನ್ನೂ ಕಳೆದುಕೊಳ್ಳುವ ಸಂಭವ ಬರುತ್ತದೆ.ಆದುದರಿಂದ ನಾವು ಮೊದಲು ಇರುವುದರಲ್ಲೇ ತೃಪ್ತಿಕರವಾದ ,ಆರೋಗ್ಯಕರವಾದ ಜೀವನವನ್ನು ನಡೆಸಬೇಕು ಇಲ್ಲದಿದ್ದರೆ.ಅಪಾಯ ಕಟ್ಟಿಟ್ಟ ಬುತ್ತಿ ಎಂಬುದನ್ನು ತಿಳಿಸುತ್ತದೆ.

**10) ಉಪ್ಪಿಗಿಂತ ರುಚಿಇಲ್ಲ ; ತಾಯಿಗಿಂತ ಬಂಧುವಿಲ್ಲ**

ತಾಯಿಗಿಂತ ಮಿಗಿಲಾದ ಬಂಧುವಾಗಲಿ ಉಪ್ಪಿಗಿಂತ ರುಚಿಯಾದ ಖಾದ್ಯವಾಗಲಿ ಯಾವುದೂಇಲ್ಲವೆಂಬುದು ಈ ಗಾದೆ ಮಾತಿನ ಅರ್ಥ
ಒಂದು ಮೃಷ್ಟಾನ್ನ ಭೋಜನಕ್ಕೆ ಅನೇಕ ರೀತಿಯ ಬೆಲೆ ಬಾಳುವ ವಸ್ತುಗಳನ್ನೆಲ್ಲ ತಂದು ಘಮಘಮ ಎನ್ನುವಂತೆ ಅಡುಗೆಯನ್ನು ಮಾಡಿ ಅಗ್ಗದ ಬೆಲೆಯ ಉಪ್ಪನ್ನು ಹಾಕುವುದನ್ನು ಮರೆತರೆ ಆ ಭೋಜನಕ್ಕೆ ಅರ್ಥವಿರದು ಉಪ್ಪು ಇಲ್ಲದ ಅಡುಗೆ ಯಾರೂ ತಿನ್ನಲು ಸಾದ್ಯವಿಲ್ಲ .ತಾಯಿದ್ರೆ ತವರೆಚ್ಚು ತಂದಿದ್ರೆ ಬಳಗೆಚ್ಚು ಎನ್ನುವ ಜನಪದ ಮಾತು ಯಾರೂ ಆದರು ಹೆತ್ತ ತಾಯಂತೆ ಆದಾರೋ ಸಾವಿರ ಸೌದೆ ಒಲೆಯಲ್ಲಿ ಉರಿದಾರೂ ದೀವಿಗೆಯಂತ ಬೆಳಕುಂಟೆ ಎಂಬ ಮಾತಿನಲ್ಲಿ ತಾಯಿಯ ಮಹತ್ವ ತಿಳಿಯುತ್ತದೆ. ಜಗತ್ತಿನಲ್ಲಿ ಕೆಟ್ಟ ತಂದೆ ಇರಬಹುದು ಆದರೆ ಕೆಟ್ಟ ತಾಯಿ ಇರಲಾರಳು ತಾಯಿ ನೀಡುವ ಪ್ರೀತಿ ಜಗತ್ತಿನ ಯಾವ ಬಂಧುವೂ ನೀಡಲು ಸಾಧ್ಯವಿಲ್ಲ

- **ಪ್ರಬಂಧ ರಚನೆ :** ಒಡಲು/ವಿಷಯದ ಬೆಳವಣಿಗೆ 2 ಅಂಕಗಳು
  ಉಪಸಂಹಾರ/ಮುಕ್ತಾಯ 1 ಅಂಕ
  ಭಾಷಾ ಶೈಲಿಗೆ 1 ಅಂಕ
  ಒಟ್ಟು 5 ಅಂಕ

- **ಜ್ಞಾನಾಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ :**

**ಪ್ರಸ್ತಾವನೆ:**

ಪುಸ್ತಕಗಳು ಜ್ಞಾನ ಭಂಡಾರಗಳು,ಭಾಷೆ ವಾಕ್ಸುಷ ರೂಪ ಸಿಕ್ಕಾಗಿನಿಂದ ಮಾನವನ ಅನುಭವಾಮೃತಗಳು ದಾಖಲಿಸಲ್ಪಟ್ಟು ಈಗ ಗ್ರಂಥ ರೂಪದಲ್ಲಿ ಸಂರಕ್ಷಿಸಲ್ಪಟ್ಟಿವೆ. ಪುಸ್ತಕ ಓದುವುದರಿಂದ ತಲತಲಾಂತರ ದಿಂದ ಗಳಿಸಿದ ಜ್ಞಾನವನ್ನು ನಮ್ಮದಾಗಿಸಿಕೊಳ್ಳಬಹುದು. ಪುಸ್ತಕಗಳು ಒಳ್ಳೆಯ ಗೆಳೆಯನಿದ್ದಂತೆ ಗುರುವಿದ್ದಂತೆ. ಓದುವ ಅವ್ಯಾಸವುಳ್ಳವರಿಗೆ ಪುಸ್ತಕಗಳೇ ಜೀವನ ಸಂಗಾತಿ

ಒಡಲು:

ಪುಸ್ತಕ ಓದುವುದು ಗ್ರಂಥ ಸಂಗ್ರಹ ಮಾಡುವುದು ಅತ್ಯುತ್ತಮ ಅವ್ಯಾಸಗಳಲ್ಲಿ ಒಂದು ಸ್ವಂತವಾಗಿ ಗ್ರಂಥಗಳನ್ನು ಕರೀದಿಸಿ ಸಂಗ್ರಹಿಸುವುದು ಮುಂದಿನ ಜನಾಂಗಕ್ಕೆ ನಾವು ನೀಡುವ ಸಣ್ಣ ಕಾಣಿಕೆ. ಗ್ರಂಥ ಗಳನ್ನು ಸಂಗ್ರಹಿಸಿ ಬಳಸುವುದು ಒಂದು ಕಲೆ. ಸಾರ್ವಜನಿಕ ಗ್ರಂಥಾಲಯಗಳು ಹಿರಿ–ಕಿರಿಯರು, ಗುರು–ಶಿಷ್ಯರು, ಹವ್ಯಾಸವುಳ್ಳವರು ಅದ್ಯಯನ ಶೀಲರು ಎಲ್ಲರಿಗೂ ಬಳಕೆಯಾಗುವ ಗ್ರಂಥಗಳನ್ನು ಹೊಂದಿರಬೇಕು ಓದುವ ಕೊಠಡಿ , ಎರವಲು ಪಡೆಯುವ ಅವಕಾಶಗಳಲ್ಲದೆ, ಕಾಲಕಾಲಕ್ಕೆ ತನ್ನ ಸೇವೆಯನ್ನು ಗ್ರಂಥಾಲಯಗಳು ವಿಸ್ತರಿಸುತ್ತಲೂ ಇರಬೇಕು ಗ್ರಂಥಗಳ ಸದುಪಯೋಗಗಳನ್ನು ಮನಗಂಡ ಸರ್ಕಾರ ಪ್ರಥಮಿಕ ಶಾಲಾ ಹಂತದಿಂದ ಹಿಡಿದು ಹೊಸ ಅಸ್ತರಕ್ಷ ಹಿರಿಯರಿಗೂ ಗ್ರಂಥಾಲಯಗಳನ್ನು ತೆರೆದಿದೆ. ಪ್ರತೀ ಗ್ರಾಮ ಪಂಚಾಯತಿಗೂ ಗ್ರಂಥಾಲಯಗಳು ತೆರೆಯಲ್ಪಟ್ಟಿವೆ. ನಗರ ಪ್ರದೇಶಗಳಲ್ಲಿ ಗ್ರಂಥಾಲಯಗಳ ಉಪಯೋಗ ವಿಸ್ತಾರವಾಗಿ ಜಾರಿಯಾಗಿದೆ ಜ್ಞಾನ ಪ್ರಸಾರ ಎಡೆಬಿಡದೆ ಸಾಗಿದೆ.

ಉಪ ಸಂಹಾರ:

ಓದುವ ಹವ್ಯಾಸ ರೂಡಿಸಿಕೊಳ್ಳುವುದು ಒಂದು ಸಾಧನೆ ಒಮ್ಮೆ ರೂಡಿಸಿಕೊಂಡ ಹವ್ಯಾಸವನ್ನು ಗ್ರಂಥಾಲಯದ ಬಳಕೆಯಿಂದ ಮುಂದುವರೆಸಿ ಜ್ಞಾನಾಭಿವೃದ್ದಿಗೆ ತೊಡಗೊಗಿಸಿಕೊಳ್ಳಬಹುದು

1) ಅತಿವೃಷ್ಟಿಯಿಂದ ಉಂಟಾಗುವ ಅನಾನುಕೂಲಗಳು

ಪೀಠಿಕೆ:

ಜೀವ ಪರಿಸರದಲ್ಲಿ ಪ್ರಕೃತಿಗಳ ಪಾತ್ರ ಮಹತ್ತರವಾದುದು. ಡಾರ್ವಿನ್ ಹೇಳುವಂತೆ ಜೀವಿಗಳು ತಮ್ಮ ಪರಿಸರದಲ್ಲಿನ ಪ್ರಕೃತಿಗೆ ಹೊಂದಿಕೊಂಡು ಬಾಳುತ್ತವೆ. ಜೀವಿಗಳ ಮೇಲಾಗುವ ದೀರ್ಘಕಾಲೀನ ಪ್ರಾಕೃತಿಕ ಪ್ರಭಾವ ಜೀವನ ವಿಧಾನವನ್ನೇ ಬದಲಾಯಿಸುತ್ತದೆ ಅದೇರೀತಿ ತಕ್ಷಣದಲ್ಲಿ ಆಗುವ ಪ್ರಾಕೃತಿಕ ಏರುಪೇರುಗಳೂ ಬದುಕಿನ ದಿಕ್ಕನ್ನು ವ್ಯತ್ಯಯಗೊಳಿಸುತ್ತದೆ. ಇದಕ್ಕೊಂದು ಒಳ್ಳೆಯ ಉದಾಹರಣೆ ಅತಿವೃಷ್ಟಿಯಿಂದ ಉಂಟಾಗುವ ಪರಿಣಾಮಗಳು

ಒಡಲು:

ಋತು ಚಕ್ರದಲ್ಲಿ ಮಳೆ,ಚಳಿ ಬಿಸಿಲು –ಕಾಲದಲ್ಲಿ ಸಹಜವಾಗಿ ಅಗುವ ಪ್ರಕ್ರಿಯೆ. ಈ ಪ್ರಕ್ರಿಯೆ ಅಸಹಜವಾದಾಗ ಅತಿ ಕಡಿಮೆ ಮಳೆಯೋ ಅತಿ ಹೆಚ್ಚು ಮಳೆಯೋ ಆಗಿ ಪ್ರಕೃತಿ ಹದಗೆಡುತ್ತದೆ ಸಾಮಾನ್ಯಕ್ಕಿಂತಲೂ ಹೆಚ್ಚು ಬೀಳುವ ಮಳೆಯೇ ಅತಿವೃಷ್ಟಿ ,ಅತಿವೃಷ್ಟಿಯಿಂದ ಪರಿಸರ ನಾಶವಾಗಿ ಗಿಡ ಗಂಟಿಗಳು ಇಲ್ಲವಾಗುತ್ತವೆ. ಫಲವತ್ತದ ಮೇಲ್ಮಣ್ಣು ಕೊಚ್ಚಿಹೋಗುತ್ತದೆ. ಬೆಳೆನಾಶವಾಗುತ್ತದೆ. ವಸತಿ ಪ್ರದೇಶಗಳು ನೀರಿನಿಂದ ಮುಚ್ಚಲ್ಪಟ್ಟು ವಾಸ್ತವ್ಯಕ್ಕೆ ಕಷ್ಟವಾಗುತ್ತದೆ. ನದಿ,ಕುಂಟೆಗಳು ಉಕ್ಕಿ ಹರಿದು ದನಕರುಗಳನ್ನು ಹೊತ್ತೊಯ್ಯತ್ತದೆ. ಕೆರೆ ದಂಡೆ ಒಡೆದು ಜಲ ಪ್ರಳಯ ಉಂಟಾಗುತ್ತದೆ .ಸತ್ತ ಪ್ರಾಣಿ, ಸಸ್ಯಗಳಿಂದ ವಾತಾವರಣ ಕೆಟ್ಟು ರೋಗ ರುಜಿನಗಳು ಕಾಣಿಸಿಕೊಳ್ಳುತ್ತವೆ.ಆಹಾರದ ಸಮಸ್ಯೆ ಉಂಟಾಗುತ್ತದೆ. ಸಂಪರ್ಕಗಳು ಕಡಿತಗೊಳ್ಳುತ್ತವೆ. ರಸ್ತೆಗಳು ಹಾಳಾಗಿ ಸಂಚಾರ ದುಸ್ತರವಾಗುತ್ತದೆ. ಔಷದೋಪಚಾರಗಳು ಅಲಭ್ಯವಾಗುತ್ತವೆ. ಅತಿವೃಷ್ಟಿಯ ಅನಾನುಕೂಲತೆಯ ಪಟ್ಟಿ ಮುಗಿಯುವುದಿಲ್ಲ ಅತಿವೃಷ್ಟಿಯ ಪ್ರದೇಶದವರಿಗಷ್ಟೇ ಅಲ್ಲದೆ ಆ ಪ್ರಾಂತ್ಯದ ಅಕ್ಕ ಪಕ್ಕದ ಪ್ರದೇಶಗಳಿಗೂ ಅದರ ಬಿಸಿ ಮುಟ್ಟುತ್ತದೆ. ಸರ್ಕಾರ, ವಾಣಿಜ್ಯ ಎಲ್ಲವುಗಳ ಮೇಲೂ ಅದರ ಪ್ರಭಾವ ಇರುತ್ತದೆ.

ಮುಕ್ತಾಯ:

ಅತಿವೃಷ್ಟಿ ಪ್ರಕೃತಿಯಲ್ಲಾಗುವ ತಕ್ಷಣದ ಏರು ಪೇರು,ಇದನ್ನು ತಡೆಯುವುದು ಅಸಾಧ್ಯದ ಮಾತು ಆದರೆ ವಿಜ್ಞಾನದ ಪ್ರಗತಿಯಿಂದಾಗಿ ನಾವಿಂದು ಅತಿವೃಷ್ಟಿಯನ್ನು ಮುಂಚಿತವಾಗಿ ಊಹಿಸಬಲ್ಲೆವು. ಪ್ರಕೃತಿ ಮುನಿದಾಗ ತೊಂದರೆಗೆ ಸಿಲುಕುವುದನ್ನು ಸಾದ್ಯವಾದಷ್ಟು ತಪ್ಪಿಸಿಕೊಳ್ಳಬಹುದು. ಜೀವ ರಕ್ಷಣೆಗೆ ಕ್ರಮ ಕೈಗೊಳ್ಳಬಹುದು ತಾನೇ ನಿರ್ಮಿಸಿಕೊಂಡ ಸರ್ಕಾರದ ಮೂಲಕ ಪ್ರಕೃತಿಯನ್ನು ರಕ್ಷಿಸಿ ಮಾನವ ತನ್ನನ್ನು ರಕ್ಷಿಸಿಕೊಳ್ಳಲಿ.

2) ಮಾಹಿತಿ ತಂತ್ರಜ್ಞಾನದ ಅಗತ್ಯ":

ಪ್ರಸ್ತಾವನೆ.

ಇಂದು ವಿಶ್ವ ಸ್ಪರ್ಧಾ ಲೋಕವನ್ನೇ ಹೋಂದಿದೆ. ಈ ಶತಮಾನವನ್ನು ಆವಿಷ್ಕಾರಗಳ ಅಗರ ಎನ್ನಬಹುದು. ವಿಜ್ಞಾನ ತಂತ್ರಜ್ಞಾನಗಳು ದಿನನಿತ್ಯದ ಜೀವನದಲ್ಲಿ ಪ್ರಭಾವವನ್ನು ಬೀರುತ್ತಿವೆ. ಇಡೀ ವಿಶ್ವವೇ ಅಂಗೈ ಒಳಗೆ ತೆರೆದು ಕೊಳ್ಳುತ್ತಿದೆ. ಮಾಹಿತಿ ತಂತ್ರಜ್ಞಾನದ ಕೊಡುಗೆ ಇದಕ್ಕೆಲ್ಲ ಆಧಾರ ಹಾಗಾಗಿ ಮಾಹಿತಿ ತಂತ್ರಜ್ಞಾನವನ್ನು ಬಿಟ್ಟು ಬದುಕುವುದನ್ನು ಊಹಿಸಿಕೊಳ್ಳುವುದೂ ಕಷ್ಟ.

ಒಡಲು:

ಒಂದು ಪ್ರದೇಶದ ಮಾಹಿತಿಯನ್ನು ಇನ್ನೊಂದು ಸ್ಥಳದಲ್ಲಿ ಕುಳಿತು ತಿಳಿಯಲು ಸಾಧ್ಯ ಮಾಡಿಕೊಟ್ಟಿದ್ದು ಮಾಹಿತಿ ತಂತ್ರಜ್ಞಾನ. ಒಂದು ದೇಶದ ವಿಜ್ಞಾನಿಗಳು ಆವಿಷ್ಕರಿಸಿದ ವಿಷಯಗಳನ್ನು

ಉಳಿದ ಇತರ ದೇಶದವರು ಪಡೆದು ಪ್ರಯೋಜನ ಮಾಡಿಕೊಳ್ಳಲು ಈ ತಂತ್ರಜ್ಞಾನವು ನೆರವು ನೀಡಿದೆ. ಕಂಪ್ಯೂಟರ್,ಮೊಬೈಲ್,ಎಲೆಕ್ಟ್ರಾನಿಕ್ ಉಪಕರಣಗಳು ಮಾಹಿತಿಯನ್ನು ಶೀಘ್ರಗತಿಯಲ್ಲಿ ತಲುಪಿಸಲು ಸಾಧನಗಳಾಗಿವೆ. ಈ ಸಾಧನಗಳು ವಿಶ್ವದ ಬಾಲರಾದಿ ವೃದ್ಧರವರೆಗೆ, ವಿದ್ಯಾರ್ಥಿಗಳಿಂದ ಹಿಡಿದು ವೈದ್ಯಕೀಯ ಶಸ್ತ್ರ ಚಿಕಿತ್ಸೆಯ ನೇರ ಸಂಪರ್ಕದವರೆಗೆ ಇವುಗಳ ವ್ಯಾಪ್ತಿ ಮತ್ತು ಪ್ರಯೋಜನ ವಿಸ್ತರಿಸಿಕೊಂಡಿದೆ. ಹಳ್ಳಿಯ ಒಂದು ಮೂಲೆಯಲ್ಲಿ ನಡೆಯುವ ಪ್ರಕೃತಿಯ ವಿಕೋಪದಿಂದ ಹಿಡಿದು ಅನ್ಯಗ್ರಹದ ತಕ್ಷಣದ ಮಾಹಿತಿಯವರೆಗೆ ಇವು ಸಮಾಚಾರವನ್ನು ,ವಿಷಯ ವಿಸ್ತಾರಗಳನ್ನು ವಿಷದಪಡಿಸುತ್ತಿವೆ. ಈ ವಿಜ್ಞಾನದ ಯುಗದಲ್ಲಿ ಮಾಹಿತಿ ತಂತ್ರಜ್ಞಾನವು ದೂರದೂರದ ವ್ಯಕ್ತಿಗಳನ್ನು ಹತ್ತಿರ ತಂದಿದೆ. ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗಿದೆ. ಹಾಗಾಗಿ ಜೀವನ ಸಾರ್ಥಕಕ್ಕೆ ಮಾಹಿತಿ ತಂತ್ರಜ್ಞಾನ ಅತ್ಯಗತ್ಯವಾಗಿದೆ.

ಉಪಸಂಹಾರ:

ಶಾಲೆಗಳಲ್ಲಿ ಕಂಪ್ಯೂಟರ್ ಬಳಸಿ ಶಿಕ್ಷಣ ಪಡೆಯುತ್ತಿದ್ದಾರೆ . ಮೊಬೈಲ್ ಬಳಸದ ಯಾವ ವ್ಯಕ್ತಿಯೂ ಸಿಗಲಾರ ಎಲ್ಲ ಇಲಾಖೆಗಳನ್ನು ಸರ್ಕಾರ ಗಣಕೀಕೃತ ಕಾರ್ಯಕ್ಕೆ ಸಿದ್ಧಪಡಿಸುತ್ತಿದೆ. ಹೀಗಾಗಿ ತಂತ್ರಜ್ಞಾನದ ಶಿಕ್ಷಣ ಪಡೆಯದವ ವಿದ್ಯಾವಂತ ಎನಿಸಿಕೊಳ್ಳಲಾರ .ಹಾಗಾಗಿ ಮಾಹಿತಿ ತಂತ್ರಜ್ಞಾನ ಜೀವನದ ಒಂದು ಭಾಗವೇ ಆಗಿ ಅತ್ಯಗತ್ಯವಾಗಿದೆ.

- ಪರಿಸರ ಮಾಲಿನ್ಯ

ನಮ್ಮ ಸುತ್ತಮುತ್ತಲಿನ ಪ್ರಾಣಿ ಪಕ್ಷಿಗಳು .ಗಿಡಮರಗಳು, ನದಿ., ಪರ್ವತ, ಸಾಗರ ಸರೋವರಗಳೆಲ್ಲವು ಸೇರಿ ಪರಿಸರ ಎನ್ನುತ್ತೇವೆ. ಈ ನಮ್ಮ ಪರಿಸರ ಒಂದಲ್ಲ ಒಂದು ಮನುಷ್ಯನ ಸ್ವಾರ್ಥಕ್ಕೆ ಸಿಕ್ಕಿ ಆ ಕಾರಣದಿಂದ ಮಲಿನವಾಗುತ್ತಲೇ ನಡೆದಿದೆ. ಪರಿಸರ ಮಾಲಿನ್ಯದಲ್ಲಿ ಹಲವು ವಿಧಗಳಿವೆ

- ವಾಯು ಮಾಲಿನ್ಯ:

ಗಾಳಿ ನಮ್ಮ ಪಾಣವಾಯು. ಮರಗಿಡಗಳಿಂದ ಆಮ್ಲಜನಕವು ಬಿಡುಗಡೆಯಾಗುತ್ತದೆ. ಅರಣ್ಯ ನಾಶದಿಂದ ನಮಗೆ ಆಮ್ಲ ಜನಕ ಕೊರತೆ ಉಂಟಾಗುತ್ತದೆ. ಈ ವಾಯುವಿನಲ್ಲಿ ವಾಹನಗಳು, ಕರ್ಖಾನೆಗಳು ಹೊರಬಿಡುವ ಹೊಗೆ ಸೇರಿ ಅದನ್ನು ಸೇವಿಸುವ ಜೀವಿಯು ಅಸ್ತಮ, ನೆಗಡೆ, ಕೆಮ್ಮು, ಜ್ವರ, ಶ್ವಾಸಕೋಶದ ರೋಗಕ್ಕೆ ತುತ್ತಾಗಿ ಹಾಸಿಗೆ ಹಿಡಿಯುವಂತಾಗುತ್ತದೆ. ಹೆಚ್ಚುತ್ತಿರುವ ಔದ್ಯೋಗೀಕರಣಗಳು, ಉರುವಲುಗಳಿಂದ ಕಲ್ಲಿದ್ದಲು, ಕಟ್ಟಿಗೆ ಮುಂತಾದವುಗಳು

ವಾಯುಮಾಲಿನ್ಯಕ್ಕೆ ಕಾರಣವಾಗಿದೆ. ಸಿಡಿಮದ್ದು ಸ್ಫೋಟಕ ವಸ್ತುಗಳು, ವಿಕಿರಣಗಳು ವಾಯುಮಾಲಿನ್ಯದ ಹೆಚ್ಚಳಕ್ಕೆ ಕಾರಣವಾಗಿದೆ. ವಾಯುಮಾಲಿನ್ಯದಿಂದ ಸಸ್ಯ ಸಂಪತ್ತು ನಾಶವಾಗುತ್ತಿದೆ. ಮೋಟಾರು ವಾಹನಗಳಲ್ಲಿ ನಿಯಂತ್ರಿತ ಉಪಕರಣಗಳನ್ನು ಅಳವಡಿಸಬೇಕು. ಕೃಷಿ ಸಂಬಂಧಿತ ಕಸವನ್ನು ರೈತರಿಗೆ ಸಲಹೆ ನೀಡಬೇಕು. ಅರಣ್ಯ ನಾಶಗೊಳಿಸದಂತೆ ನೋಡಿಕೊಳ್ಳಬೇಕು.

- ಭೂ ಮಾಲಿನ್ಯ:

ಮಾನವನು ತಮಗೆ ನಿರುಪಯುಕ್ತವಾದ ಹೊಲಸು ಪದಾರ್ಥಗಳನ್ನು ಕಸಕಡ್ಡಿ ಕೊಳಕಾದ ವಸ್ತುಗಳನ್ನು ಭೂಮಿಯ ಮೇಲೆ ಎಲ್ಲೆಂದರಲ್ಲಿ ಎಸೆಯುತ್ತ ಬಂದ ಕಾರಣ ಭೂ ಮಾಲಿನ್ಯ ಉಂಟಾಗುತ್ತದೆ.ಪ್ಲಾಸ್ಟಿಕ್ ಚೀಲಗಳು, ಬಟ್ಟೆಗಳು, ರಾಸಾಯನಿಕ ಗೊಬ್ಬರಗಳು, ಹಳೆಯ ಔಷಧಿಗಳು ಮುಂತಾದವುಗಳನ್ನು ಭೂಮಿಯ ಮೇಲೆ ಎಸೆಯಲ್ಪಡುವುದರಿಂದ ಭೂಮಾಲಿನ್ಯ ಉಂಟಾಗುತ್ತದೆ.ಅರಣ್ಯ ನಾಶದಿಂದ ಮಣ್ಣಿನ ಸವೆತ ಉಂಟಾಗಿ ಭೂಮಿಯ ಫಲವತ್ತತೆ ಕಡಿಮೆಯಾಗುತ್ತದೆ.ಭೂಮಲಿನ್ಯದಿಂದ ಅಂತರ್ಜಲ ಕುಸಿಯುತ್ತದೆ. ಭೂ ಮಲಿನ್ಯ ತಡೆಗಟ್ಟಲು ಪ್ಲಾಸ್ಟಿಕ್ ಚೀಲ,ಗಾಜಿನ ಸೀಸೆಗಳನ್ನು ಕಡಿಮೆ ಮಾಡಬೇಕು .ರಾಸಯನಿಕ ಗೊಬ್ಬರ ಕೀಟನಾಶಕ ಔಷಧಿಗಳ ಉಪಯೋಗ ಕಡಿಮೆಮಾಡಬೇಕು. ತ್ಯಾಜ್ಯ ವಸ್ತುಗಳನ್ನು ಪರಿವರ್ತಿಸಿ ಪುನರ್ಬಳಕೆ ಮಡಬೇಕು. ಹೆಚ್ಚುಹೆಚ್ಚು ಮರಗಿಡಗಳನ್ನು ಬೆಳೆಸಬೇಕು.

–ಜಲಮಾಲಿನ್ಯ:

ಜಲ ಮನುಷ್ಯನಿಗೆ ಅಮೃತಕ್ಕೆ ಸಮಾನ. ಸಾವಿರಾರು ವರ್ಷಗಳಿಂದ ಪವಿತ್ರವೆಂದು ನಂಬಿದ್ದ ಭಾರತೀಯ ನದಿಗಳು, ಸರೋವರಗಳು ಇಂದು ಬರಡಾಗಿ ಕಸದ ತೊಟ್ಟಿಗಳಾಗಿವೆ. ಈ ಜಲಮೂಲಗಳ ಹಾಳು ಮಾಡುವಿಕೆಯನ್ನೇ ಜಲಮಾಲಿನ್ಯ ಎಂದು ಕರೆಯಲಾಗಿದೆ.ನದಿಗಳಿಗೆ ಇಂದು ಕಾರ್ಖಾನೆಗಳಿಂದ ಹರಿದು ಬರುವ ಕೊಳಕಾದ ನೀರು, ಸಾವಿರಾರು ಹೆಣಗಳು, ಕಶ್ಮಲ ಪದಾರ್ಥಗಳು ನದಿಗಳಿಗೆ ಸೇರುತ್ತಿದೆ. ಇಂತಹ ಕಲುಷಿತ ನೀರನ್ನು ಜನ ಮತ್ತು ಜಲಚರ ಪ್ರಾಣಿಗಳು ಕುಡಿಯುವುದರಿಂದ ಅನೇಕ ರೀತಿಯ ರೋಗಕ್ಕೆ ಈಡಾಗಬೇಕಾಗುತ್ತದೆ. ಒಳಚರಂಡಿ ವ್ಯವಸ್ಥೆಯು ಕೆಲವೊಮ್ಮೆ ಕುಡಿಯುವ ನಿರನ್ನು ಮಲಿನಗೊಲಿಸುತ್ತದೆ. ಪ್ರವಾಸಿಗರು ತಾವು ತಿಂದುಳಿದ ಆಹಾರವನ್ನು ನೀರಿಗೆ ಎಸೆಯುವುದರಿಂದ ಜಲಮಾಲಿನ್ಯ ಉಂಡಾಗುತ್ತದೆ. ಪ್ರಪಂಚದಲ್ಲಿ ಉತ್ಪನ್ನವಾಗುವ ತೈಲದ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಸಾಗರಗಳ ಆಚೆ ಸಾಗಿಸುವಾಗ ಚೆಲ್ಲುವಿಕೆ ಮತ್ತು ಸೋರುವಿಕೆಯಿಂದ ಜಲವು ಮಲಿನವಾಗುತ್ತದೆ. ರಾಸಾಯನಿಕ ವಸ್ತುಗಳ ಬಳಕೆಯಿಂದ ಅಂತರ್ಜಲವು ಕಲ್ಮಶಗೊಳ್ಳುತ್ತಿದೆ. ನದಿ ,ಕೆರೆಗಳಲ್ಲಿ ದನಕರುಗಳನ್ನು ತೊಳೆಯುವುದರಿಂದ,ಬಟ್ಟೆ ತೊಳೆಯುವುದರಿಂದ ಸ್ನಾನ ಮಾಡುವುದರಿಂದ ಜಲಮಲಿನ್ಯ

ಉಂಟಾಗುತ್ತದೆ. ಇದನ್ನು ತಡೆಗಟ್ಟಲು ಕಾರ್ಖಾನೆಗಳಿಂದ ಹೊರಬರುವ ನೀರನ್ನು ತಡೆಗಟ್ಟಬೇಕು. ಪೆಟ್ರೋಲ್,ಡೀಸಲ್,ಮುಂತಾದ ಇಂದನಗಳ ಬದಲಾಗಿ ಸೌರಶಕ್ತಿ, ಪವನಸಕ್ತಿ, ಕಡಲ ಹಾಗೂ ಅಲೆಗಳ ಶಕ್ತಿ ಬಳಸುವಂತಾಗಬೇಕು. ನಗರಗಳ ಚರಂಡಿಗಳ ಕಲ್ಮಶವನ್ನು ನದಿಗಳಿಗೆ ಬಿಡದೆ ಸಂಸ್ಕರಿಸಿ ಬಳಸಬೇಕು. ಕಾರ್ಖಾನೆಗಳಿಂದ ಹೊರಬೀಳುವ ತ್ಯಾಜ್ಯ ವಸ್ತುಗಳನ್ನು ಉಪಯೋಗಿ ವಸ್ತುಗಳನ್ನಾಗಿ ಬಳಸುವ ತಂತ್ರಜ್ಞಾನವನ್ನು ಬೆಳೆಸಬೇಕು ಒಟ್ಟಾರೆ ನಾವು ಪರಿಸರದೊಂದಿಗೆ ಹೊಂದಿಕೊಂಡು ನಿಸರ್ಗವನ್ನು ಅರ್ಥೈಸಿಕೊಂಡು ಅದರ ಸಮತೋಲನ ಕಾಪಾಡಿಕೊಂಡು ಬರಬೇಕು. 'ಕಾಡನ್ನು ಬೆಳೆಸಿ , ನಾಡನ್ನು ಉಳಿಸಿ' 'ಮನೆಗೊಂದು ಮರ ಊರಿಗೊಂದು ವನ' 'ವನಮಹೋತ್ಸವ "ಪರಿಸರ ದಿನಚರಣೆ' ಇವುಗಳಿಂದ ಪರಿಸರದ ಬಗ್ಗೆ ಜನಜಾಗೃತಿಯನ್ನು ಉಂಟು ಮಾಡಿದಾಗ ಮಾತ್ರ ಪರಿಸರಮಾಲಿನ್ಯವೆಂಬ ಈ ಪೆಡಂಭೂತವನ್ನು ಓಡಿಸಬಹುದು.

### 4) ಕಂಪ್ಯೂಟರ್

ಕಂಪ್ಯೂಟರ್‌ಗಳು ಆಧುನಿಕ ವಿಜ್ಞಾನದ ಅಪೂರ್ವ ಕೊಡುಗೆಯಾಗಿದೆ.ಅಧುನಿಕ ಯುಗವನ್ನು ಕಂಪ್ಯೂಟರ್‌ಯುಗ ಎಂದು ಕರೆಯಲಾಗಿದೆ ಇಂದು ವಿಶ್ವ ವ್ಯಾಪಕವಾದ ಸಾಮ್ರಾಜ್ಯವನ್ನು ಸ್ಥಾಪಿಸಿರುವ ಏಕೈಕ ಸಾಧನ ಈ ಕಂಪ್ಯೂಟರ್‌ಗಳು ಎನ್ನ ಬಹುದು. ಚಾರ್ಲ ಬ್ಯಾಬೆಜ್ ನನ್ನು ಕಂಪ್ಯೂಟರ್ ಜನಕ ಎಂದು ಕರೆಯುತ್ತಾರೆ.

ಕಂಪ್ಯೂಟರ್ ಬಳಕೆಯಿಂದ ಹಲವಾರು ಉಪಯೋಗಳುಂಟು

ಇದರ ಬಳಕೆಯಿಂದ ಸಮಯ ಉಳಿತಾಯವಾಗುವುದು ಹತ್ತಾರು ವ್ಯಕ್ತಿಗಳು ಕೂತು ಹಗಲಿರುಳು ಮಾಡಬೇಕಾದ ಲೆಕ್ಕಾಚಾರಗಳನ್ನು ಕ್ಷಣಮಾತ್ರದಲ್ಲೇ ಮಾಡುತ್ತದೆ.ಬಾಹ್ಯಕಾಶ ಉಪಗ್ರಹ ತಂತ್ರಜ್ಞಾನ, ದೂರ ಸಂಪರ್ಕ, ವಿಜ್ಞಾನ, ವ್ಯಾಪಾರ, ಆಡಳಿತ ಕ್ಷೇತ್ರಗಳಲ್ಲಿ, ವಿಮಾನ, ರೈಲ್ವೆ ಮೊದಲಾದ ಕ್ಷೇತ್ರಗಳಲ್ಲಿ ಕಂಪ್ಯೂಟರ್ ವ್ಯಾಪಕವಾಗಿ ಬಳಕೆಯಲ್ಲಿದೆ.

ಕಂಪ್ಯೂಟರ್ ನೀಡುವ ಅಂಕಿ ಅಂಶ ವಿಶ್ಲೇಷಣೆಯು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ನೆರವಾಗುತ್ತದೆ. ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನಲ್ಲಿ ಬಾಳಬೇಕಾದರೆ ಕಂಪ್ಯೂಟರೀಕರಣದಿಂದ ಸಿಗುವ ವೈಜ್ಞಾನಿಕ ತಿಳಿವಳಿಕೆಯ ಅಗತ್ಯವಿದೆ. ಇದು ತನ್ನ ಅಂತರ್ಜಾಲ ವ್ಯವಸ್ಥೆಯಿಂದ ಬೇಕಾದ ಮಾಹಿತಿಯನ್ನು ದೇಶ ವಿದೇಶಗಳ ಸುದ್ಧಿಯನ್ನು ಕ್ಷಣ ಮಾತ್ರದಲ್ಲಿ ನೀಡುತ್ತದೆ. ಬ್ಯಾಂಕಿನ ಎಟಿಎಂ ಗಳೂ ಸಹ ಕಂಪ್ಯೂಟರ್‌ನ ಸಹಾಯದಿಂದ ಕಾರ್ಯನಿರ್ವಹಿಸುತ್ತವೆ. ಸಾರಿಗೆ ಇಲಾಖೆಯಲ್ಲಿ ಮುಂಗಡವಾಗಿ ಸ್ಥಳ ಕಾಯ್ದಿರಿಸುವ ವ್ಯವಸ್ಥೆ

ಕಂಪ್ಯೂಟರ್ ಸಹಾಯದಿಂದ ನಡೆಯುತ್ತದೆ. ಅಂತರಿಕ್ಷ ಯಾತ್ರೆಯ ವಾತಾವರಣ ತಿಳಿಯಲು, ಹವಾಮಾನದ ಮಾಹಿತಿ ಅರಿಯಲು, ಕಾರ್ಖಾನೆಗಳ ಉತ್ಪಾದನೆಯ ಸರಿ ಅಂದಾಜು ಮಾಡಲು, ಪರೀಕ್ಷಾ ಫಲಿತಾಂಶಗಳನ್ನು ತಿಳಿಯಲು ಕಂಪ್ಯೂಟರ್ ಬಳಕೆ ಅತ್ಯಗತ್ಯ. ಎಷ್ಟೋ ವರ್ಷಗಳ ಲೆಕ್ಕ ಪತ್ರಗಳನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಬಹುದಾಗಿದೆ.ರಕ್ಷಣಾ ಕ್ಷೇತ್ರದಲ್ಲಿ, ಪತ್ರಿಕಾ ಕ್ಷೇತ್ರದಲ್ಲಿ ಕಂಪ್ಯೂಟರ್ ಉಪಯೋಗ ಅತ್ಯಂತ ಮಹತ್ವದ್ದಾಗಿದೆ. ಶಿಕ್ಷಣ ಮತ್ತು ಮನರಂಜನೆ ಜೊತೆಗೂಡಿ ಮಕ್ಕಳಿಗೆ ಕಲಿಕೆಯ ಹೊಸ ವಿಧಾನ ಕಂಪ್ಯೂಟರ್‌ನಿಂದ ಸಾಧ್ಯವಾಗಿದೆ. ಇಂಟರ್ನೆಟ್ ಮತ್ತು ಇ-ಮೆಯಿಲ್ ಸೌಲಭ್ಯದಿಂದ ಜನರು ಕೆಲವೇ ನಿಮಿಷಗಳಲ್ಲಿ ವಿಶ್ವದೆಲ್ಲೆಡೆ ಮಾಹಿತಿಯನ್ನು ಕಳುಹಿಸಬಹುದು ಮತ್ತು ಪಡೆಯಬಹುದು. ಬ್ಯಾಂಕ್,ಪೋಸ್ಟ್ ಆಫೀಸ್, ಅಂಗಡಿ, ಬಸ್ಸುಗಳಲ್ಲಿ ಟಿಕೆಟ್ ನೀಡಲು ಇಂದು ಕಂಪ್ಯೂಟರ್ ಬಳಸಲಾಗುತ್ತಿದೆ

ಹೀಗೆ ವಿಜ್ಞಾನ, ವೈದ್ಯಕೀಯ, ವಾಣಿಜ್ಯ, ಇಂಜನಿಯರಿಂಗ್, ಕೈಗಾರಿಕೆ, ಅಡಳಿತ, ವಾರ್ತಾ ಪ್ರಸಾರ, ಕೃಷಿ., ಶಿಕ್ಷಣ, ಸಾರಿಗೆ, ಬಾಹ್ಯಾಕಾಶ ಸಂಶೋಧನೆ ಎಲ್ಲ ರಂಗಗಳಲ್ಲೂ ಕಂಪ್ಯೂಟರ್ ಅತ್ಯವಶ್ಯಕವಾಗಿದೆ ಇಂದು ನಾವೆಲ್ಲರೂ ಅಕ್ಷರ ಕಲಿತರೂ ಕಂಪ್ಯೂಟರ್ ಜ್ಞಾನವಿಲ್ಲದೆ ಹೋದರೆ ಅನಕ್ಷರಸ್ತರೇ ಸರಿ ಅದ್ದರಿಂದ ಇಂದಿನ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣದ ಅಗತ್ಯತೆ ಇದೆ

- ಸಮೂಹ ಮಾದ್ಯಮಗಳು:

ಜಗತ್ತಿನಾದ್ಯಂತ, ದಿನನಿತ್ಯ ಸಂಭವಿಸುವ ಘಟನೆಗಳನ್ನು ವಿದ್ಯಮಾನಗಳನ್ನು ಹಾಗೂ ಆಗು-ಹೋಗುಗಳನ್ನು ಬಹುಪಾಲು ಜನರಿಗೆ ಒಂದೇ ಸಮಯದಲ್ಲಿ ಸುಲಭವಾಗಿ ನೀಡುವ ಮಾಧ್ಯಮಗಳನ್ನು ಸಮೂಹ ಮಾದ್ಯಮಗಳೆಂದು ಕರೆಯುತ್ತೇವೆ. ಪ್ರಮುಖ ಸಂಪರ್ಕ ಮಾಧ್ಯಮಗಳೆಂದರೆ ದೂರದರ್ಶನ, ದಿನಪತ್ರಿಕೆ, ರೇಡಿಯೋ, ಕಂಪ್ಯೂಟರ್‌ಇತ್ಯಾದಿ

- ದೂರದರ್ಶನ:

ಮಾಧ್ಯಮಗಳಲ್ಲಿ ದೂರದರ್ಶನ ಅತ್ಯಂತ ಪ್ರಭಾವಶಾಲಿಯಾದುದು.ಜಗತ್ತಿನ ಯಾವ ಮೂಲೆಯಲ್ಲೊ ನಡೆದಿರುವ ಘಟನೆಯನ್ನು ಪ್ರತ್ಯಕ್ಷಗೊಳಿಸಲು ದೂರದರ್ಶನದಿಂದ ಸಾದ್ಯ.ಉಪಗ್ರಹ ತಂತ್ರಜ್ಞಾನದ ಮುಖಾಂತರ ಇಂದು ಅಸಂಖ್ಯಾತ ವಾಹಿನಿಗಳು ಬೆಳಕಿಗೆ ಬಂದಿವೆ. ಮನೆಯಲ್ಲಿ ಕುಳಿತೆ ಪ್ರಪಂಚ ಪರ್ಯಟನೆ ಮಾಡಬಹುದು. ದೇಶವಿದೇಶಗಳ ವಿದ್ಯಮಾನಗಳನ್ನು ತಿಳಿಯಬಹುದು. ಬಾಹ್ಯಾಕಾಶ, ಸಾಗರದಾಳಗಳನ್ನು ವೀಕ್ಷಿಸಬಹುದು. ಪ್ರಕೃತಿ ನಿಗೂಡತೆಯನ್ನು ಅರಿಯಬಹುದು. ಸಂಗೀತವನ್ನು ಆಲಿಸಿ, ಚಲನಚಿತ್ರಗಳನ್ನು ವೀಕ್ಷಿಸಿ, ಸಾಮಾನ್ಯಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು.ಶಿಕ್ಷಣ ಪ್ರಸಾರಕ್ಕಾಗಿಯೇ ವಾಹಿನಿಯೊಂದು ಆರಂಭವಾಗಿರುವುದು ಶಿಕ್ಷಣ ಕ್ಷೇತ್ರದ ಕ್ರಾಂತಿಯೆಂದೇ

ಭಾವಿಸಬಹುದು. ಇಂದು ದೂರದರ್ಶನದಲ್ಲಿ ಮನರಂಜನೆ, ಕವಿಸಮ್ಮೇಳನ, ಹರಟೆ,ಸಂದರ್ಶನ, ನೇರಪ್ರಸಾರ ಸೌಲಭ್ಯ, ಆಟೋಟಗಳು, ರೈತರಿಗೆ ಸಲಹೆ, ಗ್ರಾಮೀಣ ಆರೋಗ್ಯ, ಜನ ಸಂಪರ್ಕ, ವಿದ್ಯಾಭ್ಯಾಸ, ಚಿತ್ರಕಲೆ, ಶಿಲ್ಪಕಲೆ, ನೃತ್ಯ, ನಾಟಕ, ಸಂಗೀತ ಮುಂತಾದ ಕಾರ್ಯಕ್ರಮಗಳು ಬಿತ್ತರಗೊಂಡು ಎಲ್ಲ ವಯೋಮಾನದವರಿಗೂ ಒಗ್ಗುವಂತಿದೆ. ಯು.ಜಿ.ಸಿ ಕಾರ್ಯಕ್ರಮಗಳು, ಉನ್ನತ ವಿದ್ಯಾಭ್ಯಾಸ ಮಾಡುವವರಿಗೆ ದಾರಿದೀಪವೇ ಆಗಿದೆ. ರಾಮಾಯಣ,ಮಹಾಭಾರತಗಳಂತಹ ಧಾರಾವಾಹಿಗಳು ನಮ್ಮ ಪುರಾಣ ಇತಿಹಾಸಗಳನ್ನೇ ನಮ್ಮ ಕಣ್ಣ ಮುಂದೆ ತಂದು ಅಲೌಕಿಕ ಆನಂದವನ್ನು ನೀಡುತ್ತವೆ. ವೀಕ್ಷಕರಿಗೆ ಆಯ್ಕೆ ಸ್ವಾತಂತ್ರ್ಯ ಇರುವುದರಿಂದ ಉತ್ತಮ ಕಾರ್ಯಕ್ರಮ ಆಯ್ದುಕೊಳ್ಳುವುದು ಮಾನಸಿಕ ಆರೋಗ್ಯದ ದೃಷ್ಟಿಯಿಂದ ಉತ್ತಮ.

ದೂರದರ್ಶನದಿಂದ ಕೆಲವು ದುಷ್ಪರಿಣಾಮಗಳೂ ಉಂಟು ಅತಿಯಾದ ದೂರದರ್ಶನ ವೀಕ್ಷಣೆಯಿಂದ ನಿದ್ರಾಹೀನತೆ, ಮಾನಸಿಕ ಒತ್ತಡ, ತಲೆನೋವು, ದೃಷ್ಟಿ ದೋಷಗಳಂತಹ ಸಮಸ್ಯೆಗಳು ಎದುರಾಗುತ್ತವೆ.ಕೀಳು ಅಭಿರುಚಿಯ ಕಾರ್ಯಕ್ರಮಗಳು,ಸಿನಿಮಾಗಳು ನಮ್ಮ ಸಂಸ್ಕೃತಿಯನ್ನು ಹಾಳು ಮಾಡುತ್ತಿವೆ. ಅಂಧಾನುಕರಣೆಯಿಂದ ವಿದೇಶಿ ಸಂಸ್ಕೃತಿಯ ದಾಸರಾಗುತ್ತಿದ್ದೇವೆ. ಕ್ರೌರ್ಯ, ದಬ್ಬಾಳಿಕೆ, ಹಿಂಸೆ, ಅನ್ಯಯ,ಅಶ್ಲೀಲತೆಯನ್ನು ವೈಭವೀಕರಿಸುವ ಕಾರ್ಯಕ್ರಮಗಳು ಬಿತ್ತರಗೊಂಡು ಅಪ್ರಬುದ್ಧರು ನೋಡಿ ಸಮಾಜದಲ್ಲಿ ಅತ್ಯಾಚಾರ, ಕೊಲೆ, ಮೋಸ ವಂಚನೆ ಸಮಾಜದಲ್ಲಿ ಹೆಚ್ಚಾಗುತ್ತಿದೆ. ವಿದ್ಯಾರ್ಥಿಗಳು ಟಿ.ವಿ. ವೀಕ್ಷಣೆಯಲ್ಲಿ ತೊಡಗಿ ಸೋಮಾರಿಗಳಾಗಿ ಬದುಕನ್ನು ಹಾಳು ಮಡಿಕೊಳ್ಳುತ್ತಾರೆ. ದೂರದರ್ಶನ ದಿಂದ ಶಬ್ದಮಾಲಿನ್ಯ ಉಂಟಾಗುತ್ತದೆ. ಸತತವಾಗಿ ದೂರದರ್ಶನ ವೀಕ್ಷಿಸುವುದರಿಂದ ಅಮೂಲ್ಯ ಸಮಯ ಮತ್ತು ವಿದುಚ್ಛಕ್ತಿ ಅಭಾವ ಉಂಟಾಗುತ್ತದೆ.

ಹೀಗೆ ಕೈಯಲ್ಲಿರುವ ಬೆಂಕಿಯಿಂದ ಒಲೆ ಹೋತ್ತಿಸಬಹುದು, ಮನೆಯನ್ನೂ ಸುಡಬಹುದು ಹಾಗೆ ದೂರದರ್ಶನದಿಂದ ಒಳಿತು ಕೆಡಕುಗಳೆರಡೂ ಉಂಟು .ಆದರೆ ಉತ್ತಮ ಕಾರ್ಯಕ್ರಮಗಳನ್ನು ನೋಡುವ ಕೆಟ್ಟದ್ದನ್ನು ತಿರಸ್ಕರಿಸುವ ಗುಣ ಸ್ವಭಾವವನ್ನು ಬೆಳಸಿಕೊಂಡರೆ ದೂರದರ್ಶನವನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದು.

- ದಿನಪತ್ರಿಕೆ:

ಆಧುನಿಕ ಜಗತ್ತಿನ ಪ್ರಗತಿಗೆ ಸಮೂಹ ಮಾಧ್ಯಮಗಳ ಕೊಡುಗೆ ಅಪಾರವಾಗಿದೆ. ಪ್ರಪಂಚದ ವ್ಯವಹಾರವನ್ನು ತಿಳಿಯಲು ಬಳಸಿಕೊಳ್ಳುವ ಮೂಲ ಸಾಧವನವೇ ವೃತ್ತ ಪತ್ರಿಕೆ.ಭಾರತದಲ್ಲಿ ಪ್ರಕಟವಾದ ಮೊದಲ ಪತ್ರಿಕೆ ದಿ ಬೆಂಗಾಲ್ ಗೆಜೆಟ್(1780) ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ

ನಮ್ಮ ದೇಶದಲ್ಲಿ ದಿನಪತ್ರಿಕೆಗಳು ಆಯಾ ಪ್ರಾದೇಶಿಕ ಭಾಷೆಗಳಲ್ಲಿ, ರಾಷ್ಟ್ರಭಾಷೆಯಲ್ಲಿ, ಆಂಗ್ಲಭಾಷೆಯಲ್ಲಿ ಇರುತ್ತದೆ. ಪ್ರಚಲಿತ ವಿದ್ಯಮಾನಗಳ ಅರಿವು ಪತ್ರಿಕೆಗಳ ಮೂಲಕ ಆಗುತ್ತದೆ.ವೃತ್ತ ಪತ್ರಿಕೆಯಲ್ಲಿ ಕೆಲವೊಂದು ವಿಶೇಷ ಅಂಕಣಗಳು ಜ್ಞಾನದ ಹಸಿವನ್ನು ನೀಗಿಸಲು ಮಾರ್ಗದರ್ಶಿಗಳಾಗುತ್ತವೆ. ಕ್ರೀಡಾಲೋಕ, ವಾಣಿಜ್ಯ, ಸಾಂಸ್ಕೃತಿಕ, ಸಾಹಿತ್ಯಿಕ, ರಾಜಕೀಯ, ಆಧ್ಯಾತ್ಮಿಕ,ಸಿನಿಮಾ,ಸಂಗೀತ,ಐತಿಹಾಸಿಕ,ಕರ್ನಾಟಕ ದರ್ಶನ,ವಿವಿದ ವಸ್ತುಗಳ ಜಾಹಿರಾತು,ಯುವಜನ, ಶಿಕ್ಷಣ ಕುರಿತಾದ ಅಂಕಣಗಳು ಓದುಗರ ಮನಸ್ಸನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆ.

ಪತ್ರಿಕೆಗಳ ಮೂಲಕ ಪ್ರಜೆಗಳು ತಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ತಿಳಿಸಬಹುದಾಗಿದೆ. ವೃತ್ತ ಪತ್ರಿಕೆಗಳು ವಧೂ–ವರರ ಮಾಹಿತಿ ಮತ್ತು ನಿರುದ್ಯೋಗಿಗಳಿಗೆ ಉದ್ಯೋಗದ ಮಾಹಿತಿ ನೀಡುತ್ತದೆ. ಸಾಮಾಜಿಕ ಬದಲಾವಣೆಗಳನ್ನು ತರುವಲ್ಲಿ ಪತ್ರಿಕೆಗಳ ಪಾತ್ರ ಮಹತ್ವದ್ದಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ, ಮಾಹಿತಿ ತಂತ್ರಜ್ಞಾನ, ಬಾಹ್ಯಾಕಾಶವಿಜ್ಞಾನ, ವೈದ್ಯಕೀಯ ಮುಂತಾದ ಕ್ಷೇತ್ರಗಳಲ್ಲಿನ ದೇಶದ ನಾನಾ ಮೂಲೆಗಳಲ್ಲಿ ನಡೆದ ಸಂಶೋಧನೆಗಳನ್ನು ತಿಳಿಯಬಹುದು. ವರ್ತಮಾನ ಪತ್ರಿಕೆಗಳು ನಮ್ಮ ದೈನಂದಿನ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದರೆ ತಪ್ಪಾಗಲಾರದು

- ರೇಡಿಯೋ:

ಇಟಲಿ ದೇಶದ ಮಾರ್ಕೋನಿ 1901ರಲ್ಲಿ ರೇಡಿಯೋವನ್ನು ಕಂಡು ಹಿಡಿದನು. ರೇಡಿಯೋಕ್ಕಿಂತ ಸುಂದರ ಪದ ಆಕಾಶವಾಣಿ ಇದು ಧ್ವನಿ ಪ್ರಸಾರ ಮಾಧ್ಯಮ.ಭಾರತದಲ್ಲಿ 1930ರಲ್ಲಿ ಆಲ್ ಇಂಡಿಯಾ ರೇಡಿಯೋ ಪ್ರಾರಂಭವಾಯಿತು.ಹಳ್ಳಿಗಳನ್ನೇ ಒಳಗೊಂಡಿರುವ ಭಾರತದಂತಹ ದೇಶದಲ್ಲಿ ಜನರನ್ನು ಶಿಕ್ಷಿತರನ್ನಾಗಿ ಮಾಡಲು ಇದು ಅತ್ಯಂತ ಉಪಕಾರಿಯಾಗಿದೆ ಪ್ರಾಥಮಿಕ, ಪ್ರೌಢಶಾಲೆ, ವಿಶ್ವವಿದ್ಯಾಲಯ, ಎನ್.ಸಿ.ಇ.ಆರ್.ಟಿ.ಯ ಕಾರ್ಯಕ್ರಮಗಳು ಬಿತ್ತರವಾಗುವುದು ಆಕಾಶವಾಣಿಯಲ್ಲಿಯೇ. ದಿನವೂ ರೇಡಿಯೋದಲ್ಲಿ ವಾರ್ತೆಗಳು,ಸಂಗೀತ,ಕಲೆ,ಹೊಸಹೊಸ ಹಾಡುಗಳನ್ನು ಕೇಳಬಹುದು. ವಿದ್ಯಾಥಿಗಳಿಗೆ ನೇರ ಪೋನ್–ಇನ್ ಕಾರ್ಯಕ್ರಮಗಳಿಂದ ವಿಷಯ ತಜ್ಞರಿಂದ ತಮ್ಮ ಸಮಸ್ಯೆಗಳಿಗೆ ಉತ್ತರ

ಪಡೆಯಬಹುದು.ರೈತರಿಗೆ ಕೃಷಿ ತಜ್ಞರಿಂದ ಸಲಹೆ ಹಾಗೂ ಅನ್ನದಾತ ಕಾರ್ಯಕ್ರಮಗಳು ತುಂಬ ಉಪಯುಕ್ತವಾಗಿವೆ.

ವೈದ್ಯರು ನಡೆಸಿಕೊಡುವ ಆರೋಗ್ಯ ಕಾರ್ಯಕ್ರಮಗಳು, ಸಂಗೀತ ಪ್ರಿಯರಿಗಾಗಿ ನಾಟಕ,ಕಥೆ,ಸಾಹಿತ್ಯ, ಸಂಗೀತ, ಹರಿಕಥೆ, ಚಿತ್ರಗೀತೆ ಭಕ್ತಿಗೀತೆಗಳು,ಹರಟೆ, ವಿಚಾರ ಮಂಥನ ಮುಂತಾದ ಕಾರ್ಯಕ್ರಮಗಳು ಜನರಿಗೆ ಹಿತ ಹಾಗೂ ಮನರಂಜನೆ ನೀಡುತ್ತವೆ ಮೀನುಗಾರರಿಗೆ ಹವಮಾನ, ಉಷ್ಣಾಂಶ, ಮಳೆ, ಬಿರುಗಾಳಿಯ ಬಗ್ಗೆ ಮಾಹಿತಿಯನ್ನು ಕೇಳಿ ತಮ್ಮ ಕೆಲಸ ಕಾರ್ಯಗಳಲ್ಲಿ ಮುಂದುವರೆಯಲು ರೇಡಿಯೋ ಸಹಾಯಕವಾಗಿದೆ

- ಜಲ ಸಂರಕ್ಷಣೆ:

ಭೂಮಿಯ ಶೇ 71 ರಷ್ಟು ಮೇಲ್ಮೈ ನೀರಿನಿಂದ ಆವರಿಸಿದೆ. ನೀರು ನೈಸರ್ಗಿಕವಾಗಿಯೇ ಪುನರಾವರ್ತಿತ ವಾಗುತ್ತದೆ. ಮಳೆಯ ಬಹುಪಾಲು ನೀರು ಭೂಮಿಯಲ್ಲಿ ಹಿಂಗಿಹೋಗುತ್ತದೆ. ಉಳಿದ ನೀರು ಹರಿದು ಸಾಗರವನ್ನು ಸೇರುತ್ತದೆ. ಅದರಲ್ಲಿ ಸ್ವಲ್ಪ ಭಾಗ ಮಾತ್ರ ಕುಡಿಯಲು ದೊರೆಯುತ್ತದೆ. ಭೂಮಿಯ ಮೇಲಿರುವ ಶುದ್ಧವಾದ ಸಿಹಿ ನೀರು 1% ಮಾತ್ರ ಆದ್ದರಿಂದ ನೀರನ್ನು ಉಳಿಸುವ ಹಾಗೂ ಸಂರಕ್ಷಿಸುವ ಜವಾಬ್ದಾರಿಅತ್ಯವಶ್ಯಕವಾಗಿದೆ. ಭೂಮಿಯ ಮೇಲಿನ ಈ 1% ನೀರೂ ಸಹ ಮಲಿನಗೊಳ್ಳುತ್ತಿದೆ. ಅದರ ಪರಿಣಾಮ ಮಲೇರಿಯಾ, ಚಿಕನ್ ಗುನ್ಯ, ಡೆಂಗ್ಯೂ, ವಿಷಮಶೀತ ಜ್ವರದಂತಹ ಮಾರಣಾಂತಿಕ ಖಾಯಿಲೆಗಳಿಗೆ ಮಾನವ ತುತ್ತಾಗುತ್ತಿದ್ದಾನೆ. ಇಂತಹ ಜಲಮಾಲಿನ್ಯವನ್ನು ತಡೆಗಟ್ಟಿ ನೀರಿನ ಸಂರಕ್ಷಣೆಯಾಗಬೇಕಾಗಿದೆ

ಜಲ ಸಂರಕ್ಷಣೆಯ ವಿಧಾನಗಳೆಂದರೆ

ಕಾರ್ಖಾನೆಗಳಿಂದ ನೀರು ನದಿಗಳಿಗೆ ಸೇರದಂತೆ ನೋಡಿಕೊಳ್ಳಬೇಕು.ನೀರನ್ನು ವ್ಯರ್ಥ ಮಾಡದಂತೆ ಮಿತವಾಗಿ ಬಳಸಬೇಕು.ನೀರಿನ ಮೂಲದ ಬಳಿ ಕಸ,ಕಡ್ಡಿ ತ್ಯಜ್ಯ ವಸ್ತುಗಳನ್ನು ಎಸೆಯಬಾರದು. ಕುಡಿಯುವ ನೀರಿನ ಬಳಿ ಕೆರೆಗಳಲ್ಲಿ ಬಟ್ಟೆ ತೊಳೆಯುವುದು,ಸ್ನಾನ ಮಾಡುವುದು,ದನಗಳ ಮೈ ತೊಳೆಯುವುದು, ಪಾತ್ರೆ ತೊಳೆಯುವುದು, ಮಲ ಮೂತ್ರ ವಿಸರ್ಜಿಸುವುದನ್ನು ತಡೆಗಟ್ಟಬೇಕು. ಮಳೆ ಕೊಯ್ಲು ಮಾಡುವುದು ಅಂದರೆ ಬೀಳುವ ಮಳೆಯ ನೀರನ್ನು ವ್ಯರ್ಥವಾಗಿ ಹರಿಯಲು ಬಿಡದೆ ಅದನ್ನು ತೊಟ್ಟಿಗಳಲ್ಲಿ, ಬಾವಿಗಳಲ್ಲಿ, ಭೂಮಿಗೆ ಹಿಂಗಿಸುವುದರ ಮೂಲಕ ಅಂತರ್ಜಲ ಹೆಚ್ಚಿಸಬೇಕು.

ಜಲಸಂರಕ್ಷಣೆಯ ಬಗ್ಗೆ ಜನಜಾಗೃತಿ ಮೂಡಿಸುವುದು.ಅರಣ್ಯ ಬೆಳೆಸುವುದು, ಜನಸಂಖ್ಯೆನಿಯಂತ್ರಿಸುವುದು. ಹೀಗೆ ನಾವು ವಿವಿದೋದ್ದೇಶ ಯೋಜನೆಗಳಿಗೆ ಬಳಸುತ್ತಿರುವ ನೀರನ್ನು ಕುಡಿಯುವುದಕ್ಕೆ, ಜಲವಿದ್ಯುಚ್ಛಕ್ತಿಗೆ, ಮುಂದಿನ ಪೀಳಿಗೆಗಾಗಿ ಸಂರಕ್ಷಿಸದೇ ಹೋದರೆ ಇಡೀ ಮನುಕುಲ ಜಲ ಕ್ಷಾಮದಿಂದ ವಿನಾಶವಾಗುವುದು ಖಂಡಿತ ಆದ್ದರಿಂದ ಜಲ ಸಂರಕ್ಷಣೆ ಪ್ರತಿಯೊಬ್ಬ ನಾಗರಿಕನು ಮಡಲೇಬೇಕಾದ ಅನಿವಾರ್ಯತೆ ಬಹಳಷ್ಟಿದೆ.

ಉನ್ನತ ವ್ಯಾಸಂಗಕ್ಕಾಗಿ ನೀವು ಮೈಸೂರಿಗೆ ತೆರಳುತ್ತಿರುವ ಕಾರಣ ನೀಡಿ,ನಿಮ್ಮ ವರ್ಗಾವಣೆ ಪತ್ರವನ್ನು (ಟಿ.ಸಿ) ಕೊಡವಂತೆ ಕೋರಿ ನಿಮ್ಮ ಮುಖ್ಯೋಪಾಧ್ಯಾಯರಿಗೆ ಒಂದು ಪತ್ರ ಬರೆಯಿರಿ

ಇಂದ:

ಅರುಣ 10ನೇ ತರಗತಿ
ಸರ್ಕಾರಿ ಪ್ರೌಢಶಾಲೆ
ಕೆ.ಆರ್.ಪುರ

ಗೆ:

ಮುಖ್ಯೋಪಾಧ್ಯಾಯರಿಗೆ
ಸರ್ಕಾರಿ ಪ್ರೌಢಶಾಲೆ
ಕೆ.ಆರ್.ಪುರ

ಮಾನ್ಯರೆ,

ವಿಷಯ: ವರ್ಗಾವಣೆ ಪತ್ರ (ಟಿ.ಸಿ) ಕೊಡವಂತೆ ಕೋರಿ ಅರ್ಜಿ

ಅರುಣನಾದ ನಾನು ಇದೇ ಶಾಲೆಯಲ್ಲಿ ಕಳೆದ ಮೂರು ವರ್ಷಗಳಿಂದ ಓದುತ್ತಿರುವುದು ಸರಿಯಷ್ಟೆ. ಕಳೆದ ಮಾರ್ಚ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರತಮ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದೇನೆ. ಈಗ ನಾನು ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ತೆರಳುತ್ತಿದ್ದೇನೆ ಆದ್ದರಿಂದ ನನಗೆ ನನ್ನ ವರ್ಗಾವಣೆ ಪತ್ರ (ಟಿ.ಸಿ) ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಸ್ಥಳ: ಮೈಸೂರು
ದಿನಾಂಕ: 15–6–2016

ಇಂತಿ ನಿಮ್ಮ ವಿಧೇಯ ವಿದ್ಯಾರ್ಥಿ
(ಸಹಿ/–)
ಅರುಣ

ನೀವು ಹುಬ್ಬಳ್ಳಿಯ ರಾಣಿ ಚೆನ್ನಮ್ಮ ಬಡಾವಣೆಯಲ್ಲಿ ವಾಸಿಸುತ್ತಿರುವ ರಮ್ಯ/ರಮೇಶ ಎಂದು ತಿಳಿದು ಮಹಾನಗರ ಪಾಲಿಕೆಯ ಆಯುಕ್ತರಿಗೆ ರಸ್ತೆ ರಿಪೇರಿ ಬಗ್ಗೆ ಮನವಿ ಪತ್ರ ಬರೆಯಿರಿ

ಇಂದ:

ರಮೇಶ
ರಾಣಿಚೆನ್ನಮ್ಮ ಬಡಾವಣೆ
ಹುಬ್ಬಳ್ಳಿ

ಗೆ:
ಆಯುಕ್ತರು
ಮಹಾನಗರ ಪಾಲಿಕೆ
ಹುಬ್ಬಳ್ಳಿ.

ಮಾನ್ಯರೆ,

ವಿಷಯ: 'ನಮ್ಮ ಬಡವಣೆಯ ರಸ್ತೆ ರಿಪೇರಿ ಮಾಡಿಸುವ ಬಗ್ಗೆ'

ರಾಣಿ ಚೆನ್ನಮ್ಮ ಬಡಾವಣೆಯ ರಮೇಶನಾದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಮ್ಮ ಬಡಾವಣೆಯ ರಸ್ತೆಯು ತೀರ ಹದಗೆಟ್ಟಿದ್ದು ಕಚ್ಚ ರಸ್ತೆಯಿಂದ ಕೂಡಿದೆ. ಅನೇಕ ವಾಹನಗಳು ಅಪಘಾತಕ್ಕೀಡಾಗಿವೆ. ಮಕ್ಕಳು, ವಯಸ್ಸಾದವರು, ಹೆಂಗಸರು ಓಡಾಡುವುದು ತುಂಬ ಕಷ್ಟವಾಗಿದೆ. ಜೊತೆಗೆ ಅತಿಯಾಗಿ ವಾಹನಗಳು ಓಡಾಡುವುದರಿಂದ ಧೂಳು ಬರುತ್ತಿದ್ದು ಕೆಲವರಿಗೆ ಅಸ್ತಮಾ ಖಾಯಿಲೆ ಬಂದಿದೆ. ಆದುದರಿಂದ ದಯವಿಟ್ಟು ರಸ್ತೆ ರಿಪೇರಿ ಮಾಡಿಸ ಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಸ್ಥಳ: ಹುಬ್ಬಳ್ಳಿ

ಇಂತಿ ನಿಮ್ಮ ವಿಶ್ವಾಸಿ,

ದಿನಾಂಕ: 15–12–2015

(ಸಹಿ/–)

ರಮೇಶ

ನಿಮ್ಮ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡುವಂತೆ ಕೋರಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರಿಗೊಂದು ಮನವಿ ಪತ್ರ ಬರೆಯಿರಿ

ಇಂದ :
ಸೂರ್ಯಕಾಂತ್
ರಾಗಲಪರ್ವಿ
ಸಿಂಧನೂರು (ತಾ)

ಗೆ:
ಅಧ್ಯಕ್ಷರು
ಜಿಲ್ಲಾ ಪಂಚಾಯ್ತಿ ಕಛೇರಿ
ರಾಯಚೂರು

ಮಾನ್ಯರೆ,

ವಿಷಯ: "ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಬಗ್ಗೆ"

ಮೇಲ್ಕಾಣಿಸಿದ ರಾಗಲಪರ್ವಿ ಗ್ರಾಮದ ಸಮಸ್ತರ ಪರವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ ಈ ಸಲ ಮಳೆಗಾಲದಲ್ಲಿ ಸರಿಯಾದ ಮಳೆ ಆಗದೆ ಕುಡಿಯುವ ನೀರಿನ ಬಾವಿ, ಕೈಪಂಪಿನ ನೀರಿನ ಮಟ್ಟ ಕೆಳಕ್ಕೆ ಹೋಗಿ ಜನಸಾಮಾನ್ಯರಿಗೆ, ದನಕರುಗಳಿಗೆ ಕುಡಿಯಲೂ ನೀರಿಲ್ಲದೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಮಳೆಗಾಲ ಪ್ರಾರಂಭವಾಗುವವರೆಗೂ ನಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ಸ್ಥಳ: ರಾಗಲಪರ್ವಿ
ದಿನಾಂಕ: 15–1–2016

ಇಂತಿ ನಿಮ್ಮ ವಿಶ್ವಾಸಿ,
(ಸಹಿ/–)
ಸೂರ್ಯಕಾಂತ್

ನಿಮ್ಮನ್ನು  ಬೆಂಗಳೂರಿನ ವಿಜಯನಗರದ ಬಡಾವಣೆಯ ಸುಜಯ್ ಎಂದು ಭಾವಿಸಿ ದಾವಣಗೆರೆಯ ಹೊಸನಗರದಲ್ಲಿ  ವಾಸವಾಗಿರುವ ನಿಮ್ಮ ತಾಯಿಯವರಿಗೆ ಶಾಲಾ ವಾರ್ಷಿಕೋತ್ಸವಕ್ಕೆ ಆಗಮಿಸುವಂತೆ ವಿನಂತಿಸಿ ಪತ್ರ ಬರೆಯಿರಿ

ಕ್ಷೇಮ ಶ್ರೀ ಇಂದ

ಸುಜಯ್
ವಿಜಯನಗರದ ಬಡಾವಣೆ
ಬೆಂಗಳೂರು
ದಿ: 12/12/2013

ಮಾತೃಶ್ರೀಯವರಿಗೆ ನಿಮ್ಮ ಮಗ ಸುಜಯ್ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು
ನಾನು ಇಲ್ಲಿ ಕ್ಷೇಮವಾಗಿದ್ದೇನೆ.
ತಾವೂ  ಕೂಡ ಎಲ್ಲರೂ ಕ್ಷೇಮವಾಗಿದ್ದೀರೆಂದು ಭಾವಿಸಿಕೊಂಡಿದ್ದೇನೆ.

ಈ ಪತ್ರ ಬರೆದ ಉದ್ದೇಶವೇನೆಂದರೆ ನನ್ನ ಅಭ್ಯಾಸ ಚೆನ್ನಾಗಿ ಸಾಗಿದೆ. ಶಾಲೆಯಲ್ಲಿ ವಾರ್ಷಿಕೋತ್ಸವ  ಚಟುವಟಿಕೆಗಳು ಭರದಿಂದ ಸಾಗಿದೆ.ಮುಂದಿನ ತಿಂಗಳು ಆರನೇ ತಾರೀಕಿನಂದು ನಮ್ಮ ಶಾಲೆಯಲ್ಲಿ ವಾಷಿಕೋತ್ಸವವನ್ನು ಹಮ್ಮಿಕೊಂಡಿದ್ದಾರೆ. ನಾನು ನಾಟಕದಲ್ಲಿ ಭಾಗವಹಿಸಿದ್ದೇನೆ ಕ್ರೀಡೋತ್ಸವದ ಬಹುಮಾನಗಳನ್ನೂ ಅಂದೇ ವಿತರಿಸುತ್ತಿದ್ದಾರೆ. ಆ ದಿನ ನೀವೂ ಇದ್ದರೆ ತುಂಬ ಚೆನ್ನಾಗಿರುತ್ತದೆ. ಆದ್ದರಿಂದ ನೀವು ತಪ್ಪದೆ ಬರಬೇಕು.

ತೀರ್ಥರೂಪ ತಂದೆಯವರಿಗೆ ನನ್ನ ಸಾಷ್ಟಾಂಗ ನಮಸ್ಕಾರ ತಿಳಿಸು ಮನೆಯಲ್ಲಿ ಎಲ್ಲರಿಗೂ ನನ್ನ ಸವಿ ನೆನಪುಗಳು

ಇಂತಿ ನಿಮ್ಮ ಪ್ರಿತಿಯ ಮಗ

ಗೆ: (ಸಹಿ)

ಸರೋಜಮ್ಮ
ಹೊಸನಗರ ಬಡಾವಣೆ
ದಾವಣಗೆರೆ

ಸುಜಯ್

ನೀವು ಸರ್ಕಾರಿ ಪ್ರೌಢಶಾಲೆ,ಮಲ್ಲೇಶ್ವರಂ,ಬೆಂಗಳೂರು ಇಲ್ಲಿನ ವಿದ್ಯಾರ್ಥಿ ಗೌತಮ್/ತನ್ಮಯಿ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಚರಣೆ ಕುರಿತ ನಿಮ್ಮ ಗೆಳೆಯ/ಗೆಳತಿಗೆ ಪತ್ರ ಬರೆಯಿರಿ

ಕ್ಷೇಮ ಶ್ರೀ ಇಂದ

ಗೌತಮ್

ಸರ್ಕಾರಿಪ್ರೌಢಶಾಲೆ,ಮಲ್ಲೇಶ್ವರಂ

ಬೆಂಗಳೂರು

ದಿ: 12/12/2015

ಪ್ರೀತಿಯ ಗೆಳೆಯ ಸಂತೋಷನಿಗೆ ನಿನ್ನ ಗೆಳೆಯನಾದ ತನ್ಮಯಿ ಮಾಡುವ ವಂದನೆಗಳು. ನಾನು ಇಲ್ಲಿ ಕ್ಷೇಮವಾಗಿದ್ದೇನೆ. ನಿನ್ನ ಕ್ಷೇಮ ಸಮಾಚಾರವನ್ನು ಪತ್ರ ಬರೆದು ತಿಳಿಸು.

ಈ ಪತ್ರ ಬರೆದ ಉದ್ದೇಶವೇನೆಂದರೆ ನಮ್ಮ ಶಾಲೆಯಲ್ಲಿ ಈ ವರ್ಷ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದ ಅನುಭವವನ್ನು ನಿನ್ನೊಡನೆ ಹಂಚಿಕೊಳ್ಳಲು ಬಯಸುತ್ತೇನೆ. ನಾವೆಲ್ಲ ಶಾಲಾ ಸಮವಸ್ತ್ರ ಧರಿಸಿ ಮುಂಜಾನೆ 8.00 ಗಂಟೆಗೆ ನಾವೆಲ್ಲರೂ ಶಾಲೆಯ ಆವರಣದಲ್ಲಿ ಹಾಜರಾದೆವು ಸ್ವಾತಂತ್ರ್ಯ ಹೋರಾಟಗಾರರಾದ ಶ್ರಿ ನಂಜುಂಡಪ್ಪನವರು ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಧ್ವಜಾರೋಹಣ ನಂತರ ನಾವೆಲ್ಲ ವಂದೇಮಾತರಂ ಗೀತೆ ಹಾಡಿದೆವು.ಸ್ವಾತಂತ್ರ್ಯ ಪಡೆಯಲು ಹೋರಾಟಮಾಡಿದ ಮಹಾ ಪುರುಷರ ಬಗ್ಗೆ ಮುಖ್ಯ ಅತಿಥಿಗಳು ತಿಳಿಸಿಕೊಟ್ಟರು. ಭರತಮಾತೆಯ ಏಳಿಗೆಗಾಗಿ ನಾವೂ ಶ್ರಮಿಸಬೇಕೆಂದು ನಿರ್ಧರಿಸಿದೆವು.ಈ ಕಾರ್ಯಕ್ರಮವು ಅವಿಸ್ಮರಣೀಯವಾಗಿ ನನ್ನ ಮನದಲ್ಲಿ ಉಳಿದಿದೆ. ನಿನ್ನ ಮನೆಯಲ್ಲಿ ಎಲ್ಲರಿಗೂ ನನ್ನ ನಮಸ್ಕಾರಗಳನ್ನು ತಿಳಿಸು

ಇಂತಿ ನಿಮ್ಮ ಪ್ರೀತಿಯ ಮಿತ್ರ

(ಸಹಿ)

ಗೌತಮ್

ಗೆ:

ಸಂತೋಷ

ಕುವೆಂಪು ಬಡಾವಣೆ

ತೀರ್ಥಹಳ್ಳಿ

ನೀವು ಚಿತ್ರದುರ್ಗ ಕೋಟೆ ಬಡಾವಣೆಯ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಚೇತನ ಎಂದು ತಿಳಿದು ಶೈಕ್ಷಣಿಕ ಪ್ರವಾಸಕ್ಕಾಗಿ 1000 ರೂ ಕಳುಹಿಸಿಕೊಡುವಂತೆ ಕೋರಿ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ

ಕ್ಷೇಮ ಶ್ರೀ ಇಂದ

ಚೇತನ

ಸರ್ಕಾರಿಪ್ರೌಢಶಾಲೆ,

ಕೋಟೆ ಬಡಾವಣೆ

ಚಿತ್ರದುರ್ಗ

ದಿ: 12/12/2015

ಮಾತೃಶ್ರೀಯವರಿಗೆ ನಿಮ್ಮ ಮಗ ಚೇತನ ಮಾಡುವ ಶಿರಸಾಷ್ಟಾಂಗ ನಮಸ್ಕಾರಗಳು

ನಾನು ಇಲ್ಲಿ ಕ್ಷೆಮವಾಗಿದ್ದೇನೆ. ತಾವೂ ಕೂಡ ಎಲ್ಲರೂ ಕ್ಷೇಮವಾಗಿದ್ದೀರಾ ಎಂದು ಭಾವಿಸಿಕೊಂಡಿದ್ದೇನೆ. ಈ ಪತ್ರ ಬರೆದ ಉದ್ದೇಶವೇನೆಂದರೆ ಇದೇ ಡಿಶಂಬರ್‌ನಲ್ಲಿ ನಮ್ಮ ಶಾಲೆಯಲ್ಲಿ ಶೈಕ್ಷಣಿಕ ಪ್ರವಾಸ ಏರ್ಪಡಿಸಿದ್ದಾರೆ.ಹಳೆಬೀಡು ,ಬೇಲೂರು, ಧರ್ಮಸ್ಥಳ, ಶೃಂಗೇರಿ, ಉಡುಪಿ, ಹೊರನಾಡು, ಗೋಕರ್ಣ, ಮುರುಡೇಶ್ವರ,ಇನ್ನು ಹಲವರು ಸ್ಥಳಗಳಿಗೆ ಶೈಕ್ಷಣಿಕ ಪ್ರವಾಸ ಹೊರಟಿದ್ದಾರೆ ನನ್ನ ಸ್ನೇಹಿತರೆಲ್ಲರೂ ಹೋಗುತ್ತಿದ್ದಾರೆ, ನಮ್ಮ ಶಿಕ್ಷಕರು ಎಲ್ಲರು ಕಡ್ಡಾಯವಾಗಿ ಬರುವಂತೆ ಹೇಳಿದ್ದಾರೆ ಆದ್ದರಿಂದ ಪ್ರವಾಸಕ್ಕೆ ಹೋಗಲು ನೀವು ನನಗೆ ಅನುಮತಿ ನೀಡಿ ಪ್ರವಾಸಕ್ಕಾಗಿ 1000 ರೂಗಳನ್ನು ನನಗೆ ಕಳುಹಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮನೆಯಲ್ಲಿ ಎಲ್ಲರಿಗೂ ನನ್ನ ಸವಿ ನೆನಪುಗಳು

ಇಂತಿ ನಿಮ್ಮ ಪ್ರೀತಿಯ ಮಗ

(ಸಹಿ)

ಗೆ:

ಬಸವರಾಜಪ್ಪ

ಹಿರೇಕಂದವಾಡಿ ಚೇತನ

ಹೊಳಲ್ಕೆರೆ.ತಾ.